# ದೇವರ ದಾಸಿಮಯ್ಯನ

## ವಚನಗಳು.

ಗ್ರಂಥಾಲಯ
ಬಿ. ಎಲ್. ಡಿ. ಇ. ಸಂಸ್ಥೆ
ಕನ್ನಡ ವಿ. ವಿ. ... ಮಾನ್ಯತೆ ಪಡೆದ

# ಪ್ರಸ್ತಾವನೆ.

ದಾಸಿಮಾರ್ಯನು ವೀರಶೈವರಲ್ಲಿ ಒಬ್ಬ ಪ್ರಸಿದ್ಧ ಶಿವಶರಣನಾಗಿದ್ದಾನೆ. ಇವನ ವಚನಗಳು ಅತ್ಯುತ್ಕೃಷ್ಟವಾಗಿದ್ದು ವಚನವಾಙ್ಮಯದಲ್ಲಿ ಅವುಗಳಿಗೆ ಅತ್ಯಂತ ಉನ್ನತಸ್ಥಾನವನ್ನು ಕೊಡಬಹುದಾಗಿದೆ. ಅವು ಸೂತ್ರರೂಪವಾಗಿದ್ದು ಬಹು ಅರ್ಥಗರ್ಭಿತವಾಗಿವೆ. ಲಲಿತವೂ ರಮಣೀಯವೂ ಅರ್ಥಬೋಧವೂ ಆದ ಅವನ ವಚನಗಳು ಸಂಕ್ಷಿಪ್ತವಾಗಿದ್ದರೂ ಸ್ಫುಟವಾದ ವಿಚಾರವುಳ್ಳವಾಗಿವೆ. ಅವುಗಳನ್ನು ಓದಿದೊಡನೆಯೇ ಅವು ಒಡಪಿನಂತೆ ಭಾಸವಾಗುತ್ತವೆ. ದೇವರದಾಸಿಮಯ್ಯನ ವಚನಗಳು ಕನ್ನಡಕ್ಕೆ ಅಲಂಕಾರ ಪ್ರಾಯವಾಗಿವೆಂದು ಹೇಳಲು ಏನೂ ಪ್ರತ್ಯವಾಯವಿಲ್ಲ.

ದೇವರ ದಾಸಿಮಯ್ಯನು ಬಸವನಕಿಂತಲೂ ಹಿಂದಿನವನೆಂಬುದು ಅನೇಕ ಆಧಾರಗಳಿಂದ ಈಗ ತಿಳಿದುಬಂದಿದೆ. ಪುರಾತನರಾದ ಇಂಥ ಶಿವಶರಣರ ಉಕ್ತಿಗಳು ಎಲ್ಲಿಯೂ ಗ್ರಂಥರೂಪವಾಗಿ ಒತ್ತಟ್ಟಿಗೆ ಸಿಗುವದಿಲ್ಲ. ದೇವರದಾಸಿಮಯ್ಯನ ವಚನಗಳ ಸ್ಥಿತಿಯಾದರೂ ಹೀಗೆಯೇ ಇದೆ. ಅವು ಬೇರೆ ಬೇರೆ ವಚನಸಂಗ್ರಹ ಗ್ರಂಥಗಳಲ್ಲಿ ಖಂಡಶಃ ಮಾತ್ರ ದೊರೆಯುತ್ತವೆ. ಈ ಸಂಗ್ರಹ ಗ್ರಂಥಗಳನ್ನು ನನಗೆ ಸಿಕ್ಕಷ್ಟವುಗಳನ್ನು ದೊರಕಿಸಿ ಅವುಗಳಲ್ಲಿಯ ವಚನಗಳನ್ನು ಆಯ್ದು ಒತ್ತಟ್ಟಿಗೆ ಸ್ಥಲಾನುಸಾರವಾಗಿ ಸೇರಿಸಿ ಈ ಗ್ರಂಥವನ್ನು ರಚಿಸಿದ್ದಾಗಿರುತ್ತದೆ. ದೇವರದಾಸಿಮಯ್ಯನ ಇನ್ನೂ ಅನೇಕ ವಚನಗಳು ಉಪಲಬ್ಧವಾಗಬಹುದು. ಅವು ಯಾರಿಗಾದರೂ ದೊರೆದಲ್ಲಿ ಅವುಗಳನ್ನು ಅವರು ನಮ್ಮ ಕಡೆಗೆ ಕಳಿಸಿಕೊಟ್ಟಲ್ಲಿ ನಾವು ಅವರಿಂದ ಬಹಳ ಉಪಕೃತರಾಗುವೆವು. ಮತ್ತು ಅವುಗಳನ್ನು ನಾವು ಈ ಗ್ರಂಥದ ಪುನರ್ಮುದ್ರಣದ ಕಾಲಕ್ಕೆ ಇದರಲ್ಲಿ ಸೇರಿಸುವೆವು

ದೇವರ ದಾಸಿಮಯ್ಯನ ವೃತ್ತಾಂತವನ್ನು ಅರುಹುವಂಥ ಕೆಲವು ಗ್ರಂಥಗಳಿವೆ. ಅವು ಯಾವವೆಂದರೆ:—(೧) ಬಸವಪುರಾಣದ ೫ನೇ ಸಂಧಿ, ಇದರಲ್ಲಿ ಜಯಸಿಂಹರಾಜನ ಆಸ್ಥಾನದಲ್ಲಿ ದಾಸಿಮಯ್ಯನಿಗೂ

ಜೈನರಿಗೂ ಆದ ವಾಗ್ವಾದಗಳ ವಿವರಣೆಯು ಇದೆ. (೨) ಭಾಮಿನೀ ಷಟ್ಪದಿಯಲ್ಲಿ ಬರೆದ ಈತನ ಒಂದು ಸಂಪೂರ್ಣ ಗ್ರಂಥವು ನಮಗೆ ಉಪಲಬ್ಧವಾಗಿದೆ. ಇದು ಸಂಸ್ಕೃತದ ಭಾಷಾಂತರವೆಂದು ಇದರಲ್ಲಿ ಹೇಳಲ್ಪಟ್ಟಿದೆ. ಆದರೆ ಈ ಸಂಸ್ಕೃತ ಗ್ರಂಥವು ನಮಗೆ ಸಿಕ್ಕಿಲ್ಲ. (೩) ಮನು ಪುರಾಣ ಇದರಲ್ಲಿ ದೇವರ ದಾಸಿಮಯ್ಯನ ಅವತಾರ ವರ್ಣನೆಯು ಇದೆ. (೪) ದೇವರ ದಾಸಿಮಯ್ಯನ ಪುರಾಣವೆಂದು ಇನ್ನೊಂದು ಗ್ರಂಥವುಂಟು. ಇದು ರಾಘವನೆಂಬವನಿಂದ ಬರೆಯಲ್ಪಟ್ಟಿದೆಯೆಂದು ಈ ಗ್ರಂಥದಲ್ಲಿ ಹೇಳಿದೆ.

ದೇವರ ದಾಸಿಮಯ್ಯನು ಕ್ರಿ. ಶ ೧೦೧೫ ರಿಂದ ೧೦೪೨ ರ ವರೆಗೆ ಆಳಿದ ಚಾಲುಕ್ಯರ ರಾಜನಾದ ಜಯಸಿಂಹನ ಕಾಲದಲ್ಲಿದ್ದನೆಂಬುದು ಈಗ ಸ್ಪಷ್ಟವಾಗುತ್ತದೆ. ಫ್ಲೀಟಸಾಹೇಬರು ಇಂಡಿಯನ್ನ ಅಂಟಿಕ್ವೇರಿ ವ್ಹಾ. ೧೯ನೇದ್ದರಲ್ಲಿ ಈತನು ಜಯಸಿಂಹನ ಕಾಲಕ್ಕಿರಬಹುದೆಂದು ಊಹಿಸಿದ್ದಾರೆ. ಹರಿಹರಾಚಾರ್ಯನು ತನ್ನ ಪಂಪಾಶತಕದಲ್ಲಿ ಪುರಾತನರ ಹೆಸರುಗಳಜೊತೆಗೆ ದಾಸಿಮಾರ್ಯನನ್ನೂ ಸೇರಿಸಿ ಉಲ್ಲೇಖಿಸಿದ್ದಾನೆ. ಈ ಹರಿಹರಾಚಾರ್ಯನು ಬಸವನಿಗಿಂತಲೂ ಹಿಂದಿನವನೆಂದು ಈಗ ತಿಳಿಯಲ್ಪಟ್ಟಿದೆ. (ಶಿವಾನುಭವದ ೧೧ನೇ ಸಂಚಿಕೆ ನೋಡಿರಿ.) ಅದರಂತೆಯೇ ಭೀಮಕವಿಯಾದರೂ ದಾಸಿಮಯ್ಯನನ್ನು ಶಿವಶರಣರೊಳಗೆಣಿಸಿ ಇವನ ಚರಿತ್ರೆಯನ್ನು ತನ್ನ ಬಸವಪುರಾಣದಲ್ಲಿ ಬರೆದಿದ್ದಾನೆ. ಬಸವೇಶ್ವರನಾದರೂ ತನ್ನ ವಚನಗಳಲ್ಲಿ ದಾಸಿಮಯ್ಯನನ್ನು ಕುರಿತು ಮೇಲಿಂದಮೇಲೆ ಉಲ್ಲೇಖಿಸಿದ್ದಾನೆ. ಉದಾ:— ಬಸವೇಶ್ವರನ ವಚನಗಳು ಪುಟ ೬೧. ೨೨೪, ೬೨, ೧೩, ೬೬, ೧ ಇತ್ಯಾದಿ ಇದರ ಮೇಲಿಂದ ದಾಸಿಮಾರ್ಯನು ಬಸವನಕಿಂತಲೂ ಹಿಂದಿನವನೆಂಬದು ಸ್ಪಷ್ಟವಾಗುತ್ತಿದೆ. ಈ ಸಂಗತಿಯು ಮಹತ್ವವಾದದ್ದು. ಇದರಿಂದ ವೀರಶೈವಧರ್ಮದ ಪ್ರಸಾರದ ಪ್ರಾರಂಭವು ಕರ್ನಾಟಕದಲ್ಲಿ ಬಸವನಕಿಂತಲೂ ೧೦೦, ೧೫೦ ವರ್ಷಗಳ ಮುಂಚೆಯೇ ಪ್ರಾರಂಭವಾಗಿರಬಹುದೆಂಬ ಊಹೆಗೆ ಆಸ್ಪದಕೊಡುತ್ತದೆ.

ದೇವರ ದಾಸಿಮಯ್ಯನ ಗ್ರಾಮವು ಮುದನೂರು. ಇದು ವಿಜಾಪುರ ಜಿಲ್ಹಾ ಸಿಂದಗಿ ಗ್ರಾಮದಿಂದ ೩೦ ಮೈಲುಗಳಮೇಲೆ ಇದೆ. ಇದು ಈಗ ಸುರಪುರ ತಾಲೂಕಿನಲ್ಲಿ ಸೇರ್ಪಡೆಯಾಗಿದೆ. ಈಗಲೂ ಈ



ಗ್ರಾಮವು ಅನೇಕ ದೇವಾಲಯಗಳಿಂದಲೂ ತೀರ್ಥಗಳಿಂದಲೂ ತುಂಬಿಕೊಂಡಿದ್ದು ಬಹು ಪವಿತ್ರಸ್ಥಾನವೆಂದು ತಿಳಿಯುತ್ತದೆ. ಇಲ್ಲಿಯ ದೇವಾಲಯಗಳಲ್ಲಿ ರಾಮನಾಥನ ದೇವಾಲಯವೇ ಮಹತ್ವವಾದದ್ದು. ಈ ಗ್ರಾಮದಲ್ಲಿ ಅನೇಕ ಶಿಲಾಶಾಸನಗಳು ಇನ್ನೂ ಉಪಲಬ್ಧವಿವೆ. ಈ ರಾಮನಾಥನೇ ದೇವರ ದಾಸಿಮಯ್ಯನ ಇಷ್ಟದೇವತೆಯಾಗಿರುತ್ತಾನೆ.

ದೇವರ ದಾಸಿಮಯ್ಯನು ಇದೇ ಗ್ರಾಮದಲ್ಲಿ ಕಾಮಯ್ಯ ಮತ್ತು ಶಂಕರಿ ಎಂಬ ಮಾತಾಪಿತೃಗಳುಳ್ಳವನಾಗಿ ನೆಯ್ಗೆಯ ಕಾಯಕವನ್ನು ಮಾಡುತ್ತಲಿದ್ದನು. ಇವನು ಪರಮ ಶಿವಭಕ್ತನಾಗಿ ಬಹು ಪ್ರಖ್ಯಾತಿಯನ್ನು ಹೊಂದಿದ್ದನು. ಈತನ ಹೆಂಡತಿಯ ಹೆಸರು ದುಗ್ಗಳೆಯು ಈಕೆಯ ತಾಯಿತಂದೆಗಳು ಮಲ್ಲಯ್ಯ ಮತ್ತು ಮಹಾದೇವಿ ಇವರ ಗ್ರಾಮವು ಗೊಬ್ಬರು ದೇವರ ದಾಸಿಮಯ್ಯನು ಲಗ್ನವಾಗುವ ಪೂರ್ವದಲ್ಲಿ ಬಹಳ ಶೋಧಮಾಡಿ ದುಗ್ಗಳೆಯನ್ನು ವರಿಸಿದನೆಂದು ಇವನ ಚರಿತ್ರೆಯಿಂದ ತಿಳಿದು ಬರುತ್ತದೆ. ದೇವರ ದಾಸಿಮಯ್ಯನು ತಂದ ಉಸುಕಿನಿಂದ ದುಗ್ಗಳೆಯು ಪಾದೋದಕ ಮಹಿಮೆಯಿಂದ ಅನ್ನವನ್ನು ಮಾಡಿ ದೇವರ ದಾಸಿಮಯ್ಯನಿಗೆ ಉಣಿಸಿದ್ದರಿಂದ ಆಕೆಯ ಶಿವಭಕ್ತಿಗೆ ಮೆಚ್ಚಿ ಅವನು ಆಕೆಯು ಲಗ್ನವಾದನು. ದಾಸಿಮಯ್ಯನು ತನ್ನ ಕಾಯಕವನ್ನು ಮಾಡುತ್ತಿರಲು ಅವನು ನೇಯ್ದ ಒಂದು ಬೆಲೆಯುಳ್ಳ ವಸ್ತ್ರವನ್ನು ಶಿವನು ಜಂಗಮನಾಗಿ ಬಂದು ಬೇಡಲು ದಾಸಿಮಯ್ಯನು ಅದನ್ನು ಅವನಿಗೆ ಅರ್ಪಿಸಿದನು. ಆಗ ಆ ಜಂಗಮನು ಅದನ್ನು ತೆಗೆದುಕೊಂಡು ಛಿಪ್ರೆ ಛಿಪ್ರೆಯಾಗಿ ಹರಿಯಲು ಅವನು ಅದಕ್ಕೆ ಚಿಂತಿಸದಿರಲು ಆಗ ಶಿವನು ಒಂದು ಹಿಡಿ ಧಾನ್ಯವನ್ನು ಕೊಡಲು ಆ ಧಾನ್ಯವನ್ನು ದುಗ್ಗಳೆಯು ಕಣಜದೊಳಗೆ ಇಡಲು ಅದೇ ತವನಿಧಿಯಾಯಿತು. ದೇವರ ದಾಸಿಮಯ್ಯನ ಈ ತವನಿಧಿಯನ್ನು ಕುರಿತು ಬಸವೇಶ್ವರನು ತನ್ನ ವಚನದಲ್ಲಿ ಬಹಳ ಸಾರೆ ಉಲ್ಲೇಖಿಸಿದ್ದಾನೆ.

ಈ ಕಾಲಕ್ಕೆ ಜಯಸಿಂಹನು ಹೊಟ್ಟಲಕೆರೆ ಎಂಬ ರಾಜಧಾನಿಯಲ್ಲಿ ರಾಜ್ಯವಾಳುತ್ತಿದ್ದನು. ಅಲ್ಲಿ ೭೦೦ ಬಸ್ತಿಗಳೂ ೨೦ ಸಾವಿರ ಜೈನರೂ ವಾಸವಾಗಿದ್ದರು. ಇವರ ಗುರುವೇ ಜಯಸಿಂಹನ ಗುರುವಾಗಿದ್ದನು. ಆದರೆ ಜಯಸಿಂಹನ ಹೆಂಡತಿಯಾದ ಸುಗ್ಗಳೆಯು ದೇವರ ದಾಸಿಮಯ್ಯನ ಶಿಷ್ಯಳಾಗಿದ್ದುಕೊಂಡು ಅತ್ಯಂತ ಶಿವಭಕ್ತಿಯಿಂದ ಆಚರಿಸುತ್ತಿದ್ದಳು. ಈ

ಸುಗ್ಗಳೆಯಾದರೂ ಆ ಕಾಲಕ್ಕೆ ಅತ್ಯಂತ ಪ್ರಸಿದ್ಧಳಾಗಿದ್ದಳು. ಆಕೆಯ ಉಲ್ಲೇಖವು ಹಾಸನ ಜಿಲ್ಹೆಯ ಬೇಲೂರ ಗ್ರಾಮದಲ್ಲಿಯ ಒಂದು ಶಿಲಾಲೇಖದಲ್ಲಿ ಇದೆ. ( ಶಿವಾನುಭವದ ೧೧ನೇ ಸಂಚಿಕೆ ಪುಟ ೪೬ ನೋಡಿರಿ. ) ಈ ಸುಗ್ಗಳೆಯು ಜಯಸಿಂಹನಲ್ಲಿದ್ದ ಜೈನಧರ್ಮದ ಮೋಹವನ್ನು ಬಿಡಿಸಬೇಕೆಂದು ಬಯಸಿ ದೇವರ ದಾಸಿಮಯ್ಯನನ್ನು ರಾಜಧಾನಿಗೆ ಬರಮಾಡಿಕೊಂಡಳು. ಆಗ ಅವನು ಜೈನರಗೂಡ ವಾದಿಸಿ ಜಯವನ್ನು ಪಡೆದನು. ಆ ಸಮಯದಲ್ಲಿ ದೇವರ ದಾಸಿಮಯ್ಯನು ಜೈನರು ತಂದ ಘಟಸರ್ಪನನ್ನು ಲಿಂಗವೆಂದು ಭಾವಿಸಿ ಅದನ್ನು ಲಿಂಗವಾಗಿ ಮಾಡಿ ಜಗತ್ತಿನಲ್ಲೆಲ್ಲ ಶಿವನಿದ್ದಾನೆಂಬದನ್ನು ಸಿದ್ಧಪಡಿಸಿದನು. ಅಲ್ಲಿ ಉದ್ಭವಿಸಿದ ಈ ಲಿಂಗವು ಉತ್ತರನಾಥಲಿಂಗನೆಂಬ ಹೆಸರಿನಿಂದ ಪ್ರಸಿದ್ಧವಾಯಿತು. ಈ ಪ್ರಕಾರ ಜೈನರು ಅಪಜಯವನ್ನು ಹೊಂದಲು ರಾಜನು ಶಿವ ಧರ್ಮವನ್ನು ಸ್ವೀಕರಿಸಿದನು. ಮತ್ತು ರಾಜಧಾನಿಯಲ್ಲಿದ್ದ ೭೦೦ ಬಸದಿಗಳನ್ನು ನಾಶ ಮಾಡಿದನು. ಇಷ್ಟೇ ಅಲ್ಲ ಅಲ್ಲಿದ್ದ ಎಲ್ಲ ಜೈನರೂ ದಾಸಿಮಯ್ಯನಿಂದ ಶಿವ ಸಂಸ್ಕಾರವನ್ನು ಹೊಂದಿದವರಾದರು.

ದೇವರ ದಾಸಿಮಯ್ಯನ ಉದಾತ್ತ ವಿಚಾರಗಳನ್ನು ವಾಚಕರು ಈ ಗ್ರಂಥದಲ್ಲಿ ಚನ್ನಾಗಿ ಅರಿಯಬಹುದಾಗಿದೆ. ಈತನ ವಚನಗಳು ವಾಚಕರಿಗೆ ತಿಳಿಯಲು ಸುಲಭವಾಗಬೇಕೆಂದು ಅವುಗಳ ಭಾವಾರ್ಥವು ಇವರಲ್ಲಿ ಕೊಡಲ್ಪಟ್ಟಿದೆ.

ವಿಜಾಪುರ
೧೨-೧೨-೨೮

ಫ. ಗು. ಹಳಕಟ್ಟಿ
ಸಂಪಾದಕ

1928

# ದೇವರ ದಾಸಿಮಯ್ಯನ

## ವಚನಗಳು.

ಕೆಳಗೆ ಕಾಣಿಸಿದ ವಚನಗಳಲ್ಲಿ ದೇವರ ದಾಸಿಮಯ್ಯನು ವಚನಗಳ ಮಹತ್ವವನ್ನು ವರ್ಣಿಸಿದ್ದಾನೆ.

### ವಚನಗಳ ಮಹತ್ವ.

**೧. ಕರಿಯನಿತ್ತಡೆ ಒಲ್ಲೆ. ಸಿರಿಯನಿತ್ತಡೆ ಒಲ್ಲೆ. ಹಿರಿದಪ್ಪ ರಾಜ್ಯವನಿತ್ತಡೆ ಒಲ್ಲೆ. ನಿಮ್ಮ ಶರಣರ ಸೂಳ್ನುಡಿಯ ಒಂದರಗಳಿಗೆ ಇತ್ತಡೆ ನಿಮ್ಮನಿತ್ತೆ ಕಾಣಾ ರಾಮನಾಥಾ.**

ಸೂಳ್ನುಡಿ= ಪರಸ್ಪರ ಭಾಷಣ, ಸಂಭಾಷಣೆ.

ಇದರಲ್ಲಿ ವಚನಕಾರನು ತನಗೆ ಜಗತ್ತಿನಲ್ಲಿಯ ಯಾವ ಶ್ರೀಮಂತಿಕೆ ಅಥವಾ ಶ್ರೇಷ್ಠ ಪದವಿಯು ಬೇಡ. ಇವೆಲ್ಲವುಗಳ ಬೆಲೆಯು ವಚನಗಳಿಗೆ ಸರಿಗಟ್ಟಲಾರದು, ಇಷ್ಟೇ ಅಲ್ಲ, ಯಾವ ಶ್ರೇಷ್ಠ ವಸ್ತುವಾದ ಪರಮಾತ್ಮನೋ ಅಂಥವನು ತನ್ನ ಹತ್ತರಿದ್ದರೂ ಕೂಡ ಆತನನ್ನು ಸಹ ಇವುಗಳಿಗೆ ಪ್ರತಿಯಾಗಿ ಕೊಡುವೆನೆಂದು ಇವನು ಅನ್ನುತ್ತಾನೆ. ಅಂದರೆ ವಚನಗಳು ಪರಮಾತ್ಮನಕಿಂತಲೂ ಶ್ರೇಷ್ಠವಾದವುಗಳೆಂದು ಇವನ ಅಭಿಪ್ರಾಯವು.

**೨ ಕಡೆಗೀಲಿಲ್ಲದ ಬಂಡಿ ಹೊಡೆಗೆಡುವುದು ಮಾಬುದೆ? ಕಡೆಗೀಲು ಬಂಡಿಗಾಧಾರ. ಕಡುದರ್ಪವೇರಿದ ಒಡಲೆಂಬ ಬಂಡಿಗೆ ಮೃಡಶರಣರ ನುಡಿ ಗಡಣವೇ ಕಡೆಗೀಲು ಕಾಣಾ ರಾಮನಾಥಾ.**

ಹೊಡೆಗೆಡು =ನೆಲಕ್ಕೆಬೀಳು; ಮಾಬುದೇ= ಬಿಡುವದೇ; ದರ್ಪ= ಸೊಕ್ಕು ಒಡಲು = ದೇಹ; ಗಡಣ= ಸಮೂಹ;

ಬಂಡಿಯು ಎಷ್ಟು ದೃಢವಾಗಿ ತೋರಿದರೂ, ಅದಕ್ಕೆ ಕೀಲು ಒಂದು ಇಲ್ಲದಿದ್ದರೆ, ಅದು ಹೊರಳಿಕೊಂಡು ಬೀಳುತ್ತದೆ. ಹೀಗೆ ಕೀಲು ಬಂಡಿಗೆ ಆಧಾರವಾಗಿದೆ. ಅದರಂತೆಯೇ ಶಿವಶರಣರ ನುಡಿಗಳು ಶರೀರವೆಂಬ ಬಂಡಿಗೆ ಕೀಲಿನಂತೆ ಇರುತ್ತವೆ. ಅಂದರೆ ಅವುಗಳು ಮನುಷ್ಯನಲ್ಲಿಯ ದುರ್ಗುಣಗಳನ್ನು ಹೋಗಲಾಡಿಸಿ ಅವನನ್ನು ಸರಿಯಾದ ರೀತಿಯಿಂದ ನಡಿಸಿಕೊಂಡು ಹೋಗುತ್ತವೆಂದು ವಚನಕಾರನು ಇಲ್ಲಿ ಹೇಳಿದ್ದಾನೆ.

ಮುಂದೆ ವಚನಕಾರನು ಪರಮಾತ್ಮನ ಸ್ವರೂಪವನ್ನು ಹೇಳುತ್ತಾನೆ.

## ಪರಮಾತ್ಮನ ಸ್ವರೂಪು-

**೩. ಮಣಿಗಳ ಸೂತ್ರದಂತೆ ತ್ರಿನಯನ ನೀನಿಪ್ಪೆಯಯ್ಯ. ಎಣಿಸುವಡೆ ತನು ಭಿನ್ನ. ಆತ್ಮನೊಬ್ಬನೇ. ಅಣುರೇಣು ಮಧ್ಯದಲ್ಲಿ ಗುಣಭರಿತ ನೀನೆಂದು ಮಣಿವುತಿಪ್ಪೆನಯ್ಯ ರಾಮನಾಥಾ.**

ಸೂತ್ರ = ದಾರ; ತ್ರಿನಯನ = ಮೂರುಕಣ್ಣುಳ್ಳವ, ಈಶ್ವರ; ಅಣು = ಅತ್ಯಂತ ಸಣ್ಣಪದಾರ್ಥ; ರೇಣು = ದೂಳು;

ಪರಮಾತ್ಮನು ಮಣಿಗಳ ಹಾರದಲ್ಲಿರುವ ದಾರದಂತೆ ಇದ್ದಾನೆ. ಆ ಹಾರದಲ್ಲಿಯ ಮಣಿಗಳು ಭಿನ್ನಭಿನ್ನವಾಗಿ ತೋರಿದರೂ ಅವುಗಳೊಳಗಿಂದ ಹಾಯ್ದ ದಾರವು ಅವೆಲ್ಲವುಗಳನ್ನು ಒಂದುಗೂಡಿಸಿದೆ. ಅದೇಮೇರೆಗೆ ಜಗತ್ತಿನಲ್ಲಿ ಅಸಂಖ್ಯ ಪದಾರ್ಥಗಳು ಭಿನ್ನಭಿನ್ನವಾಗಿ ತೋರಿದರೂ ಕೂಡ ಅವುಗಳಲ್ಲೆಲ್ಲ ಪರಮಾತ್ಮನು ಹರಡಿಕೊಂಡು ಅವುಗಳನ್ನು ಏಕೀಕರಿಸಿಕೊಂಡಿದ್ದಾನೆ. ವಿಚಾರಮಾಡಿ ನೋಡಿದರೆ ತನುಗಳು ಭಿನ್ನವಾಗಿ ತೋರುತ್ತವೆ. ಆದರೆ ಅವುಗಳಲ್ಲೆಲ್ಲ ಪಸರಿಸಿದ ಆತ್ಮನು ಸರ್ವವ್ಯಾಪಿಯಾಗಿ ಒಬ್ಬನೇ ಇದ್ದಾನೆ. ಈ ಪ್ರಕಾರ ಪರಮಾತ್ಮನು ಅಣುರೇಣು ತೃಣಕಾಷ್ಠಗಳಲ್ಲಿ ಸಂಬಂಧಪಟ್ಟವನಾಗಿದ್ದಾನೆಂದು ವಚನಕಾರನು ಇಲ್ಲಿ ಹೇಳಿದ್ದಾನೆ.



**೪. ಶರಧಿಯ ಮೇಲೆ ಧರೆಯ ಕರಗದಂತಿರಿಸಿದೆ. ಅಂಬರಕ್ಕೆ ಗದ್ದುಗೆ ಬೋದುಗೆ ಇಲ್ಲದಂತಿರಿಸಿದೆ. ಎಲೆ ಮೃಡನೇ ನೀನಲ್ಲದೆ ಉಳಿದ ದೈವಂಗಳಿಗಹುದೇ ರಾಮನಾಥಾ?**

ಶರಧಿ = ಸಮುದ್ರ; ಅಂಬರ = ಆಕಾಶ;

ಪರಮಾತ್ಮನ ಕಳೆಯು ಜಗತ್ತಿನಲ್ಲೆಲ್ಲ ಆವರಿಸಿಕೊಂಡಿರುವದರಿಂದ ಜಗತ್ತಿನಲ್ಲಿ ನಾನಾ ವಿಧ ಆಶ್ಚರ್ಯಗಳು ಕಂಗೊಳಿಸುತ್ತವೆ. ಈ ಬಗ್ಗೆ ವಚನಕಾರನು ಕೆಲವು ಸುಂದರವಾದ ಉದಾಹರಣೆಗಳನ್ನು ಕೊಟ್ಟಿದ್ದಾನೆ. ಭೂಮಿಯು ಬಹು ವಿಸ್ತಾರವಾದ ಸಮುದ್ರದಲ್ಲಿ ಕರಗದೆ ನಿಂತುಕೊಂಡಿದ್ದನ್ನೂ ಮಹತ್ತಾದ ಆಕಾಶವು ಏನೂ ಆಧಾರವಿಲ್ಲದೆ ಅಂತರಿಕ್ಷದಲ್ಲಿ ಪಸರಿಸಿದ್ದನ್ನೂ ನೋಡುತ್ತೇವೆ. ಇಂಥ ಅದ್ಭುತಗಳು ಪರಮಾತ್ಮನ ಸಾಮರ್ಥ್ಯವನ್ನು ಸೂಚಿಸುತ್ತವೇ ಹೊರ್ತು ಬೇರೊಂದಲ್ಲ. ಇಂಥ ಸಾಮರ್ಥ್ಯವು ಎರಡನೇ ಕಿರುಕುಳ ದೇವತೆಗಳಲ್ಲಿ ತೋರದು. ಪರಮಾತ್ಮನು ಸರ್ವಸಮರ್ಥನಿರುವನೆಂದು ವಚನಕಾರನ ಅಭಿಪ್ರಾಯವು.

**೫. ಸರ್ಪನೂ ಕೂರ್ಮನೂ ದಿಕ್ಕರಿಗಳೆಂಟು ಭೂಮಿಯ ಹೊತ್ತಿಹರೆಂದು ಅಹರ್ನಿಶ ಹೊತ್ತಿಪ್ಪವರಿಗೆ ಅತ್ತಲಾಧಾರ, ಇತ್ತಲಾಧಾರ. ಉತ್ತರಗುಡುವವರಿಗೆ ಇಕ್ಕುವೆ ಮುಂಡಿಗೆಯ. ಎತ್ತುವರುಳ್ಳರೆ ತೋರಿರೈ ರಾಮನಾಥಾ.**

ಕೂರ್ಮ = ಆಮೆ; ದಿಕ್ಕರಿಗಳು = ದಿಗ್ಗಜಗಳು; ಅಹರ್ನಿಶ = ಹಗಲು ರಾತ್ರಿ ಮುಂಡಿಗೆ = ಒಂದು ಆಹ್ವಾನ ಚಿನ್ಹ;

ಜನರು ಪೃಥ್ವಿಗೆ ಆಧಾರವಾಗಿ ಶೇಷನೂ, ಆಮೆಯೂ, ಅಷ್ಟದಿಗ್ಗಜಗಳೂ ಉಂಟೆಂದು ಹೇಳುತ್ತಾರೆ. ಇದು ತಪ್ಪೆಂದು ವಚನಕಾರನು ಇಲ್ಲಿ ಅನ್ನುತ್ತಾನೆ. ಈ ವಸ್ತುಗಳಿಗೆಲ್ಲ ಆಧಾರವಾಗಿರುವಂಥ ಬೇರೊಂದು ವಸ್ತುವು ಅಂದರೆ ಪರಮಾತ್ಮನು ಇದ್ದಾನೆಂದು ಅವನ ಅಭಿಪ್ರಾಯವು. ಈ ಸಂಗತಿಯು ಸುಳ್ಳೆಂದು ಬೇಕಾದವರು ತೋರಿಸಿ ಕೊಡಲಿ ಎಂದು ವಚನಕಾರನು ವಿರೋಧಿಗಳಿಗೆ ಆಹ್ವಾನ ಮಾಡುತ್ತಾನೆ.

೬. ಧರಣಿಯ ಪಸರಿಸಿ ಉರಗನನಡಿಯಿಟ್ಟು ಶರಧಿ ಏಳಕ್ಕೆ ಎರೆದನು ಒಕ್ಕುಡಿತ ಉದಕವ. ಹರಿಯಜ ಸುರರಿಗೆ ಪರಿಪರಿಯ ಲೋಕವ ಕೊಟ್ಟು ಅರಿಯದಂತಿರ್ದ ಕಾಣಾ ರಾಮನಾಥಾ.

ಉರಗ ಹಾವು; ಒಕ್ಕುಡಿತೆ= ಒಂದೇ ಬೊಗಸೆ; ಅಜ= ಬ್ರಹ್ಮ ;

ಪರಮಾತ್ಮನು ಧರಣಿಯಲ್ಲೆಲ್ಲ ಪಸರಿಸಿದ್ದಾನೆ. ಆತನು ಎಲ್ಲ ಪದಾರ್ಥಗಳಲ್ಲಿಯು ಚೈತನ್ಯವನ್ನುಂಟು ಮಾಡಿದ್ದಾನೆ. ಅವನು ಜಗತ್ತಿನಲ್ಲಿ ಓಡಾಡುವ ಸರ್ಪನ ಗತಿಯಲ್ಲಿಯೂ ಕೂಡ ತೋರುತ್ತಾನೆ. ಅವನ ಪ್ರಭಾವವು ಇಂಥ ಕ್ಷುದ್ರ ಕೀಟಕದಲ್ಲಿಷ್ಟೇ ಅಲ್ಲ, ಏಳು ಸಮುದ್ರಗಳಲ್ಲಿಯೂ ಕೂಡ ವ್ಯಾಪಿಸಿದೆ. ಈ ಸಮುದ್ರಗಳೆಂದರೆ ಅವನಿಗೆ ಒಂದು ಬೊಗಸೆ ನೀರು ಅವನು ಹೀಗೆ ಮಹತ್ಸ್ವರೂಪನಾಗಿದ್ದಾನೆ. ಇಷ್ಟೇ ಅಲ್ಲ, ಅವನು ಜಗತ್ತಿನಲ್ಲೆಲ್ಲ ಅನಂತಪ್ರಾಣಿಗಳಿಗೆ ಅವುಗಳಿಗೆ ತಕ್ಕ ತಂಗತಿಗಳನ್ನು ಕೊಟ್ಟು ಒಂದು ವ್ಯವಸ್ಥೆಯನ್ನುಂಟು ಮಾಡಿದ್ದಾನೆ. ಅವನು ಹರಿಹರ ಬ್ರಹ್ಮಾದಿಗಳಿಗೂ ಕೂಡ ಅವರವರು ಮಾಡತಕ್ಕ ಕಾರ್ಯಗಳನ್ನು ನಿಯಮಿಸಿದ್ದಾನೆ. ಈ ಪ್ರಕಾರ ಪರಮಾತ್ಮನು ಜಗತ್ತಿನಲ್ಲೆಲ್ಲ ವ್ಯವಹರಿಸುತ್ತಾನೆ. ಹೀಗಿದ್ದರೂ ಕೂಡ ಅವನು ಯಾರಿಗೂ ಕಾಣದಂತೆ ಅದೃಶ್ಯರೂಪನಾಗಿ ಎಲ್ಲೆಲ್ಲಿಯೂ ವಾಸಿಸಿದ್ದಾನೆಂದು ವಚನಕಾರನು ಇಲ್ಲಿ ಹೇಳುತ್ತಾನೆ.

---

ಇನ್ನು ಮುಂದೆ ವಚನಕಾರನು ಪರಮಾತ್ಮನು ಸೃಷ್ಟಿಯಲ್ಲೆಲ್ಲ ಯಾವ ರೀತಿಯಿಂದ ವ್ಯವಹರಿಸುತ್ತಾನೆಂಬದನ್ನು ವಿವರಿಸುತ್ತಾನೆ.

## ಪರಮಾತ್ಮ ಮತ್ತು ಜಗತ್ತು.

೭. ಮರದೊಳಗೆ ಮಂದಾಗ್ನಿಯ ಉರಿಯದಂತಿರಿಸಿದೆ. ನೊರೆವಾಲೊಳಗೆ ತುಪ್ಪವ ಕಂಪಿಲ್ಲದಂತಿರಿಸಿದೆ. ಶರೀರದೊಳಗಾತ್ಮನನಾರು ಕಾಣದಂತಿರಿಸಿದೆ. ನೀನು ಬೆರಸಿದ ಭೇದಕ್ಕೆ ಬೆರಗಾದೆನಯ್ಯಾ ರಾಮನಾಥಾ.



ಪರಮಾತ್ಮನು ಜಗತ್ತಿನಲ್ಲಿ ಹ್ಯಾಗೆ ಬೆರಸಿದ್ದಾನೆಂದು ಹೇಳುವದು ಅಸಾಧ್ಯವೆಂದು ವಚನಕಾರನ ಅಭಿಪ್ರಾಯವು. ಆದರೂ ಇದರ ವಿಧವು ಕೆಲ ಮಟ್ಟಿಗಾದರೂ ತಿಳಿಯಬೇಕೆಂದು ಅವನು ಕೆಲವು ಉದಾಹರಣೆಗಳನ್ನು ಕೊಟ್ಟು ಇಲ್ಲಿ ಈ ವಿಷಯವನ್ನು ವಿವರಿಸಿದ್ದಾನೆ. ಹ್ಯಾಗೆ ಮರದಲ್ಲಿ ಬೆಂಕಿಯು ಪ್ರಕಟವಾಗದೆ ಮಂದವಾಗಿ ಇರುತ್ತದೋ, ಹ್ಯಾಗೆ ನೊರೆಹಾಲಲ್ಲಿ ತುಪ್ಪವು ತನ್ನ ವಾಸನೆಯನ್ನು ಅಡಗಿಸಿಕೊಂಡು ಇರುತ್ತದೋ, ಹಾಗೆ ಸೃಷ್ಟಿಯಲ್ಲೆಲ್ಲ ಪರಮಾತ್ಮನು ಆತ್ಮ ಸ್ವರೂಪನಾಗಿ ತನ್ನ ಗುಣಗಳನ್ನು ಪ್ರಕಟ ಮಾಡದೆ ಇದ್ದಾನೆಂದು ಇಲ್ಲಿ ಹೇಳಿದ್ದಾನೆ.

೮. ಅಡಗನೊಳಗಣ ಹಾಲು ಅಡಗಿಪ್ಪ ಭೇದವನು
ಬಿಡಗಪ್ಪ ತುಪ್ಪದ ಕಂಪನ ಪರಿಯನು ಎಲೆ ಮೃಡನೆ
ನೀನು ಪ್ರಾಣ ಪ್ರಕೃತಿಗಳೊಳಡಗಿಹ ಭೇದವ
ಲೋಕದ ಜಡರೆತ್ತ ಬಲ್ಲರೈ ರಾಮನಾಥಾ?

ಅಡಗು= ಮಾಂಸ

ಪರಮಾತ್ಮನು ಜಗತ್ತಿನಲ್ಲಿ ಹ್ಯಾಗೆ ಅಡಗಿದ್ದಾನೆಂಬದನ್ನು ತಿಳಿಯುವದು ಜಡಮನುಷ್ಯರಿಗೆ ಸಾಧ್ಯವಲ್ಲ. ಅದು ಜ್ಞಾನಿಗಳಿಗೆ ಮಾತ್ರ ಸಾಧ್ಯವು. ಪರಮಾತ್ಮನು ಪದಾರ್ಥಗಳಲ್ಲೆಲ್ಲ ಪ್ರಾಣ ಸ್ವರೂಪನಾಗಿ ಅವುಗಳಲ್ಲಿ ಚೈತನ್ಯವನ್ನು ಹುಟ್ಟಿಸಿರುತ್ತಾನೆ. ಈ ಪದಾರ್ಥಗಳು ಅತ್ಯಂತ ಕ್ಷುದ್ರವಾಗಿ ತೋರಿದರೂ ಕೂಡ ಅವನು ಅವುಗಳಲ್ಲಿ ವಾಸಿಸುತ್ತಾನೆ. ಹ್ಯಾಗೆ ಹೇಯವಾದ ಮಾಂಸದಲ್ಲಿ ಪವಿತ್ರವಾದ ಹಾಲು ಅಡಗಿರುತ್ತದೋ, ಹ್ಯಾಗೆ ತುಪ್ಪದಲ್ಲಿ ಆಲ್ಹಾದಕರವಾದ ಕಂಪು ದೃಶ್ಯವಾಗುತ್ತದೋ, ಹಾಗೆ ಪರಮಾತ್ಮನೆಂಬ ಶ್ರೇಷ್ಠವಸ್ತುವು ಜಗತ್ತಿನಲ್ಲೆಲ್ಲ ಅಡಗಿಕೊಂಡಿರುತ್ತಾನೆಂದು ವಚನಕಾರನು ಇಲ್ಲಿ ಹೇಳಿದ್ದಾನೆ.

೯. ಎಣ್ಣೆ ಇದ್ದು ಎಳ್ಳು ನನೆಯದ ಭೇದವ ಕಿಚ್ಚಿದ್ದು
ಕಲ್ಲು ಸಿಡಿಯದ ಭೇದವ ಕಾಮವಿರ್ದು ಕನ್ನೆಯನ
ನುಭವಿಸದ ಭೇದವ ಪರವಿದ್ದು ಪ್ರಾಣನ ಪ್ರಕೃತಿಯು
ಹರಿಯದ ಭೇದವ ನರರೆತ್ತ ಬಲ್ಲರೈ ರಾಮನಾಥಾ?

ಪರ= ಶ್ರೇಷ್ಠವಸ್ತು, ಪರಮಾತ್ಮ ; ಪ್ರಕೃತಿ= ಸ್ವಭಾವ;

ಪರಮಾತ್ಮನು ಜಗತ್ತಿನಲ್ಲಿ ಹುದುಗಿದ್ದರೂ ಪರಮಾತ್ಮನ ಶ್ರೇಷ್ಠ ಗುಣಗಳು ಈ ಪದಾರ್ಥಗಳಿಗೆ ಬರಲಾರವು. ಆ ಪದಾರ್ಥಗಳು ತಮ್ಮ ತಮ್ಮ ಸ್ವಭಾವದಂತೆಯೇ ಇರುತ್ತವೆಂದು ವಚನಕಾರನು ಇಲ್ಲಿ ಹೇಳಿದ್ದಾನೆ. ಇದು ಹ್ಯಾಗೆ ಶಕ್ಯವೆಂದು ಕೇಳಿದಲ್ಲಿ ಈ ಬಗ್ಗೆ ವಚನಕಾರನು ಕೆಲವು ಉದಾಹರಣೆಗಳನ್ನು ಕೊಟ್ಟು ಈ ವಿಷಯವನ್ನು ವಿವರಿಸಿದ್ದಾನೆ. ಎಳ್ಳಿನಲ್ಲಿ ಎಣ್ಣೆಯು ತುಂಬಿಕೊಂಡಿದ್ದರೂ ಕೂಡ ಆ ಎಣ್ಣೆಯಲ್ಲಿ ಆ ಎಳ್ಳು ಹ್ಯಾಗೆ ನೆನೆಯುವದಿಲ್ಲವೋ, ಕಿಚ್ಚು ಕಲ್ಲಿನಲ್ಲಿದ್ದರೂ ಕೂಡ ಹ್ಯಾಗೆ ಆ ಕಿಚ್ಚು ಆ ಕಲ್ಲನ್ನು ಸಿಡಿಯುವಂತೆ ಮಾಡುವದಿಲ್ಲವೋ, ಹಾಗೆಯೇ ಪರಮಾತ್ಮನೆಂಬ ವಸ್ತುವು ಪದಾರ್ಥಗಳಲ್ಲಿದ್ದರೂ ಕೂಡ ಅವುಗಳ ಸ್ವಭಾವವನ್ನು ಅಡಗಿಸದೆ ಅವುಗಳಲ್ಲಿರುತ್ತಾನೆಂದು ವಚನಕಾರನು ಇಲ್ಲಿ ಹೇಳಿದ್ದಾನೆ.

**೧೦. ಒಡಲೊಳಗಣ ಕಿಚ್ಚು ಒಡಲ ಸುಡದ ಭೇದವ, ಕುಡಿದ ಉದಕದಲ್ಲಿ ಆ ಕಿಚ್ಚು ನಂದದ ಭೇದವ, ಮೃಡ, ನೀ ಪ್ರಾಣಪ್ರಕೃತಿಯೊಳಗಡಗಿದ ಭೇದವ, ಲೋಕದ ಜಡರೆತ್ತ ಬಲ್ಲರೈ ರಾಮನಾಥಾ?**

ಹಿಂದಿನ ವಿಷಯವನ್ನೇ ದೇವರ ದಾಸಿಮಯ್ಯನು ಪುನಃ ಕೆಲವು ಉದಾಹರಣೆಗಳನ್ನು ಕೊಟ್ಟು ವಿವರಿಸಲು ಇಲ್ಲಿ ಯತ್ನಿಸಿದ್ದಾನೆ. ಅವನು ಅನ್ನುವದೇನಂದರೆ, ಶರೀರದಲ್ಲಿ ಅಗ್ನಿಯು (ಪಚನಾಗ್ನಿ ಇತ್ಯಾದಿ) ಇದೆ. ಆದರೂ ಶರೀರವು ಅದರಿಂದ ಸುಟ್ಟು ಹೋಗುವದಿಲ್ಲ. ಮನುಷ್ಯನು ಆ ಅಗ್ನಿಯನ್ನು ಶಾಂತಮಾಡಲು ನೀರನ್ನು ಕುಡಿಯುವದುಂಟು. ಆದರೂ ಆ ನೀರಿನಿಂದ ಶರೀರದಲ್ಲಿಯ ಆ ಅಗ್ನಿಯು ನಂದಿಹೋಗುವದಿಲ್ಲ. ಅದು ಯಥಾವತ್ತಾಗಿಯೇ ಉರಿಯುತ್ತಲಿದೆ. ಅದೇ ಮೇರೆಗೆ ಜಗತ್ತಿನಲ್ಲಿ ನಾನಾ ವಿಧ ರೂಪಾಂತರಗಳು ತೋರಿಬಂದರೂ ಅವುಗಳಲ್ಲಿರುವ ಪರಮಾತ್ಮನೆಂಬ ವಸ್ತುವು ಯಥಾವತ್ತಾಗಿಯೇ ಶಾಶ್ವತವಾಗಿ ಇರುತ್ತಾನೆಂದು ವಚನಕಾರನ ಅಭಿಪ್ರಾಯವು. ಈ ವಿಷಯವು ಜ್ಞಾನಿಗಳಿಗೆ ಮಾತ್ರ ಗೊತ್ತಾಗುತ್ತದೇ ಹೊರ್ತು ಜಡರಿಗೆ ಗೊತ್ತಾಗುವದಿಲ್ಲೆಂದು ಅವನು ಅನ್ನುತ್ತಾನೆ.

---



ಮುಂದೆ ದೇವರದಾಸಿಮಯ್ಯನು ಮೋಕ್ಷದ ಸ್ವರೂಪವನ್ನು ವಿವರಿಸುತ್ತಾನೆ.

## ಮೋಕ್ಷ.

**೧೧. ಸೊಡರು ಕೆಟ್ಟೊಡೆ, ದೃಷ್ಟಿ ಅಡಗಿಪ್ಪ ಭೇದವನು, ಒಡಲು ಕೆಟ್ಟೊಡೆ ಜೀವನಾವೆಡೆಯಲ್ಲಡಗಿಹುದು? ಈ ಭೇದವ ಭೇದಿಸಬಲ್ಲಡೆ, ಪೊಡವಿಗೆ ಗುರುವಪ್ಪನೆಂದು ಮುಂಡಿಗೆಯನಿಕ್ಕಿದೆ ಪರಸಮಯಕ್ಕೆ ರಾಮನಾಥಾ.**

ಸೊಡರು = ಪ್ರಕಾಶ

ಮನುಷ್ಯನ ಕಣ್ಣಿನಲ್ಲಿರುವ ತೇಜಸ್ಸು, ಅದೊಂದು ಪರಮಾತ್ಮನ ಕಳೆಯೇಸರಿ. ಯಾಕಂದರೆ ಆತನ ಕಳೆಯು ಜಗತ್ತಿನಲ್ಲೆಲ್ಲ ವ್ಯವಹರಿಸುತ್ತದೆ. ಈ ವಿಷಯವನ್ನು ವಚನಕಾರನು ಹಿಂದೆ ಅನೇಕ ವಚನಗಳಲ್ಲಿ ಹೇಳಿದ್ದಾನೆ. ಹೀಗಿರಲು ಒಂದು ವೇಳೆ ಆ ಮನುಷ್ಯನ ಕಣ್ಣು ಕೆಟ್ಟುಹೋದರೆ, ಆ ಕಣ್ಣಿನಲ್ಲಿಯ ತೇಜಸ್ಸು ಎಲ್ಲಿಗೆ ಹೋಗಬೇಕು? ಅದು ಪರಮಾತ್ಮನ ಮೂಲ ಚೈತನ್ಯದಲ್ಲಿಯೇ ಹೋಗುವದು ನಿಶ್ಚಯವು. ಹಾಗೆಯೇ, ಮನುಷ್ಯನ ದೇಹವು ಕೆಟ್ಟರೆ, ಆ ದೇಹದಲ್ಲಿರುವ ಜೀವವು ಎಲ್ಲಿಗೆ ಹೋಗಬೇಕು? ಎಲ್ಲಿಂದ ಅದು ಹೊರಟಿರುವದೋ ಅಂಥ ಪರಮಾತ್ಮನಲ್ಲಿಯೇ ಅಡಗಬೇಕು, ಎಂದು ವಚನಕಾರನು ಒಂದು ಸಾದೃಶ್ಯವನ್ನು ತೆಗೆದುಕೊಂಡು ಹೇಳಿದ್ದಾನೆ. ಈ ರೀತಿಯನ್ನು ಯಾವನು ತಿಳಿದುಕೊಳ್ಳುತ್ತಾನೋ ಅವನು ನಿಶ್ಚಯವಾಗಿ ಜಗತ್ತಿಗೆ ಗುರುವು ಎಂದು ವಚನಕಾರನು ಆಹ್ವಾನ ಪೂರ್ವಕವಾಗಿ ನುಡಿದಿದ್ದಾನೆ.

**೧೨ ಮಾಡಿದ ಕರ್ಮವ ನೋಡಯ್ಯ! ಎನ್ನ ಮನದಣಿವನ್ನಕ್ಕ, ಬೇಡೆನ್ನನು. ಮಾಕೊಳ್ಳೆನ್ನನು. ಮೇಲೆ ರೂಢಿಗೀಶ್ವರನ ಕೂಡುವೆನು, ನೀರಡಸಿದಂತೆ ರಾಮನಾಥಾ.**

ಮಾರ್ಕೊಳ್ಳು = ಮಾರಾಟಕ್ಕೆತೆಗೆದುಕೊಳ್ಳು

ಮನುಷ್ಯನು ಪರಮಾತ್ಮನಲ್ಲಿ ಐಕ್ಯವಾಗುವದೇ ಅವನ ಅಂತಿಮ ಧ್ಯೇಯವಾಗಿರಬೇಕೆಂದು ವಚನಕಾರನು ಹಿಂದಿನವಚನದಲ್ಲಿ ಹೇಳಿ, ಇದನ್ನು ಸಾಧಿಸಲಿಕ್ಕೆ ಆತಂಕವಾಗಿರುವದು ಯಾವುದೆಂದರೆ, ಅವನ್ನ ಕರ್ಮಗಳೇ ಎಂದು ಅವನು ಇಲ್ಲಿ ವಿವರಿಸಿದ್ದಾನೆ. ಈ ಕರ್ಮಗಳನ್ನು ದೂರಮಾಡಿದ್ದಾಗ್ಗೆಯೇ ಮಾತ್ರ ಮನುಷ್ಯನಿಗೆ ಮೋಕ್ಷವು ಸಿದ್ಧಿಸುವದು. ಇದು ಆಗಬೇಕಾದರೆ ಮನುಷ್ಯನು ತನ್ನದೆಂಬ ವಸ್ತುವನ್ನು ಸಂಪೂರ್ಣವಾಗಿ ತ್ಯಜಿಸುವದು ಅವಶ್ಯವೆಂದು ವಚನಕಾರನ ಅಭಿಪ್ರಾಯವಿದೆ. ಆದ್ದರಿಂದ ಅವನು ತನ್ನ ವಸ್ತುಗಳನ್ನು ತನ್ನಲ್ಲಿ ಉಳಿಸಿದೆ, ಅವುಗಳನು ಭಿಕ್ಷೆಯಾಗಿ ತೆಗೆದುಕೊಳ್ಳಬೇಕೆಂದು ಪರಮಾತ್ಮನನ್ನು ಬೇಡಿಕೊಳ್ಳುತ್ತಾನೆ. ಇಷ್ಟೇಅಲ್ಲ. ಅವನು ತನ್ನನ್ನೂ ಸಹ ಪರಮಾತ್ಮನಿಗೆ ಅರ್ಪಿಸುವೆನೆಂದು ಅನ್ನುತ್ತಾನೆ. ಈ ವೃತ್ತಿಯಿಂದ ನಡೆದರೆ ತನಗೆ ಮೋಕ್ಷವು ಸಾಧ್ಯವಾಗುವದು. ಈ ಮೋಕ್ಷವನ್ನು ಹೊಂದಲಿಕ್ಕೆ ಹ್ಯಾಗೆ ನೀರಡಿಸಿದ ಮನುಷ್ಯನು ನೀರನ್ನೇ ಅಪೇಕ್ಷಿಸುತ್ತಾನೋ ಹಾಗೆಯೇ ತಾನೂ ಈ ಮೋಕ್ಷವನ್ನು ಬಯಸುತ್ತಲಿದ್ದೇನೆಂದು ಅವನು ಈ ವಚನದಲ್ಲಿ ಅಂದಿದ್ದಾನೆ. ಒಟ್ಟಿಗೆ ಆತ್ಮಾರ್ಪಣಭಾವದಿಂದ ನಡೆಯುವದರಿಂದಲೇ ಮೋಕ್ಷವು ಸಾಧ್ಯವೆಂದು ವಚನಕಾರನ ಮುಖ್ಯ ಅಭಿಪ್ರಾಯವು.

೧೩. ಸಾಗರದೊಳಗಣ ಕಿಚ್ಚಿನ ಸಾಕಾರದಂತೆ, ಸಸಿಯೊಳಗಣ ಫಲಪುಷ್ಪ ರುಚಿಯ ಪರಿಮಳದಂತೆ, ಮನದ ಮರೆಮಾತ ನೆನಹಿನಲ್ಲಿ ಅರಿದು ನಾಲಗೆ ನುಡಿವಾಗಲಲ್ಲದೆ ಕಾಣಬಾರದು, ಕೇಳಬಾರದು. ಒಂದಂಗದೊಳಡಗಿದ ನೂರೊಂದರ ಪರಿ ರಾಮನಾಥಾ.

ಇಲ್ಲಿ ವಚನಕಾರನು ಸರಿಯಾದ ಕ್ರಿಯೆಗಳನ್ನು ಮಾಡುವದರಿಂದಲೇ ಮೋಕ್ಷವು ಸಾಧ್ಯವೆಂದು ಹೇಳುತ್ತಾನೆ. ಹ್ಯಾಗೆ ವಡಬಾಗ್ನಿಯು ಸಾಗರದಲ್ಲಿ ಅಡಗಿಕೊಂಡಿದೆಯೋ, ಹ್ಯಾಗೆ ಫಲಪುಷ್ಪಗಳ ಸ್ವಾದವೂ ಪರಿಮಳವೂ ಸಸಿಯಲ್ಲಿ ಅಡಗಿವೆಯೋ, ಹಾಗೆಯೇ ಪರಮಾತ್ಮನು ಜಗತ್ತಿನಲ್ಲಿ ಅಡಗಿರುವನು. ಆದರೆ ಅಂತ್ಯದಲ್ಲಿ ಆ ವಡಬಾಗ್ನಿಯು ಕ್ರಿಯಾರೂಪವನ್ನು ಧರಿಸಿ ಆ ಸಮುದ್ರವನ್ನು ಆವರಿಸಿ ಬಿಡುತ್ತದೆ. ಮತ್ತು ಇಂಥ ಕ್ರಿಯೆಯಿಂದಲೇ ಸಸಿಯು ದೊಡ್ಡದಾಗಿ ಫಲಪುಷ್ಪಗಳನ್ನು ಧರಿಸಿ ವೃದ್ಧಿಯನ್ನು ಹೊಂದುತ್ತದೆ. ಅದರಂತೆಯೇ ಪರಮಾತ್ಮನು ಮನುಷ್ಯನ ಮನಸ್ಸಿನಲ್ಲಿ ಅಡಗಿಕೊಂಡಿದ್ದರೂ ಆ ಮನುಷ್ಯನು ಆ ಪರಮಾತ್ಮನ ಕಳೆಯನ್ನು ನೆನಹಿನಲ್ಲಿ ತಂದು ಅದನ್ನು ಅರಿದು ನಾಲಿಗೆಯಿಂದ ನುಡಿದರೆ, ಅದು ಪ್ರಕಟವಾಗುತ್ತದೆ. ಅಂದರೆ ಕ್ರಿಯೆಯಿಂದಲೇ ಮೋಕ್ಷವನ್ನು ಸಾಧಿಸಬೇಕೆಂದು ವಚನಕಾರನ ಮುಖ್ಯಾಭಿಪ್ರಾಯವು. ನೂರಾಒಂದು ಸ್ಥಲಗಳು ಷಟ್‌ಸ್ಥಲ ಜ್ಞಾನಮಾಡಿಕೊಡುವಂಥವುಗಳು ಇರುತ್ತವೆ. ಆದರೆ ಈ ಸ್ಥಲಗಳೆಲ್ಲವೂ ಒಂದು ಸ್ಥಲದಿಂದಲೇ ಹೊರಟಿರುತ್ತವೆ. ಈ ೧೦೧ ಸ್ಥಲಗಳ ಜ್ಞಾನದಿಂದಲೇ ಮೂಲಸ್ಥಲದ ಜ್ಞಾನವಾಗುತ್ತದೆ. ಹೀಗೆ ಒಂದು ಸ್ಥಲದಿಂದ ೧೦೧ ಸ್ಥಲಗಳು ಹೊರಟಿದ್ದು ಈ ೧೦೧ ಸ್ಥಲಗಳ ಜ್ಞಾನದಿಂದಲೇ ಒಂದು ಸ್ಥಲದ ಅರಿವು ಆಗುವದು. ಈ ಸ್ಥಲಗಳಿಗನುಸಾರವಾಗಿ ಕ್ರಿಯೆಗಳನ್ನು ಮಾಡಿದರೆ ಮೋಕ್ಷ ಪ್ರಾಪ್ತಿಯಾಗುತ್ತದೆಂದು ದೇವರ ದಾಸಿಮಯ್ಯನು ಈ ೧೦೧ ಸ್ಥಲಗಳ ಮಹತ್ವವನ್ನು ಹೇಳಿದ್ದಾನೆ.



ಈ ಪ್ರಕಾರ ದೇವರದಾಸಿಮಯ್ಯನು ಮೋಕ್ಷದ ವಿಚಾರಗಳನ್ನು ಅರುಹಿ, ಮುಂದೆ ಷಟ್‌ಸ್ಥಲದ ಮಾರ್ಗವನ್ನು ಅರುಹುತ್ತಾನೆ. ಆದರೆ ಈ ಪ್ರಕಾರ ಮನುಷ್ಯನು ಆಚರಿಸಬೇಕಾದರೆ ಅವನು ಪ್ರಥಮದಲ್ಲಿ ಗುರುವಿನಿಂದ ದೀಕ್ಷೆಯನ್ನು ಹೊಂದುವದು ಅವಶ್ಯವೆಂದು ಈ ದೀಕ್ಷೆಯ ವಿಷಯವಾಗಿ ಅವನು ಕೆಳಗೆ ವಿವರಿಸಿದ ವಚನಗಳನ್ನು ಹೇಳಿದ್ದಾನೆ.

## ದೀಕ್ಷೆ.

೧೪. ಘಟದೊಳಗೆ ತೋರುವ ಸೂರ್ಯನಂತೆ, ಸರ್ವರಲ್ಲಿ ಶಿವನ ಚೈತನ್ಯವಿಪ್ಪುದು. ಇದ್ದರೇನು? ಸರ್ವರಿಗೆ ಸಾಧ್ಯವಲ್ಲ. ಮುಟ್ಟಿಮುಟ್ಟದು. ಅದ ಕೂಡುವರೆ ಗುರುವಿನಿಂದಲ್ಲದಾಗದು ಕಾಣಾ ರಾಮನಾಥಾ.

ಹ್ಯಾಗೆ ಒಬ್ಬನೇ ಸೂರ್ಯನು ಅನೇಕ ಘಟಗಳಲ್ಲಿ ಬೇರೆ ಬೇರೆಯಾಗಿ ಪ್ರಕಾಶಿಸುತ್ತಾನೋ ಹಾಗೆಯೇ ಪರಮಾತ್ಮನ ಚೈತನ್ಯವು ಅಸಂಖ್ಯ

ವಸ್ತು ಜಾತಿಗಳಲ್ಲಿ ಪಸರಿಸಿರುತ್ತದೆ. ಹೀಗೆ ಅವುಗಳಲ್ಲಿ ಪಸರಿಸಿದ್ದರೂ ಕೂಡ ಅದನ್ನು ಕಂಡು ಹಿಡಿಯಲಿಕ್ಕೆ ಮನುಷ್ಯನಿಗೆ ಸಾಧ್ಯವಲ್ಲ. ಯಾಕಂದರೆ ಅದು ತನ್ನಲ್ಲಿ ಇದ್ದುಕೊಂಡಿದ್ದರೂ, ಅದು ಅವನಲ್ಲಿ ಇಲ್ಲದಂತೆ ಇದೆ. ಅದನ್ನು ಸಾಧಿಸಬೇಕಾದರೆ, ಗುರುವಿನ ಕಟಾಕ್ಷದಿಂದಲ್ಲದೆ ಆಗದು. ಅಂದರೆ ಅವನು ದೀಕ್ಷೆಯನ್ನು ಹೊಂದಿ ಲಿಂಗಧಾರಕನಾಗಬೇಕೆಂದು ವಚನಕಾರನ ಅಭಿಪ್ರಾಯವದೆ.

**೧೫. ಹಸ್ತಾಬ್ಜ ಮಥನದಿಂದೊತ್ತಿ ಭಸ್ಮವ ಮಾಡಿ**
**ಮತ್ತೆ ಪಂಚಾಕ್ಷರಿ ಮರುಜೀವಣಿಯ ಚಿತ್ತಶ್ರೋತ್ರ**
**ದೊಳು ಧಾರೆಯನೆರೆಯಲು ಆತ ನಿನ್ನಂತೆ ಕಾಣಾ**
**ರಾಮನಾಥಾ.**

ಮರುಜೀವಣಿ =ಸಂಜೀವನೀ ಬೇರು.

ಇಲ್ಲಿ ವಚನಕಾರನು ಲಿಂಗಧಾರಣದ ರೀತಿಯನ್ನು ಹೇಳಿದ್ದಾನೆ. ಗುರುವು ಮೊದಲಿಗೆ ತನ್ನ ಹಸ್ತವನ್ನು ಶಿಷ್ಯನ ಮಸ್ತಕದ ಮೇಲೆ ಇಡುತ್ತಾನೆ ಹೀಗೆ ಇಟ್ಟ ಕೂಡಲೆ ಅವನ ಶರೀರವು ಮಥನಮಾಡಿದಂತೆ ಆಗುವದು. ಇದರಿಂದ ಅವನ ದುರ್ಗುಣಗಳು ಸುಟ್ಟು ಹೋಗುವವು. ಆ ಮೇಲೆ ಗುರುವು ಅವನಿಗೆ ಪಂಚಾಕ್ಷರಿಯ ಉಪದೇಶ ಮಾಡುವನು. ಈ ಮಂತ್ರವನ್ನು ಅವನು ಶಿಷ್ಯನ ಕಿವಿಯಲ್ಲಿ ಉಪದೇಶಿಸಲಾಗಿ ಶಿಷ್ಯನು ಅದನ್ನು ತನ್ನ ಚಿತ್ತದಿಂದ ಗ್ರಹಿಸುವನು.. ಆಗ ಅವನಲ್ಲಿ ಪರಮಾತ್ಮನ ತೇಜಸ್ಸು ಸಂಪೂರ್ಣವಾಗಿ ಮೂಡಿಕೊಳ್ಳಲು ಆತನು ಪರಮಾತ್ಮನಂತೆಯೇ ಆಗುವನು. ಅಂದರೆ ದೀಕ್ಷೆಯಿಂದ ಶುದ್ಧನಾಗಿ ಪರಮಾತ್ಮನ ಪ್ರಭಾವವುಳ್ಳವನಾಗುವನೆಂದು ವಚನಕಾರನ ಭಾವವು.

**೧೬. ಕರಸ್ಥಲದ ಜ್ಯೋತಿಯದು, ಕರುವಿಟ್ಟೆರಕ**
**ವದು, ಅದರ ನೆಲೆಯ ತಿಳಿದರೆ ನಿಜಾನಂಡವಿದು. ಹೊಲ**
**ಬುದೋರದಿಹ ನಿಸ್ಸೀಮನ ಹೊಲಬನರಿದು ಕೂಡಿದಾ**
**ತನೆ ಮೃಡನು ಕಾಣಾ ರಾಮನಾಥಾ.**

ಕರುವಿಡು= ಪಡಿಯಚ್ಚು ಹಾಕು, ಎರಕ = ಮಿಶ್ರಣ; ಹೊಲಬು = ಮಾರ್ಗ; ನಿಸ್ಸೀಮ= ಮೇರೆ ಇಲ್ಲದ.



ಇಲ್ಲಿ ವಚನ ಕಾರನು ಲಿಂಗದ ಲಕ್ಷಣವನ್ನು ಹೇಳಿದ್ದಾನೆ. ಅದು ಕರಸ್ಥಲದ ಜ್ಯೋತಿಯು. ಅಂದರೆ ಲಿಂಗವು ತನಗೆ ದಾರಿ ತೋರಿಸತಕ್ಕಂಥ ಬೆಳಕಿನಂತೆ ಇರುತ್ತದೆಂದು ಅದನ್ನು ವಿವರಿಸಿದ್ದಾನೆ. ಒಂದು ಮಿಶ್ರಣವನ್ನು ತೆಗೆದುಕೊಂಡು ಅದನ್ನು ಪಡಿಯಚ್ಚಿನಲ್ಲಿ ಹೊಯ್ದರೆ, ಆ ಮಿಶ್ರಣಕ್ಕೆ ಹ್ಯಾಗೆ ಒಂದು ಆಕಾರವು ಬರುತ್ತದೋ ಹಾಗೆಯೇ ಲಿಂಗವೆಂದು ಹೇಳಿದ್ದಾನೆ. ಅಂದರೆ ಲಿಂಗವು ನಿರಾಕಾರವಸ್ತುವನ್ನು ಬೋಧಿಸತಕ್ಕ ಒಂದು ಆಕಾರಯುಕ್ತ ಪದಾರ್ಥವೆಂದು ಅವನ ಅಭಿಪ್ರಾಯವು. ಲಿಂಗದ ಅರಿವನ್ನು ತಿಳಿದರೆ ನಿಜವಾದ ಆನಂದವಾಗುತ್ತದೆ. ಪರಮಾತ್ಮನ ಮಾರ್ಗವನ್ನು ತಿಳಿಯುವದು ಅಸಾಧ್ಯವೂ ಅವನು ಸೀಮಾರಹಿತನೂ ಆಗಿದ್ದರೂ ಲಿಂಗವು ಆತನ ನಿಜಸ್ವರೂಪವನ್ನು ಅರುಹಿಸಿಕೊಡುವಂಥದಿರುತ್ತದೆ. ಇದನ್ನು ತಿಳಿದು ಯಾವನು ಪರಮಾತ್ಮನಲ್ಲಿ ಕೂಡುತ್ತಾನೋ ಅವನೇ ಶಿವನು ಎಂದು ವಚನಕಾರನು ಹೇಳಿದ್ದಾನೆ.

---

ಈ ಪ್ರಕಾರ ಲಿಂಗಧಾರಣದಿಂದ ಭಕ್ತನ ಮೇಲೆ ಯಾವ ಪರಿಣಾಮಗಳಾಗುತ್ತವೆಂಬದನ್ನು ಮುಂದೆ ವಚನಕಾರನು ವಿವರಿಸುತ್ತಾನೆ.

## ಗುರುಕಾರುಣ್ಯ.

**೧೭ ಉರಿವ ಕೆಂಡದ ಮೇಲೆ ತೃಣವ ತಂದಿರಿಸಿದರೆ,**
**ಆ ತೃಣವನಾಕೆಂಡ ನುಂಗಿದಂತೆ ಗುರುಚರಣದ ಮೇಲೆ**
**ತನುವೆಂಬ ತೃಣವ ತಂದಿರಿಸಿದರೆ ಆತನ ಸರ್ವಾಂಗ**
**ವೆಲ್ಲಲಿಂಗ ಕಾಣಾ ರಾಮನಾಥಾ.**

ಗುರುವಿನಿಂದ ಲಿಂಗಧಾರಣೆಯನ್ನು ಹೊಂದಿದ ಭಕ್ತನು ಶುದ್ಧನಾಗುತ್ತಾನೆಂದು ವಚನಕಾರನ ಅಭಿಪ್ರಾಯವಿದೆ. ಅವನು ಇಲ್ಲಿ ಗುರುವಿನನ್ನು ಕೆಂಡಕ್ಕೆ ಹೋಲಿಸಿ, ಅನ್ನುವದೇನಂದರೆ ಹ್ಯಾಗೆ ಕೆಂಡದಲ್ಲಿ ಯಾವ ತರದ ವಸ್ತುವನ್ನು ಹಾಕಿದರೂ ಕೂಡ ಆ ವಸ್ತುವು ತನ್ನ ಪೂರ್ವಸ್ವರೂಪವನ್ನು ಹೋಗಲಾಡಿಸಿಕೊಂಡು ಅಗ್ನಿಮಯವಾಗಿ ಪ್ರಕಾಶಿಸಹತ್ತುತ್ತದೋ ಹಾಗೆಯೇ ಗುರುವಿನ ಕಳೆಯು ಭಕ್ತನನ್ನು ವೇಧಿಸಲಾಗಿ ಅವನು ಗುರುವಿನಂತೆಯೇ ಹೊಳೆಯಹತ್ತುತ್ತಾನೆಂದು ಅವನು ಇಲ್ಲಿ

ಹೇಳುತ್ತಾನೆ. ಭಕ್ತನ ಈ ಹೊಳಪೇ ಲಿಂಗಪ್ರಕಾಶವು. ಹೀಗೆ ಹೊಳೆಯುವವನೇ ಸರ್ವಾಂಗಲಿಂಗಿಯು.

**೧೮ ಗುರು ಕರುಣಿಸಲು ಸಂಸಾರ ವಿಷಯ ಕೆಟ್ಟಿತ್ತು. ಮಾಯಾ ಪ್ರಪಂಚು ಬಿಟ್ಟಿತ್ತು. ಹುಟ್ಟರತು ಹೋಯಿತ್ತು ನೆಟ್ಟಗೆ ಗುರುಪಾದವ ಮುಟ್ಟಿ ಭವಗೆಟ್ಟೆನು ಕಾಣಾ, ರಾಮನಾಥಾ.**

ಅರತುಹೋಗು = ನಾಶವಾಗು.

ಗುರುವು ಉಪದೇಶ ಮಾಡಿದಕೂಡಲೇ ಮನಸ್ಸಿನಲ್ಲಿಯ ವಿಷಯ ಲೋಲುಪತೆಯು ಹೊರಟು ಹೋಗುತ್ತದೆ. ಅಸ್ಥಿರವಾದ ಮಾಯಾಪ್ರಪಂಚು ತೊಲಗಿಹೋಗುತ್ತದೆ. ಪೂರ್ವಜನ್ಮದ ದುಷ್ಟಸಂಸ್ಕಾರಗಳೂ ಹಾರಿಹೋಗುತ್ತವೆ. ಈ ಪ್ರಕಾರ ಗುರುವಿನ ಕರುಣೆಯಿಂದ ಸಂಸಾರವು ನಷ್ಟವಾಗುತ್ತದೆಂದು ವಚನಕಾರನ ಅಭಿಪ್ರಾಯವು.

ಈ ಪ್ರಕಾರ ಲಿಂಗಧಾರಣೆಯ ವಿಚಾರವಿರುವದರಿಂದ ಗುರು ಮತ್ತು ಶಿಷ್ಯ ಇವರಿಬ್ಬರು ಎಂಥ ಉಚ್ಚ ವೃತ್ತಿಯವರಿರಬೇಕೆಂಬದನ್ನು ಬೇರೆ ಹೇಳುವದು ಬೇಡ. ಅವರು ಇಂಥ ವೃತ್ತಿಯವರಿರದಿದ್ದರೆ ಅವರು ಲಿಂಗವುಳ್ಳವರೆಂದು ಹೇಳಲಿಕ್ಕೆ ಬರಲಾರದು. ಈ ಭಾವವನ್ನು ದೇವರದಾಸಿಮಯ್ಯನು ಕೆಳಗೆ ಕಾಣಿಸಿದ ವಚನಗಳಲ್ಲಿ ಹೇಳಿದ್ದಾನೆ.

## ಗುರುಶಿಷ್ಯರು ಉಚ್ಚವೃತ್ತಿಯುಳ್ಳವರಾಗಿರತಕ್ಕದ್ದು.

**೧೯ ಹೊಲಬನರಿಯದ ಗುರುವುಸುಲಭನಲ್ಲದ ಶಿಷ್ಯ ಕೆಲಬಲನ ನೋಡಿ ವಿಚಾರಿಸಿ ಮಾಡದುಪದೇಶ ಅಂಧಕನ ಕಯ್ಯ ಅಂಧಕ ಹಿಡಿದಂತೆ ಕಾಣಾ ರಾಮನಾಥಾ.**

ಹೊಲಬು = ಮಾರ್ಗ, ಜ್ಞಾನ; ಸುಲಭ = ತೀವ್ರವಾಗಿ ತಿಳಿಯುವ ಗುಣವುಳ್ಳ; ಅಂಧಕ = ಕುರುಡ.



ಗುರುವು ಜ್ಞಾನಿಯಾಗಿರತಕ್ಕದ್ದು. ಮತ್ತು ಶಿಷ್ಯನು ಆ ಜ್ಞಾನವನ್ನು ತಿಳಿದುಕೊಳ್ಳಲು ಸಮರ್ಥನಾಗಿರತಕ್ಕದ್ದು. ಈ ಸಂಗತಿಯನ್ನು ವಿಚಾರಿಸಿ ಗುರುವು ಶಿಷ್ಯನಿಗೆ ಉಪದೇಶಕೊಡತಕ್ಕದ್ದು. ಹೀಗೆ ಇಲ್ಲದೆ ಇರುವ ಉಪದೇಶವು ಕುರುಡನು ಮತ್ತೊಬ್ಬ ಕುರುಡನಕಯ್ಯನ್ನು ಹಿಡಿದುಕೊಂಡು ಅವನಿಗೆ ದಾರೀತೋರಿಸಲಿಕ್ಕೆ ಹೋದಂತೆಯೇಸರಿ ಎಂದ ವಚನಕಾರನು ಇಲ್ಲಿ ಹೇಳಿದ್ದಾನೆ. ಅಂದರೆ ಈ ತೆರದ ಲಿಂಗಧಾರಣೆಯು ವ್ಯರ್ಥವೆಂದು ಅವನ ಅಭಿಪ್ರಾಯವು.

**೧೯. ನೆರೆದಡೆ ಗಣಂಗಳು ಹರದರೆ ಕಂಚಗಾರರು. ಲಿಂಗವ ಮಾರಿ ಉಂಬರೆ ಭೋಗಾರರು. ತಮ್ಮ ತಳಿಗೆಯ ಕೊಂಡು ಹೋಗಿ, ಅನ್ಯರ ಮನೆಯಲ್ಲುಂಬ ಕುನ್ನಿಗಳ ನಾನೇನೆಂಬೆ ರಾಮನಾಥಾ?**

ಹರದರೆ = ವ್ಯಾಪಾರಮಾಡಿದರೆ,

ಗುರುವು ಯಾವತೆರದ ಸ್ವಾರ್ಥಭಾವವಿಲ್ಲದೆ ಉಪದೇಶ ಮಾಡಬೇಕೆಂದು ವಚನಕಾರನು ಇಲ್ಲಿ ಅಭಿಪ್ರಾಯ ಪಟ್ಟಿರುತ್ತಾನೆ. ಅನೇಕರು ಅಶನಕ್ಕೆ ಮಾತ್ರ ನೆರೆದು ಊಟಮಾಡಿ ಹೋಗುತ್ತಾರೆ. ಇವರಿಗೆ ಗುರುಗಳೆಂದೆನ್ನಲಾಗದು. ಇವರು ಹೆಸರಿಗೆ ಗಣಂಗಳು ಮಾತ್ರ. ಕಂಚಗಾರರೂ ಭೋಗಾರರೂ ಲಿಂಗದ ಮೂರ್ತಿಯನ್ನು ಕಟಿದು ಅದನ್ನು ಮಾರಿ ತಮ್ಮ ಹೊಟ್ಟೇ ತುಂಬಿಕೊಳ್ಳುತ್ತಾರೆ. ಹೀಗೆ ಮಾಡುವವರಿಗೆ ಗುರಗಳೆನ್ನಬಹುದೋ ಅಂದರೆ ಉಪದೇಶ ಮಾಡುವವನು ಈ ಪ್ರಕಾರ ದುಡ್ಡು ತೆಗೆದುಕೊಂಡು ದೀಕ್ಷೆಯನ್ನು ಮಾಡಲಾಗದು. ಹೀಗೆ ಮಾಡಿದರೆ ಅವನಿಗೆ ಗುರುವೆಂದು ಎನ್ನಲಾಗದು. ಬೇರೆ ಕೆಲವರು ಎರಡನೇದವರ ಕೂಳಿಗೆ ಆಶೆಮಾಡಿ ಅವರಲ್ಲಿ ಹೋಗಿ ಉಂಡು ಬರುತ್ತಾರೆ. ಇವರಿಗಾದರೂ ಗುರುಗಳೆಂದು ಎನ್ನಲಾಗದು. ಈ ಪ್ರಕಾರ ಯಾರು ಉಪದೇಶ ಮಾಡುತ್ತಾರೋ ಅವರು ನಿಷ್ಪ್ರಯೋಜಕರೆಂದು ವಚನಕಾರನು ಇಲ್ಲಿ ಹೇಳಿದ್ದಾನೆ.

## ಲಿಂಗಧಾರಣೆಯಿಂದ ಮೋಕ್ಷವು.

೨೦ ಕರಸ್ಥಲನೆಂಬ ದಿವ್ಯವಿಭೂತಿಯೊಳಗೆ ಮಹಾಘನಲಿಂಗ ನಿಕ್ಷೇಪವಾಗಿದೆ ಈ ದಿವ್ಯ ನಿಕ್ಷೇಪವನಾರಾಧಿಸುವಡೆ ಅಂಜನ ಸಿದ್ಧಿ ಇಲ್ಲದೆ ಸಾಧಿಸಬಾರದು. ಲಿಪಿ ಇಲ್ಲದೆ ತೆಗವರಸಡಳ. ಆ ಲಿಪಿಯ ಪ್ರಮಾಣ ಪಷತ್ತತ್ವದ ಮೇಲೆ ನಿಶ್ಚೈಸಿ, ಆ ನಿಶ್ಚಯದೊಳಗೆ ಈ ನಿಕ್ಷೇಪ ಕರ್ತೃವಿನ ಹೆಸರ ತೀಯಲೋದುವನ್ನಬರ ಆತ ನಮ್ಮ ಹೆತ್ತಯ್ಯನೆಂಬ ಹೆಸರೊಂದಿತ್ತು. ಆ ಓದಿಕೆಯ ಕಡೆಯಕ್ಕರದೊಳಗೆ ಅಂಜನ ಸಿದ್ಧಿಯ ಹೇಳಿತ್ತು. ಅದಾವ ಪರಿ ಕ್ರಮುದಂಜನವೆಂದೊಡೆ, ಅದು ನಮ್ಮ ಹೆತ್ತಯ್ಯ ಜಗದ್ವಿಲಾಸ ತದರ್ಥವಾಗಿ ಆ ತನ್ನ ಮೂಲಶಕ್ತಿ ಸಂಭೂತವಾದಂದು ಅಲ್ಲಿ ಹುಟ್ಟಿದ ದಿವ್ಯ ಚಿತ್ಕಳೆಯಿಂದೊದಗಿದ ದಿವ್ಯಭಸಿತವೆಂದಿತ್ತು. ಆ ದಿವ್ಯ ಭಸಿತವೆಂಬ ದಿವ್ಯಾಂಜನವ ಪಡೆಕೊಂಡು ಅತಿ ವಿಶ್ವಾಸದಿಂದ ನಾನೆಂಬ ಹಣೆಗಣ್ಣಿಂಗೆಚ್ಚಿ ಸರ್ವಾಂಗ ತೀವಲೊಡನೆ ಕರಸ್ಥಲದೊಳಗಣ ನಿಕ್ಷೇಪ ಕಣ್ದೆರವಾಯಿತ್ತು. ಆ ಕಣ್ದೆರವಾದ ನಿಕ್ಷೇಪವ ದೃಷ್ಟಿಮುಟ್ಟಿದಡೆ ಅಲ್ಲಿ ನಮ್ಮ ಹೆತ್ತಯ್ಯನ ಹೊಳವಕಂಡು ತಳವೆಳಗಾದೆನು ಕಾಣಾ ರಾಮನಾಥಾ.

ತಳವೆಳಗಾಗು = ಬೆರಗಾಗು,

ಇಲ್ಲಿ ವಚನಕಾರನು ಲಿಂಗಧಾರಣೆಯಿಂದ ಮೋಕ್ಷವು ಹ್ಯಾಗೆ ಲಭಿಸುತ್ತದೆಂಬದನ್ನೂ ಹೇಳಿದ್ದಾನೆ. ಹ್ಯಾಗೆಂದರೆ:—ಲಿಂಗಧಾರಣೆಯಾದಬಳಿಕ ಲಿಂಗವನ್ನು ತನ್ನ ಹಸ್ತದಲ್ಲಿರಿಸಿ ಅದರಲ್ಲಿಯ ಸೂಕ್ಷ್ಮಲಿಂಗವನ್ನು ಕಂಡುಹಿಡಿಯಲು ಧ್ಯಾನಯುಕ್ತನಾಗಿರುವದು ಲಿಂಗಧಾರಿಯ ಕರ್ತವ್ಯವಾಗಿದೆ. ಭೂಮಿಯಲ್ಲಿ ಹ್ಯಾಗೆ ಧನವು ಅಡಗಿಕೊಂಡಿರುತ್ತದೋ ಹಾಗೆ ಆ ಹಸ್ತದಲ್ಲಿ ಸೂಕ್ಷ್ಮಲಿಂಗವು ಅಡಗಿಕೊಂಡಿರುತ್ತದೆ. ಅಂದರೆ ಲಿಂಗವೆಂದರೆ ಕೇವಲಸ್ಥೂಲಲಿಂಗವಲ್ಲ. ಆದರೆ ಕ್ರಿಯಾದರ್ಶಕವಾದ



ಹಸ್ತದೊಳಗೆ ನಿಕ್ಷೇಪದಂತೆ ಹುದುಗಿ ಕೊಂಡಿದ್ದ ಬೇರೊಂದು ಸೂಕ್ಷ್ಮಲಿಂಗವೆಂದು ಅವನ ಅಭಿಪ್ರಾಯವು. ಈ ಒಳಗಿನ ಸೂಕ್ಷ್ಮಲಿಂಗವನ್ನು ಭಕ್ತನು ಕಾಣತಕ್ಕದ್ದು. ಈ ಲಿಂಗವು ಕ್ರಿಯೆಯದರ್ಶಕವಾದ ಭಕ್ತನಹಸ್ತದಲ್ಲಿಯೇ ಅಡಗಿಕೊಂಡಿರುತ್ತದೆ.

ಈ ಸೂಕ್ಷ್ಮಲಿಂಗವನ್ನು ಅರಿಯಬೇಕಾದರೆ ಹ್ಯಾಗೆ ನಿಕ್ಷೇಪವನ್ನು ಕಂಡುಹಿಡಿಯಲು ಅಂಜನಸಿದ್ಧರು ಅಂಜನವನ್ನು ಉಪಯೋಗಿಸುತ್ತಾರೋ ಹಾಗೆಯೇ ಭಕ್ತನಿಗೂ ಈ ತರದ ಸಹಾಯವು ಅವಶ್ಯವದೆ. ಈ ಅಂಜನಸಿದ್ಧರು ಅಂಜನವನ್ನು ಉಪಯೋಗಿಸುವ ಮೊದಲು ನಿಕ್ಷೇಪವು ಇಂಥಲ್ಲಿದೆ ಎಂದು ಹೇಳುವ ಲಿಪಿಯೊಂದನ್ನು ಹುಡುಕಿಕೊಳ್ಳುತ್ತಾರೆ. ಹಾಗೆಯೇ ಭಕ್ತನು ಒಂದು ಲಿಪಿಯನ್ನು ಹುಡುಕತಕ್ಕದ್ದು. ಈ ಲಿಪಿ ಎಂದರೆ ಭಕ್ತನಲ್ಲಿಯ ಪೃಥ್ವಿ, ಅಪ್, ತೇಜ ಮೊದಲಾದ ೫ ತತ್ವಗಳೇ ಇವೆ. ಮನುಷ್ಯನು ಸಾಧಾರಣವಾಗಿ ಈ ತತ್ವಗಳಿಗೆ ಒಳಗಾಗಿ ವರ್ತಿಸುತ್ತಾನೆ. ಅವನಲ್ಲಿಯ ಗುಣಗಳು ಈ ತತ್ವಗಳಿಂದಲೇ ಉಂಟಾಗಿರುತ್ತವೆ. ಅದ್ದರಿಂದ ಈ ತತ್ವಗಳನ್ನು ಅವನು ಮೊದಲು ತಿಳಿಯಲಿಕ್ಕೆಬೇಕು. ಇವುಗಳನ್ನು ತಿಳಿದಬಳಿಕ ಇವುಗಳ ಮೇಲಿರುವ ಆತ್ಮತತ್ವವನ್ನು ತಿಳಿಯಲು ಭಕ್ತನು ಶಕ್ತನಾಗುತ್ತಾನೆ. ಈ ಆತ್ಮ ತತ್ವದ ಅರಿವೇ ಇದೊಂದು ಒಳಗಿದ್ದ ನಿಕ್ಷೇಪವನ್ನು ಕಾಣಲು ಅಂಜನದಂತೆ ಆಗುತ್ತದೆ.

ಈ ಆತ್ಮ ಲಿಂಗದಿಂದಲೇ ಭಕ್ತನು ಹುಟ್ಟಿದವನಾಗಿರುವದರಿಂದ ಈ ಲಿಂಗವೇ ಭಕ್ತನಿಗೆ ಹೆತ್ತಯ್ಯನು. ಈ ಹೆತ್ತಯ್ಯನ ಸ್ವರೂಪು ಹೇಗೆಂದರೆ ಅವನಿಗೆ ಜಗತ್ತಿನಲ್ಲಿ ವಿಲಾಸಮಾಡಬೇಕೆಂಬ ಇಚ್ಛೆಯು ಉತ್ಪನ್ನವಾದಕೂಡಲೇ ಆ ಇಚ್ಛೆಯೇ ಮೂಲಶಕ್ತಿಎಂದೆನಿಸಿಕೊಳ್ಳುತ್ತದೆ. ಈ ಶಕ್ತಿಯೇ ಜಗತ್ತನ್ನು ಹುಟ್ಟಿಸಲಿಕ್ಕೆ ಕಾರಣವಾಗುತ್ತದೆ. ಮತ್ತು ಅದು ಜಗತ್ತನ್ನು ವ್ಯಾಪಿಸಿ ಅದರ ಪ್ರಭಾವವು ಭಸಿತರೂಪವಾಗಿ ಭಕ್ತನಲ್ಲಿ ಕಾಣಿಸಿಕೊಳ್ಳುತ್ತದೆ. ಈ ಭಸಿತವನ್ನೇ ಭಕ್ತನು ಹಣೆಯಲ್ಲಿ ಅತಿ ವಿಶ್ವಾಸದಿಂದ ಹಚ್ಚಿಕೊಳ್ಳುವದರಿಂದ ಅದರ ಪ್ರಭಾವವು ಅವನ ಸರ್ವಾಂಗವನ್ನೆಲ್ಲ ವ್ಯಾಪಿಸುತ್ತದೆ. ಈ ಸ್ಥಿತಿಯುಂಟಾದಕೂಡಲೇ ಅಂಗೈಯಲ್ಲಿರುವ ಲಿಂಗದೊಳಗಿನ ಸೂಕ್ಷ್ಮಲಿಂಗವು ಕಣ್ಣಿಗೆ ಕಾಣಿಸುತ್ತದೆ. ಅದು ಕಣ್ಣಿಗೆ ಕಾಣಿಸಿದ ಕೂಡಲೇ ಮನುಷ್ಯನು ಅದರಲ್ಲಿ ಏಕಾಕಾರನಾಗಿ ಮೋಕ್ಷಪದವನ್ನು ಹೊಂದಲು ಶಕ್ತನಾಗುತ್ತಾನೆ.

ಅಂದರೆ ಭಕ್ತನು ಲಿಂಗಧಾರಣ ಮಾಡಿದ ಬಳಿಕ, ತನ್ನನ್ನು ನಾನಾ ದಿಕ್ಕಿಗೆ ಒಯ್ಯುವ ತತ್ವಗಳ ಸಮುದಾಯವನ್ನು ನಿವಾರಣೆಮಾಡಬೇಕು. ಅಂದರೆ ಸತ್ಕ್ರಿಯೆಯಿಂದ ಆಚರಿಸಬೇಕು. ಇದರಿಂದ ಅವನಿಗೆ ಆತ್ಮಜ್ಞಾನವು ಉಂಟಾಗುವದು. ಈ ಜ್ಞಾನವೇ ಅವನಿಗೆ ಅಂಜನವು. ಇದೇ ಅವನಿಗೆ ಸೂಕ್ಷ್ಮಲಿಂಗವನ್ನು ತೋರಿಸುತ್ತದೆ. ಈ ಸೂಕ್ಷ್ಮಲಿಂಗವೇ ಭಸಿತರೂಪವಾಗಿ ಭಕ್ತನ ಬಾಹ್ಯಾಂಗದಲ್ಲಿಯೂ, ಮಂತ್ರರೂಪವಾಗಿ ಭಕ್ತನ ಸೂಕ್ಷ್ಮಾಂಗದಲ್ಲಿಯೂ ಚರಿಸುತ್ತದೆ. ಈ ವಿಷಯವನ್ನು ಕಂಡುಹಿಡಿದು ಯಾವಭಕ್ತನು ಆಚರಿಸುತ್ತಾನೋ ಅವನು ಲಿಂಗದಲ್ಲಿ ಏಕಾಕಾರನಾಗಿ ಮೋಕ್ಷವನ್ನು ಹೊಂದುತ್ತಾನೆಂದು ವಚನಕಾರನ ಅಭಿಪ್ರಾಯವದೆ.

ಅಂದರೆ ಲಿಂಗಧಾರಣೆಯ ಕಾಲಕ್ಕೆ ಮಂತ್ರೋಪದೇಶವಾಗುವದರಿಂದ ಮನುಷ್ಯನ ತತ್ವಗಳು ಅಡಗಿ ಹೋಗುತ್ತವೆ. ಮತ್ತು ಮುಂದೆ ಅವನು ಅಷ್ಟಾವರಣ ಯುಕ್ತನಾಗಿ ಆಚರಿಸುವವರಿಂದ ಅವನು ಪ್ರಾಣಲಿಂಗವನ್ನು ಅರಿತುಕೊಂಡು ಮೋಕ್ಷಪದ ಹೊಂದುತ್ತಾನೆಂದು ಈ ವಚನದ ಭಾವಾರ್ಥವಿದೆ.

---

## ಲಿಂಗಧಾರಣೆಯ ಅವಶ್ಯಕತೆ.

**೨೧. ಗುರುಲಿಂಗ ಒಂದೆಂಬರು. ಗುರುಲಿಂಗ ಒಂದಾದ ಠಾವ ತಿಳಿದು ನೋಡಿರೇ. ಗುರುಕಾರುಣ್ಯವಾದ ಬಳಿಕ, ಅಂಗದ ಮೇಲೆ ಲಿಂಗವಿರಬೇಕು. ಲಿಂಗವಿಲ್ಲದ ಗುರುಕಾರುಣ್ಯವು ಬತ್ತಿದ ಕೆರೆಯಲ್ಲಿ ತಾವರೆಯ ಬಿತ್ತಿದಂತೆ ಕಾಣಾ ರಾಮನಾಥಾ**

ಲಿಂಗ ಧಾರಣೆಯಾದ ಬಳಿಕ, ಆ ಲಿಂಗವೇ ಭಕ್ತನಿಗೆ ಗುರುಸ್ವರೂಪವು. ಯಾಕೆಂದರೆ ಮಂತ್ರರೂಪನಾಗಿ ಆ ಗುರುವು ಆ ಲಿಂಗಕ್ಕೆ ಚೈತನ್ಯವನ್ನುಂಟು ಮಾಡುತ್ತಾನೆ. ಗುರು ಮತ್ತು ಲಿಂಗ ಇವುಗಳು ಒಂದೇ ಎಂದೆನ್ನುವದು ಇದೇ ಇರುತ್ತದೆ. ಇದಕ್ಕೆಯೇ ಗುರುಕಾರುಣ್ಯವೆಂದೆನ್ನುತ್ತಾರೆ. ಈ ಪ್ರಕಾರ ಗುರುಕಾರುಣ್ಯ ಹೊಂದಿದವನು ಯಾವಾಗಲು ಲಿಂಗಧಾರಕನಾಗಿರತಕ್ಕದ್ದು. ಎಷ್ಟೋ ಜನರು ಲಿಂಗಧಾರಣೆಯನ್ನು ಮಾಡದೆ ಗುರುಕಾರುಣ್ಯ ಉಂಟಾಗಬಹುದೆಂದು ಅನ್ನುವರು. ಇದು ತಪ್ಪೆಂದು ವಚನಕಾರನ ಅಭಿಪ್ರಾಯವು. ಹೀಗೆ ಮಾಡುವದೆಂದರೆ ಬತ್ತಿಹೋದ ಕೆರೆಯಲ್ಲಿ ಕಮಲವನ್ನು ಬಿತ್ತಿದಂತೆಯೇ ಸರಿ. ಅಂದರೆ ಹ್ಯಾಗೆ ನೀರು ಕಮಲಕ್ಕೆ ಪೋಷಕವಾಗಿರುತ್ತದೋ ಹಾಗೆ ಲಿಂಗಧಾರಣೆಯು ಭಕ್ತನಿಗೆ ಪೋಷಕವಾಗಿರುತ್ತದೆಂದು ವಚನಕಾರನ ಅಭಿಪ್ರಾಯವು. ಈ ಪ್ರಕಾರ ಲಿಂಗಧಾರಣೆಯನ್ನು ಹೊಂದಿ ಮೋಕ್ಷವನ್ನು ಹೊಂದತಕ್ಕದ್ದು.



---

ಈ ಮೇರೆಗೆ ಲಿಂಗಧಾರಣವಾದ ಬಳಿಕ ಭಕ್ತನು ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಎಂಬ ಆರು ಸ್ಥಲಗಳಿಗೆ ಒಳಗಾಗಿ ನಡೆದು ಮೋಕ್ಷವನ್ನು ಹೊಂದತಕ್ಕದ್ದು. ಈ ಆರು ಸ್ಥಲಗಳನ್ನು ವಚನಕಾರನು ಮುಂದೆ ವಿವರಿಸುತ್ತಾನೆ. ಇವುಗಳಲ್ಲಿ ಮೊದಲನೆಯದಾದ ಭಕ್ತಸ್ಥಲದ ವಿವರವು ಹ್ಯಾಗೆಂದರೆ:—

## ಭಕ್ತಸ್ಥಲ.

ಲಿಂಗಧಾರಣೆಯಾದ ಬಳಿಕ ಭಕ್ತನು ಮಾಯೆಗೆ ಒಳಗಾಗಿ ಎಂದೂ ನಡೆಯಕೂಡದು. ಅದು ಅವನ ಮನಸ್ಸನ್ನು ನಾನಾತೆರದ ವಿಷಯಗಳಿಗೆ ಒಲಿಸುತ್ತದೆ. ಈ ಒಲವನ್ನು ತಡೆಯುವದೇ ಭಕ್ತನ ಆದ್ಯ ಕರ್ತವ್ಯವು.

### ಭಕ್ತನು ಮಾಯಾ ರಹಿತನಾಗಿ ವರ್ತಿಸತಕ್ಕದ್ದು.

**೨೨. ತಾಯ ಗರ್ಭದಲ್ಲಿ ಶಿಸು ತಾಯಕುರುಹನರಿಯದು. ಆ ತಾಯಿ ಶಿಸುವಿನ ಕುರುಹನೆಂದೂ ಅರಿಯಳು. ಮಾಯಾ ಮೋಹದಲ್ಲಿಪ್ಪ ಭಕ್ತರು ದೇವರನರಿಯರು. ಆ ದೇವರು ಆ ಭಕ್ತರನೆಂದೂ ಅರಿಯನು ಕಾಣಾ ರಾಮನಾಥಾ**

**೨೩. ಬಸಿರೊಳಗಣ ಶಿಸು ತಾಯ ಮುಖವನರಿಯದು. ತಾಯಿಯಾಶಿಸುವಿನ ಮುಖವನೆಂದೂ ಅರಿ**

ಯಳು ಮಾಯಾಪ್ರಪಂಚಿನೊಳಗಿಹ ಭಕ್ತ ದೇವರನರಿಯ ದೇವರಾಭಕ್ತನನೆಂದೂ ಅರಿಯ ಕಾಣಾ ರಾಮನಾಥಾ.

ಯಾವ ಮನುಷ್ಯನು ಮಾಯಾಪಾಶದಲ್ಲಿ ಸಿಲ್ಕಿರುತ್ತಾನೋ ಅವನ ಮೇಲೆ ದೇವರ ಕೃಪೆಯು ಎಂದಿಗೂ ಆಗದು ಎಂದು ಈ ವಚನದಲ್ಲಿ ವಚನಕಾರನು ಹೇಳಿರುತ್ತಾನೆ. ಇದಕ್ಕೊಂದು ಅವನು ಒಂದು ಸುಂದರವಾದ ದೃಷ್ಟಾಂತವನ್ನು ಕೊಟ್ಟಿರುವನು. ಆ ದೃಷ್ಟಾಂತದ ಭಾವವು ಸ್ಪಷ್ಟವದೆ.

೨೪. ಎನ್ನೊಡಲಾದರೆ ಎನ್ನಿಚ್ಛೆಯಲ್ಲಿರದೆ? ನಿನ್ನೊಡಲಾದರೆ ನಿನ್ನಿಚ್ಛೆಯಲ್ಲಿರದೆ? ಅದು ಎನ್ನೊಡಲೂ ಅಲ್ಲ, ನಿನ್ನೊಡಲೂ ಅಲ್ಲ. ಅದು ನೀ ಮಾಡಿದ ಜಗದ ಬಿನ್ನಾಣದೊಡಲು ಕಾಣಾ ರಾಮನಾಥಾ

ಬಿನ್ನಾಣ=ಜ್ಞಾನ, ರೀತಿ, ಹದ.

ಇಲ್ಲಿ ವಚನಕಾರನು ಮಾಯೆಯ ಸ್ವರೂಪವನ್ನು ವಿವರಿಸುತ್ತಾನೆ. ಅದು ಮನುಷ್ಯನದೂ ಅಲ್ಲ, ಪರಮಾತ್ಮನದೂ ಅಲ್ಲ ಎಂದು ಅನ್ನುತ್ತಾನೆ. ಮಾಯೆಯು ಮನುಷ್ಯನದಾದರೆ, ಅದು ಅವನ ಅಂಕಿತವಲ್ಲಿರಬೇಕು. ಆದರೆ ಅದು ಅವನ ಅಂಕಿತದಲ್ಲಿರುವದಿಲ್ಲ. ಅದು ಅತಿ ಚಾಂಚಲ್ಯವುಳ್ಳದು. ಅದು ಪರಮಾತ್ಮನದಾದರೆ, ಪರಮಾತ್ಮನಂತೆ ಅತಿ ಶುದ್ಧವಾಗಿರತಕ್ಕದ್ದು. ಆದರೆ ಮಾಯೆಯು ಶುದ್ಧವಾಗಿಲ್ಲ. ಅದು ಹೀನ ಕೆಲಸಗಳಿಗೆ ಮನಸ್ಸನ್ನು ಒಲಿಸುತ್ತದೆ. ಆದ್ದರಿಂದ ಅದು ಒಂದು ಜಗತ್ತಿನ ರೀತಿ ಎಂದು ವಚನಕಾರನು ಇಲ್ಲಿ ಅನ್ನುತ್ತಾನೆ.

೨೫. ಹಸಿವೆಂಬ ಹೆಬ್ಬಾವು ಬಸುರ ಬಂದು ಹಿಡಿದಡೆ ವಿಷವೇರಿತ್ತಯ್ಯ ಆಪಾದಮಸ್ತಕಕ್ಕೆ. ಹಸಿವಿಗನ್ನವನಿಕ್ಕಿ ವಿಷವನಿಳುಹ ಬಲ್ಲಡೆ ವಸುಧೆಯೊಳಗಾತನೆ ಗಾರುಡಿಗ ಕಾಣಾ ರಾಮನಾಥಾ.

ಹಸಿವೆ ಎಂಬುವಂಥ ಹೆಬ್ಬಾವು ಮನುಷ್ಯನನ್ನು ಆವರಿಸಿಕೊಂಡಿದೆ. ಈ ಹಸಿವೆಯು ಮನುಷ್ಯನನ್ನು ನಾನಾ ವಿಷಯಗಳಿಗೆ ಎಳಿಸುತ್ತದೆ.



ಆದ್ದರಿಂದ ಇದನ್ನು ಯಾವನು ತಡೆಯುತ್ತಾನೋ ಅವನೇ ನಿಜವಾದ ಗಾರುಡಿಗನು, ಸರ್ಪವಿದ್ಯೆ ಬಲ್ಲವನು ಎಂದು ವಚನಕಾರನು ಇಲ್ಲಿ ಹೇಳಿದ್ದಾನೆ. ಅಂದರೆ ವಿಷಯಗಳೊಳಗೆ ಒಳಗಾಗಿ ಯಾವನು ನಡೆಯುವದಿಲ್ಲವೋ ಅವನೇ ಮಾಯೆಯನ್ನು ಗೆಲ್ಲಲು ಸಮರ್ಥನೆಂದು ಅವನ ಭಾವವು.

೨೬. ನಡೆ ನೋಟ ಸೊಲ್ಲೆಡೆಯಲ್ಲಿ ಒಂದು ಕಿಚ್ಚು, ಮಡದಿ ಪುರುಷರೆಡೆಯಲ್ಲಿ ಒಂದು ಕಿಚ್ಚು. ತಡೆದುಂಬ ಎಡೆಯಲ್ಲಿ ಒಂದು ಕಿಚ್ಚು, ಪಡೆದರ್ಥ ಕೆಟ್ಟೆಡೆಯಲ್ಲಿ ಒಂದು ಕಿಚ್ಚು, ಕೂಡಿದ ದ್ರವ್ಯದ ಮೋಹದೆಡೆಯಲ್ಲಿ ಒಂದು ಕಿಚ್ಚು ಇಂತೀ ಐದು ಕಿಚ್ಚನಿಕ್ಕಿ ಬಾಯಲ್ಲಿ ಮಣ್ಣ ಹೊಯಿದು ಕೆಡಿಸಿದೆಯಯ್ಯಾ ಕಾಣಾ ರಾಮನಾಥಾ.

ಸೊಲ್ಲು=ಧ್ವನಿ,

ಇಲ್ಲಿ ವಚನಕಾರನು ಮಾಯೆಯು ಯಾವ ಯಾವ ಐದು ಬಗೆಯಲ್ಲಿ ಮನುಷ್ಯನನ್ನು ಕಾಡಿ ನಾಶಗೊಳಿಸುತ್ತದೆಂಬದನ್ನು ಹೇಳಿದ್ದಾನೆ. ಭಾವವು ಸ್ಪಷ್ಟವಿದೆ.

೨೭. ಸಂಸಾರದೆಡೆಯಲ್ಲಿ ದುಃಖವಲ್ಲದೆ ಸುಖವಿಲ್ಲ ನೋಡಾ. ಅದೆಂತೆಂದೊಡೆ ''ಭಾರ್ಯಾವಿಯೋಗಸ್ಸ್ವಜನಾಪವಾದಃ। ಋಣಸ್ಯ ಶೇಷಂ ಅಧಮಸ್ಯ ಸೇವಾ॥ ದಾರಿದ್ರ್ಯಕಾಲೇ ಪ್ರಿಯದರ್ಶನಂ ಚ। ವಿನಾಗ್ನಿನಾ ಪಂಚ ದಹಂತಿ ಕಾಯಂ॥ ಇಂತೆಂದುದಾಗಿ ಈಯೈದು ಕಿಚ್ಚನಿಕ್ಕಿ ಮಣ್ಣಹೊಯಿದು ಕೆಡಿಸಿದೆಯಯ್ಯಾ ರಾಮನಾಥಾ.

ವಚನಕಾರನು ಮಾಯೆಯು ಇನ್ನು ಬೇರೆ ಐದು ವಿಧಗಳಿಂದ ಮನುಷ್ಯನನ್ನು ಹ್ಯಾಗೆ ಕಾಡುತ್ತಿದೆಂಬದನ್ನು ಇಲ್ಲಿ ವಿವರಿಸಿದ್ದಾನೆ. ಆ ವಿಧಗಳು ಯಾವವೆಂದರೆ:—ಹೆಂಡತಿಯ ವಿಯೋಗ, ಜನಾಪವಾದ, ಸಾಲದ ಬಾಧೆ, ಅಧಮರ ಸೇವೆ, ದಾರಿದ್ರ್ಯ ಕಾಲದಲ್ಲಿ ಸ್ನೇಹಿತರ ದರ್ಶನ ಇವುಗಳು ಇರುತ್ತವೆ, ಎಂದು ಹೇಳಿದ್ದಾನೆ.

೨೮. ದರುಶನ ತಪ್ಪುಕ ಪ್ರಥಮ ಪಾತಕ, ಸ್ಪರ್ಶನ ತಪ್ಪುಕ ದ್ವಿತೀಯ ಪಾತಕ, ಗುರುತಪ್ಪುಕ ತೃತೀಯ ಪಾತಕ, ಪರದಾರ ಚತುರ್ಥ ಪಾತಕ, ಮಾಂಸಾಹಾರ ಪಂಚಮಹಾಪಾತಕ ಈ ಐವರೊಡನೆ ನೀನುಡಿಯ ಲಿಲ್ಲೈ ರಾಮನಾಥಾ.

ಇಲ್ಲಿ ವಚನಕಾರನು ಯಾವ ಯಾವ ತಪ್ಪುಗಳು ಪಂಚಮಹಾ ಪಾತಕಗಳೆಂಬವನ್ನು ವಿವರಿಸಿದ್ದಾನೆ.



## ಭಕ್ತಿಯ ಮತ್ತು ನೀತಿಯ ವಚನಗಳು.

ಈ ವರೆಗೆ ದೇವರ ದಾಸಿಮಯ್ಯನು ಪರಮಾತ್ಮನ ಸ್ವರೂಪು ಹ್ಯಾಗೆ ಇದೆ, ಮನುಷ್ಯನು ಮಾನವ ಜನ್ಮಕ್ಕೆ ಬಂದ ಬಳಿಕ ಏನನ್ನು ಕುರಿತು ಅವನು ಪ್ರಯತ್ನಿಸತಕ್ಕದ್ದು ಮತ್ತು ಅವನ ಈ ಪ್ರಯತ್ನಗಳಲ್ಲಿ ಅಡ್ಡಬರುವ ಸಂಗತಿಗಳಾವವು ಎಂಬುದನ್ನೂ ವಿವರಿಸಿ, ಮುಂದೆ ಭಕ್ತಿಯ ಮತ್ತು ನೀತಿಯ ವಿಷಯಗಳನ್ನು ಅರುಹುತ್ತಾನೆ. ಭಕ್ತಿಗೆ ಶ್ರದ್ಧೆ ಅಥವಾ ವಿಶ್ವಾಸವೇ ಕಾರಣವಾಗಿರುತ್ತದೆ. ಈ ಬಗ್ಗೆ ಅವನು ಅನ್ನುವದೇನಂದರೆಃ—

### ಭಕ್ತನು ಶ್ರದ್ಧೆಯುಳ್ಳವನಾಗಿರತಕ್ಕದ್ದು.

೨೯. ಭಕ್ತಿಯ ಬಲ್ಲವರು ನಚ್ಚಿ ಮಚ್ಚಿ ಮನವ ನೊಚ್ಚ ಗೊಡುವರು. ಭಕ್ತಿಯನರಿಯದ ಬಲು ಪಾಪಿ ಜೀವಿಗಳು ಕಚ್ಚುವರು ಬೊಗಳುವರು ಕಾಣಾ ರಾಮನಾಥಾ.

ಒಚ್ಚತ=ಆನಂದ, ಪ್ರೀತಿ,

ಭಕ್ತಿಯುಳ್ಳವರು ಪರಮಾತ್ಮನಲ್ಲಿ ವಿಶ್ವಾಸವನ್ನಿಟ್ಟು ನಡೆಯುತ್ತಾರೆ. ಆದರೆ ಭಕ್ತಿಯಿಲ್ಲದವರು ಯಾವಾಗಲೂ ಪಾಪಕರ್ಮಗಳಲ್ಲಿ ನಿರತರಾಗಿ ಪರಪೀಡೆಯಲ್ಲಿ ತೊಡಗಿರುತ್ತಾರೆಂದು ಇಲ್ಲಿ ವಚನಕಾರನು ಹೇಳುತ್ತಾನೆ.

೩೦. ಜ್ವರವಿಡಿದ ಬಾಯಿಗೆ ನೊರೆವಾಲು ಒಲಿವುದೆ? ನರಕದಲ್ಲಿ ಬೀಳುವ ಮನುಜರಿಗೆ ಶಿವಭಕ್ತಿ ಎಂಬುದು ಕರಗಹಿ ಕಾಣಾ ರಾಮನಾಥಾ.

ಕರ=ಅತಿಶಯ,

ನೊರೆವಾಲು ಎಷ್ಟು ರುಚಿಕರವಾಗಿದ್ದರೂ ಹ್ಯಾಗೆ ಅದು ಜ್ವರ ಪೀಡಿತನ ಬಾಯಿಗೆ ಸೇರುವದಿಲ್ಲವೋ ಹಾಗೆ ಪರಮಾತ್ಮನಲ್ಲಿ ಭಕ್ತಿ ಎಂಬುದು ದುಷ್ಟ ಕೃತ್ಯಗಳಲ್ಲಿರುವವರ ಬಾಯಿಗೆ ಬಹಳ ಕಹಿಯಾಗಿರುತ್ತದೆಂದು ಇಲ್ಲಿ ಹೇಳುತ್ತಾನೆ.

೩೧. ಕತ್ತೆ ಬಲ್ಲುದೆ ಕಸ್ತುರಿಯ ವಾಸನೆಯ? ತೊತ್ತು ಬಲ್ಲಳೆ ಗುರು ಹಿರಿಯರುತ್ತಮರೆಂಬುದ? ಭಕ್ತಿಯನರಿಯದ ವ್ಯರ್ಥಜೀವಿಗಳು ನಿಮ್ಮನೆತ್ತ ಬಲ್ಲರೈ ರಾಮನಾಥಾ?

ಕತ್ತೆಯು ಮತ್ತು ತೊತ್ತು ತಮ್ಮ ಸಮೀಪದಲ್ಲಿರುವವರ ನಿಜಸ್ಥಿತಿಯನ್ನು ಹ್ಯಾಗೆ ಅರಿಯವೋ ಹಾಗೆ ಭಕ್ತಿಯಿಲ್ಲದವರು ಪರಮಾತ್ಮನು ಸೆರೆಯಲ್ಲಿದ್ದರೂ ಕೂಡ ಅವನ ನಿಜವನ್ನು ಅರಿಯರೆಂದು ಇಲ್ಲಿ ಹೇಳುತ್ತಾನೆ.

೩೨. ನೆರೆನಂಬಿ ಕರೆದರೆ ನರಿ ಕುದುರೆಯಾಗಿ ಹರಿಯವೆ? ಜಗವೆಲ್ಲ ಅರಿಯಲು ತೊರೆಯೊಳಗೆ ಬಿದ್ದ ಲಿಂಗ ಕರೆದರೆ ಬಂದುದು ಕರಸ್ಥಲಕ್ಕೆ. ನಂಬದೆ ಕರೆದವರ ಹಂಬಲನೊಲ್ಲ ನಮ್ಮ ರಾಮನಾಥಾ.

ಭಕ್ತಿ ಇದ್ದವನಲ್ಲಿ ಒಂದು ವಿಶೇಷ ಸಾಮರ್ಥ್ಯವು ಬರುತ್ತದೆಂದು ಹೇಳಿ, ದೇವರ ದಾಸಿಮಯ್ಯನು ಕೆಲವು ಉದಾಹರಣೆಗಳನ್ನು ಇಲ್ಲಿ ಕೊಟ್ಟಿದ್ದಾನೆ.

೩೩. ನಂಬಿ ನೆಚ್ಚಿದೆನೆಂದ ಮನವನಿಂಬುಗೊಡದಿರಿ. ಕಾಯದ ಮಾಯದ ಕಷ್ಟ ಕರ್ಮ ಸಂಸಾರಕ್ಕೆ ತನುಮನಧನದಲ್ಲಿ ನೆನಹುಳ್ಳವರ ಕನಸಿನಲ್ಲಿ ಅರಿಯ ನಮ್ಮ ರಾಮನಾಥಾ.

ಮನಸ್ಸು ಪರಮಾತ್ಮನಲ್ಲಿ ವಿಶ್ವಾಸವಿಟ್ಟಿನೆಂದು ಅಂದರೂ ಅದರ ಮೇಲೆ ಭರವಸೆ ಇಡಬೇಡ. ಯಾಕಂದರೆ ಅದು ತನ್ನ ತನುಮನಧನವನ್ನು ದುಷ್ಟ ಕರ್ಮಗಳಿಂದ ತುಂಬಿದ ಸಂಸಾರಕ್ಕೋಸ್ಕರ ಉಪಯೋಗಿಸುತ್ತಿರುತ್ತದೆ. ಈ ಸ್ಥಿತಿಯುಳ್ಳವರನ್ನು ಪರಮಾತ್ಮನು ಎಂದಿಗೂ ಲಕ್ಷಿಸನು.

೩೪. ಬರು ಶಠಗನ ಭಕ್ತಿ ದಿಟವೆಂದು ನಚ್ಚಲು ಬೇಡ. ಮಠದೊಳಗಣ ಬೆಕ್ಕು ಇಲಿಯ ಕಂಡು ಪುಟನೆಗೆದಂತಾಯಿತ್ತು ಕಾಣಾ ರಾಮನಾಥಾ.

ಶಠಗ=ಕೆಟ್ಟ ಮನುಷ್ಯ, ಪುಟನೆಗೆ=ಹಾರು,



ದುಷ್ಟ ಮನುಷ್ಯನಲ್ಲಿಯ ಭಕ್ತಿ ನಿಜವೆಂದು ಎಂದೂ ಭರವಸೆ ಇಡಬೇಡ. ಒಂದು ಬೆಕ್ಕು ಎಷ್ಟುದಿನ ಮಠದಲ್ಲಿದ್ದರೂ ಅದು ತನ್ನ ಗುಣವನ್ನು ಬಿಡದೆ ಹೇಗೆ ಇಲಿಯನ್ನು ಕಂಡಕೂಡಲೇ ಅದರ ಬೆನ್ನು ಹತ್ತುತ್ತದೋ ಹಾಗೆ ಇಂಥವರ ಸ್ಥಿತಿಯು ಇರುತ್ತದೆ.

೩೫. ಮೊಳೆಯ ಮೇಲಣ ಕಲ್ಲು ಜಗದೆರೆಯನಾಗಬಲ್ಲುದೆ? ಹೊಲೆ ಶಿವಭಕ್ತನಾಗಬಲ್ಲುದೆ? ನಿಮ್ಮ ತನುಮನಧನವನರಿಯದಿರ್ದಡೆ ಸದುಭಕ್ತರಹರೆ ರಾಮನಾಥಾ?

ಜಗದೆರೆ=ಜಗದ ಒಡೆಯ

ಅಂಥ ಭಕ್ತಿಯುಳ್ಳವನಾಗಬಾರದು. ಆದರೆ ತನುಮನಧನವನ್ನು ಹ್ಯಾಗೆ ಉಪಯೋಗಿಸಬೇಕೆಂಬದನ್ನು ತಿಳಿದು ವರ್ತಿಸಿದರೆ ಅಂಥ ಭಕ್ತಿಯಿಂದಲೇ ಪ್ರಯೋಜನವು.

೩೬. ಒಲವಿಲ್ಲದ ಭಕ್ತಿ, ಲವಲವಿಕೆ ಇಲ್ಲದ ಪೂಜೆ, ಸಲೆ ನಿಮ್ಮ ನಂಬಿ ನಂಬದವನ ಬಾಳುವೆ, ಹೊಲೆಯರ ನಾಯಿ ಹುಲು ಸರವಿಯಿಂದ ಕರಕಷ್ಟ ಕಾಣಾ ರಾಮನಾಥಾ.

ಲವಲವಿಕೆ=ಉತ್ಕಟ ಇಚ್ಛೆ; ಹುಲು=ಕ್ಷುಲ್ಲಕ; ಸರವಿ=ಬೇಟೆ.

ಮನುಷ್ಯನಲ್ಲಿಯ ಭಕ್ತಿಯು ಪ್ರೇಮಮಯವಾಗಿರತಕ್ಕದ್ದು. ಮತ್ತು ಅವನು ಮಾಡುವ ಪೂಜೆಯಲ್ಲಿ ಪರಮಾತ್ಮನನ್ನು ಕೂಡುವೆನೆಂಬ ಉತ್ಕಟೇಚ್ಛೆ ಇರತಕ್ಕದ್ದು. ಪರಮಾತ್ಮನ ಭಕ್ತನೆಂದೆನಿಸಿಕೊಂಡು, ಅವನಲ್ಲಿ ನಂಬಿಗೆ ಇಡದೆ ವರ್ತಿಸುವವನ ಬಾಳುವೆ ಹ್ಯಾಗೆ ಹೊಲೆಯರ ನಾಯಿಯು ಅವನಲ್ಲಿಯ ಅಶುದ್ಧ ವಸ್ತುಗಳನ್ನು ತಿಂದು ಬದುಕುತ್ತದೋ ಅಥವಾ ಕೀಳು ಜಂತುಗಳನ್ನು ಬೇಟೆಯಾಡುವದು ಹ್ಯಾಗೋ ಅದರಕಿಂತಲೂ ಕನಿಷ್ಟವೆಂದು ವಚನಕಾರನು ಇಲ್ಲಿ ಹೇಳಿದ್ದಾನೆ.

**೩೭. ಸತಿಯರ ಸಂಗವನು, ಅತಿಶಯದ ಗ್ರಾಸವನು, ಪೃಥ್ವಿಗೀಶ್ವರನ ಪೂಜೆಯನು, ಅರಿವುಳ್ಳಡೆ ಹೆರರ ಕೈಯಿಂದ ಮಾಡಿಸುವರೆ ರಾಮನಾಥಾ?**

ಅನೇಕರು ದೇವಪೂಜೆಯನ್ನು ತಾವು ಮಾಡದೆ ಎರಡನೆಯವರನ್ನು ಸಂಬಳಕ್ಕೆ ಇಟ್ಟುಕೊಂಡು ಮಾಡಿಸುವದುಂಟು. ಇದು ಭಕ್ತಿಯಲ್ಲ. ಭಕ್ತಿಯನ್ನು ಮಾಡುವವರು ಸ್ವತಃ ಶ್ರಮಬಡಬೇಕೆಂಬ ವಚನಕಾರನ ಅಭಿಪ್ರಾಯವು. ಇದಕ್ಕೆ ಅವನು ಕೆಲವು ಉದಾಹರಣೆಗಳನ್ನು ಇಲ್ಲಿ ಕೊಟ್ಟು ಬಹು ಚನ್ನಾಗಿ ವಿವರಿಸಿದ್ದಾನೆ.

**೩೮. ಎಳ್ಳು ಇಲ್ಲದ ಗಾಣದಲ್ಲಿ ಎಣ್ಣೆಯುಂಟೇ? ಜೊಳ್ಳು ತೂರಿದಲ್ಲಿ ಬತ್ತ ಉಂಟೇ? ಕಳ್ಳಹಾದರಿಗರ ಸಂಪಾದನೆ ಹೊಳ್ಳ ಕುಟ್ಟಿ ಕೈ ಹೊಟ್ಟಾದಂತೆ ಕಾಣಾ ರಾಮನಾಥಾ.**

ಹೊಳ್ಳು=ಜೊಳ್ಳು, ಪೊಳ್ಳು; ಸಂಪಾದನೆ=ಸಂಬಂಧ, ಸ್ನೇಹ.

ಸಜ್ಜನರ ಸ್ನೇಹದ ಉದ್ದೇಶವು ಅವರಿಂದೇನಾದರೂ ಕಲಿಯುವದು ಇರುತ್ತದೆ. ಇಂಥವರ ಸ್ನೇಹ ಮಾಡದೆ ಕಳ್ಳರೂ ವ್ಯಭಿಚಾರಿಗಳೂ ಆದಂಥವರ ಸ್ನೇಹ ಬಳಸಿದರೆ, ಹ್ಯಾಗೆ ಎಳ್ಳು ಹಾಕದೆ ಗಾಣ ತಿರಿವಿದರೆ ಅದರಲ್ಲಿ ಎಣ್ಣೆಯು ಹೊರಡಲಾರದೋ ಅಥವಾ ಹ್ಯಾಗೆ ಜೊಳ್ಳು ತೂರಿದರೆ ಅದರೊಳಗಿಂದ ಅಕ್ಕಿಯು ಹೊರಡಲಾರದೋ ಹಾಗೆಯೇ ಇದು ವ್ಯರ್ಥವೆಂದು ವಚನಕಾರನ ಅಭಿಪ್ರಾಯವು.

**೩೯. ಹಂದಿ ಶ್ರೀಗಂಧವ ಹೂಸಿದಡೇನು? ಗಂಧರಾಜನಾಗಬಲ್ಲುದೆ? ನವಿಲು ನಲಿಯುತ್ತೆಂದಡೆ, ಕಾಡಕೋಳಿ ಪುಚ್ಚವ ತೆರೆಕೊಂಡಂತೆ ಕರ್ಮಿಗಳ ಭಕ್ತಿ. ಹೊರವೇಷದಲ್ಲಿ ವಿಭೂತಿ ರುದ್ರಾಕ್ಷಿಯ ಹೂಸಿದಡೇನು? ತೆರನನರಿದು ಮರವೆಯ ಕಳೆದು ಮಾತಿನಂತೆ ನೀತಿಯುಳ್ಳೊಡೆ ಅವರನಜಾತರೆಂಬೆ ಕಾಣಾ ರಾಮನಾಥಾ.**



ಗಂಧರಾಜ=ಆನೆ;

ವಚನಕಾರರು ಡಂಭಾಚಾರಿಗಳನ್ನು ಅತ್ಯಂತವಾಗಿ ಹಳಿಯುವದುಂಟು. ಅದೇ ಮೇರೆಗೆ ದೇವರ ದಾಸಿಮಯ್ಯನು ಇಂಥವರನ್ನು ಈ ವಚನದಲ್ಲಿ ಹಳಿದಿದ್ದಾನೆ. ಬರೇ ಮೈಯಲ್ಲಿ ವಿಭೂತಿ ರುದ್ರಾಕ್ಷಿಯನ್ನು ಧರಿಸಿ ಜ್ಞಾನವಿಲ್ಲದೆ ಆಚರಿಸಿದರೆ ಅದು ವ್ಯರ್ಥವೆಂದು ಅವನ ಅಭಿಪ್ರಾಯವು. ಅವನು ಅನ್ನುವದೇನೆಂದರೆ ಭಕ್ತನಾದವನು ತನ್ನ ಆಚಾರದ ತರವನ್ನು ಮೊದಲು ಅರಿಯಬೇಕು. ಹೀಗೆ ಅದರ ಮಾರ್ಗವನ್ನು ತಿಳಿದು ಅವನು ಅಜ್ಞಾನವನ್ನು ದೂರಮಾಡಬೇಕು. ಹೀಗೆ ಅಜ್ಞಾನವನ್ನು ದೂರ ಮಾಡಿ ಆ ಪ್ರಕಾರ ನಡೆಯಬೇಕು. ಹೀಗೆ ನಡೆಯುವವರು ನೀತಿವಂತರೆನ್ನಿಸಿಕೊಳ್ಳುವರು. ಇಂಥ ನೀತಿವಂತರು ಅಜಾತರು, ಅಂದರೆ ಹುಟ್ಟನ್ನು ನೀಗಿದವರಾಗುವರು. ಹೀಗೆ ಆಚರಿಸದೆ ಹೋದರೆ ಅವರು ಕರ್ಮಿಗಳು. ಇಂಥವರು ಬಹಿರಂಗದ ಆಚರಣೆಯನ್ನು ಎಷ್ಟು ಮಾಡಿದರೂ ವ್ಯರ್ಥವೆಂದು ವಚನಕಾರನ ಅಭಿಪ್ರಾಯವು. ಇಂಥವರನ್ನು ಶ್ರೀಗಂಧವನ್ನು ಹೂಸಿಕೊಂಡ ಹಂದಿಗೂ, ನವಿಲೆಯಂತೆ ಕುಣಿಯಲು ಯತ್ನಿಸುವ ಕಾಡ ಕೋಳಿಗೂ ಹೋಲಿಸಿ ವಚನಕಾರನು ಇವರನ್ನು ಹೀಯಾಳಿಸಿದ್ದಾನೆ.

**೪೦. ಅನುಭಾವವಿಲ್ಲದವನ ಭಕ್ತಿ ತಲೆಕೆಳಗಪ್ಪುದಯ್ಯಾ! ಅನುಭಾವವೇ ಭಕ್ತಿಗಾಧಾರ. ಅನುಭಾವವೇ ಭಕ್ತಿಗೆ ನೆಲೆವನೆ. ಅನುಭಾವವುಳ್ಳವರ ಕಂಡರೆ ತೂರ್ಯಾತೂರ್ಯ ಸಂಭಾಷಣೆಯ ಮಾಡದಿದ್ದರೆ ನರಕದಲ್ಲಿಕ್ಕಯ್ಯಾ ರಾಮನಾಥಾ.**

ಅನುಭಾವ=ಜ್ಞಾನ; ತೂರ್ಯ=ಸಂತೋಷ, ಪರಮಸುಖ, ಮೋಕ್ಷಸುಖ.

ಭಕ್ತಿಯು ಮನಸ್ಸಿನಲ್ಲಿ ದೃಢವಾಗಿ ನೆಲೆಗೊಳ್ಳಬೇಕಾದರೆ ಅನುಭಾವ ಅಂದರೆ ಜ್ಞಾನವು ಅವಶ್ಯವಾಗಿ ಬೇಕೆಂದು ವಚನಕಾರನು ಇಲ್ಲಿ ಹೇಳಿದ್ದಾನೆ. ಜ್ಞಾನವಿಲ್ಲದ ಭಕ್ತಿಯು ಹೀನತೆರದ್ದೆಂದು ಅವನ ಅಭಿಪ್ರಾ

ಯವು. ಜ್ಞಾನವು ಭಕ್ತಿಗೆ ಆಧಾರವಾಗಿರುವದು. ಆದ್ದರಿಂದ ಯಾರಾದರೂ ಅನುಭಾವಿಗಳನ್ನು ಕಂಡರೆ ಭಕ್ತನು ಅವರೊಡನೆ ಮಾತನಾಡಿ ಅವರ ವಿಚಾರಗಳನ್ನು ತಿಳಿದುಕೊಳ್ಳಬೇಕು. ಹೀಗೆ ಯಾರು ತಿಳಿದು ಕೊಳ್ಳಲು ಪ್ರಯತ್ನಿಸುತ್ತಾರೋ ಅವರಿಗೆ ಅಂಥವರ ಸಂಭಾಷಣೆಯು ಮೋಕ್ಷ ಸುಖದಂತೆ ಭಾಸವಾಗುತ್ತದೆ. ಇದೇ ಭಕ್ತನಾಚರಣೆ ಎಂದು ವಚನಕಾರನ ಅಭಿಪ್ರಾಯವು.

**೪೧. ಅನುಭಾವವಿಲ್ಲದೆ ಈ ತನು ಎಳ ತಟವಾದುದಯ್ಯ! ಅನುಭಾವವೇ ತನುವಿಂಗೆ ಆಧಾರ. ಅನುಭಾವಿಗಳ ಅನುಭಾವ ಮನವಾರೆ ವೇಧಿಸಿದವರಿಗೆ ಜನನವಿಲ್ಲ ಕಾಣಾ ರಾಮನಾಥಾ.**

ಎಳತಟ = ದುರ್ಬಲ ಸ್ಥಿತಿ, ಮನವಾರೆ=ಮನದಣಿ, ವೇಧಿಸು = ಸಂಬಂಧಿಸು

ಜ್ಞಾನವಿಲ್ಲದ ಮನುಷ್ಯನು ದುರ್ಬಲನು, ಜ್ಞಾನವುಳ್ಳವನು ಬಲಾಢ್ಯನೆಂದು ವಚನಕಾರನ ಅಭಿಪ್ರಾಯವು. ಜ್ಞಾನವೇ ಶರೀರಕ್ಕೆ ಆಧಾರವಾಗಿರುತ್ತದೆ. ಆದ್ದರಿಂದ ಯಾರು ಜ್ಞಾನಿಗಳಾಗಿರುತ್ತಾರೋ ಅಂಥವರೊಡನೆ ಭಕ್ತನು ಸಂಭಾಷಣೆ ಮಾಡತಕ್ಕದ್ದು. ಮತ್ತು ಆ ಸಂಭಾಷಣೆಯನ್ನು ಬರೇ ಕೇಳಿಕೊಳ್ಳುವದಷ್ಟೇ ಅಲ್ಲ, ಅದನ್ನು ಮನಸ್ಸಿನಲ್ಲಿ ಇಂಬುಗೊಡಬೇಕು. ಮತ್ತು ಹೀಗೆ ಇಂಬುಗೊಟ್ಟು, ಅದನ್ನು ಶರೀರದಲ್ಲೆಲ್ಲ ಸಂಬಂಧಿಸಿಕೊಳ್ಳಬೇಕು. ಹೀಗೆ ಯಾರು ಅನುಭವವನ್ನು ಸೇವಿಸುತ್ತಾರೋ ಅವರಿಗೆ ಜನನವಿಲ್ಲ, ಅಂದರೆ ಮೋಕ್ಷವಾಗುವದೆಂದು ವಚನಕಾರನ ಅಭಿಪ್ರಾಯವು.

**೪೨. ಹರಿದ ಗೋಣಿಯಲೊಬ್ಬ ಕಳವೆಯ ತುಂಬಿದ. ಇರುಳೆಲ್ಲಾ ನಡೆದನಾಸುಂಕಕ್ಕಂಜಿ. ಕಳವೆ ಎಲ್ಲ ಹೋಗಿ ಬರಿಯ ಗೋಣಿ ಉಳಿಯಿತ್ತು. ಅಳಿಮನದವನಭಕ್ತಿ ಇಂತಾಯಿತ್ತು ರಾಮನಾಥಾ.**

ಕಳವೆ=ತುಡುಗಿನ ಜೀನಸು.

ದೇವರ ದಾಸಿಮಯ್ಯನು ಕಪಟಭಕ್ತನ ರೀತಿಯನ್ನು ಒಂದು ಉದಾಹರಣೆಯನ್ನು ಕೊಟ್ಟು ಇಲ್ಲಿ ವರ್ಣಿಸಿದ್ದಾನೆ. ಏನೂ ದುಡಿಯದೆ ಹೆರವರ



ದ್ರವ್ಯವನ್ನು ಕದಿಯಲಿಕ್ಕೆ ಹೋದ ಕಳ್ಳನಂತೆ ಇಂಥವನು ಇರುತ್ತಾನೆಂದು ಇಲ್ಲಿ ಹೇಳಿದ್ದಾನೆ. ಇಂಥ ಕಳ್ಳನು ತಾನು ಕದ್ದ ದ್ರವ್ಯವನ್ನು ಒಂದು ಹರಕು ಚೀಲದಲ್ಲಿ ಹಾಕಿಕೊಂಡು ಸುಂಕ ಕೊಡಬಾರದೆಂದು ರಾತ್ರಿಯಲ್ಲಾ ನಡೆದು ಹೋದರೆ, ಆ ದ್ರವ್ಯವೆಲ್ಲವೂ ಬಿದ್ದು ಹೋಗಿ ಅವನ ಕಯ್ಯಲ್ಲಿ ಬರೇ ಹರಕು ಗೋಣಿ ಮಾತ್ರ ಉಳಿಯುತ್ತದೆ. ಯಾರು ಕೆಟ್ಟ ಮನಸ್ಸಿನಿಂದ ಭಕ್ತಿಯನ್ನು ಮಾಡುತ್ತಾರೋ ಅಂಥವರ ಸ್ಥಿತಿಯು ಹೀಗೆಯೇ ಇರುತ್ತದೆಂದು ವಚನಕಾರನು ಇಲ್ಲಿ ಹೇಳಿದ್ದಾನೆ. ಕೆಟ್ಟ ಮನಸ್ಸನ್ನು ಹರಕು ಗೋಣಿಗೆ ಹೋಲಿಸಿ ವಚನಕಾರನು ಇಲ್ಲಿ ಒಂದು ಉದಾಹರಣೆಯನ್ನು ಕೊಟ್ಟಿದ್ದಾನೆ.

**೪೩. [ ತೀವಿ ಕುಳ್ಳಿರ್ದ ಸಭೆಯೆಲ್ಲ ಬಲ್ಲುದೆ ದಾನವ? ] ಸಾವರೆ ಸಂಗ್ರಾಮಕ್ಕೆ ಹೋದವರೆಲ್ಲ ಇರಿಯಬಲ್ಲರೆ? ನೂರಕ್ಕೊಬ್ಬ, ಸಹಸ್ರಕ್ಕೊಬ್ಬ. ಹುಣಸೆಯ ಹೂವೆಲ್ಲಾ ಕಾಯಾಗಬಲ್ಲುದೆ ರಾಮನಾಥಾ?**

ನಿಜವಾದ ಭಕ್ತರು ಜಗತ್ತಿನಲ್ಲಿ ದುರ್ಲಭರೆಂದು ವಚನಕಾರನು ಇಲ್ಲಿ ಹೇಳಿದ್ದಾನೆ. ಯುದ್ಧಕ್ಕೆ ಹೋಗುವವರೆಲ್ಲ ಜೀವದ ಹಂಗು ದೊರೆದು ಕಾದಾಡುವದಿಲ್ಲ. ಇಂಥವರು ನೂರಕ್ಕೊಬ್ಬರು, ಸಹಸ್ರಕ್ಕೊಬ್ಬರು ಇರುತ್ತಾರೆ. ಹುಣಿಸೇಗಿಡದ ತುಂಬೆಲ್ಲ ಹೂವಾದರೂ, ಅವೆಲ್ಲ ಕಾಯಾಗುವದಿಲ್ಲ. ಅದೇ ಮೇರೆಗೆ ಜಗತ್ತಿನಲ್ಲಿ ಅಸಂಖ್ಯ ನರರಿದ್ದರೂ, ಅವರೆಲ್ಲರೂ ಭಕ್ತರಾಗಲರಿಯರು ಎಂದು ವಚನಕಾರನ ಅಭಿಪ್ರಾಯವು.

## ಭಕ್ತನು ನೀತಿಯುಳ್ಳವನಾಗಿರತಕ್ಕದ್ದು.

ಭಕ್ತನು ನೀತಿಯುಳ್ಳವನಾಗಿರುವದು ಅವನ ಕರ್ತವ್ಯವಾಗಿದೆ. ಧರ್ಮ ಮತ್ತು ನೀತಿ ಇವುಗಳಲ್ಲಿ ಪರಸ್ಪರ ನಿಕಟ ಸಂಬಂಧವಿರುತ್ತದೆಂದು ವಚನಕಾರರ ಅಭಿಪ್ರಾಯವು. ಆದ್ದರಿಂದ ವಚನಕಾರರು ನೀತಿಯನ್ನು ವಿವರಿಸುವಲ್ಲಿ ಅವುಗಳನ್ನು ಧಾರ್ಮಿಕ ತತ್ವಗಳನ್ನು ಅವ

ಲಂಬಿಸಿ ವಿವರಿಸುವವುಂಟು. ಪಾಶ್ಚಿಮಾತ್ಯ ಶಾಸ್ತ್ರಜ್ಞರು ನೀತಿಯೆಂದರೆ ಬಹು ಜನರಿಗೆ ಲಾಭ ಕೊಡುವಂಥ ಒಂದು ಅತ್ಯಂತ ಹಿತದ ವರ್ತನೆ ಅಥವಾ ಸಮಾಜದ ಹಿತಕ್ಕೋಸ್ಕರ ಅನೇಕ ಜನರು ಒಂದು ಕಟ್ಟಿನಿಂದ ಇರುವದು ಎಂದು ಅರ್ಥಮಾಡಿ ಆ ಮೇರೆಗೆ ಅವರು ತಮ್ಮ ನೈತಿಕ ವಿಚಾರಗಳನ್ನು ವಿವೇಚಿಸುವದುಂಟು. ಆದರೆ ಇದು ಸ್ವಾರ್ಥೈಕ ದೃಷ್ಟಿಯುಳ್ಳದು. ಹಿಂದೂ ಶಾಸ್ತ್ರಜ್ಞರ ವಿಚಾರಗಳು ಇದಕ್ಕೆ ತೀರ ಭಿನ್ನವಾಗಿವೆ. ಅವರು ನೀತಿ ಮತ್ತು ಧರ್ಮ ಇವುಗಳನ್ನು ವಿಂಗಡಿಸಿಲ್ಲ. ಇದೇ ಕ್ರಮವನ್ನು ವೀರಶೈವ ವಚನಕಾರರು ಅವಲಂಬಿಸಿ ತಮ್ಮ ನೈತಿಕ ವಿಷಯಗಳನ್ನು ವಿವೇಚಿಸುತ್ತಾರೆ.

**೪೪. ನಾನೊಂದು ಸುರಿಗೆಯ ನೇನೆಂದು ಹಿಡಿವೆನು ಏನಕಿತ್ತೇನನಿರಿವೆನು ? ಜಗವೆಲ್ಲ ನೀನಾಗಿಪ್ಪೆ ಕಾಣಾ ರಾಮನಾಥಾ.**

ಸುರಿಗೆ=ಕತ್ತಿ.

ಹೆರವರೆಲ್ಲ ತನ್ನಂತೆ ಭಾವಿಸುವ ವೃತ್ತಿಯೇ ನೀತಿಗೆ ತಳಹದಿಯಾಗಿರುತ್ತದೆ. ಮನುಷ್ಯ ಮನುಷ್ಯರಲ್ಲಿಯ ವಿರೋಧವೃತ್ತಿಗಳು ಸಮಾಜದ ಅಸ್ತಿತ್ವಕ್ಕೆಯೇ ಭಂಗ ತರುತ್ತವೆ. ಆದ್ದರಿಂದ ಮನುಷ್ಯನು ಭೂತ ಪ್ರಾಣಿಗಳ ವಿಷಯವಾಗಿ ದಯಾಪರನಾಗಿರತಕ್ಕದ್ದು. ಈ ಗುಣದ ಅಸ್ತಿತ್ವದ ಮೇಲೆಯೇ, ಅಹಿಂಸಾ, ಮಿತ್ರತ್ವ, ಪ್ರೀತಿ, ಸಭ್ಯವರ್ತನೆ ಮೊದಲಾದ ಅಸಂಖ್ಯ ಗುಣಗಳು ಅವಲಂಬಿಸಿರುತ್ತವೆ. ಈ ಪ್ರಕಾರ ಹೆರವರ ಗೂಡ ಪ್ರೀತಿಯಿಂದ ಇರುವ ಕಾರಣವನ್ನು ದೇವರ ದಾಸಿಮಯ್ಯನು ಮೇಲ್ಕಂಡ ವಚನದಲ್ಲಿ ವಿವರಿಸಿದ್ದಾನೆ. ಅವನು ಅನ್ನುವದೇನಂದರೆ, ಪರಮಾತ್ಮನು ಜಗತ್ತಿನಲ್ಲೆಲ್ಲ ತುಂಬಿಕೊಂಡಿದ್ದಾನೆ. ಅಂಥ ಶ್ರೇಷ್ಠವಸ್ತುವು ಜಗತ್ತನ್ನು ತುಂಬಿದ ಬಳಿಕ ಮನುಷ್ಯನು ಕತ್ತಿಯನ್ನು ತೆಗೆದುಕೊಂಡು ಅದನ್ನು ಯಾವ ಉದ್ದೇಶದಿಂದ ಎರಡನೆಯವರ ಮೇಲೆ ಎತ್ತಬೇಕು ಮತ್ತು ಅದರಿಂದ ಅವನು ಯಾರನ್ನು ಕೊಲ್ಲಬೇಕು? ಹೀಗೆ ಮಾಡಬಾರದೆಂದು ಅವನ ಅಭಿಪ್ರಾಯವು. ಹೀಗೆ ವರ್ತಿಸಿದರೆ ಅದು ಪರಮಾತ್ಮನನ್ನೇ ನೋಯಿಸಿದಂತೆ ಆಗುವದೆಂದು ಅವನು ಇಲ್ಲಿ ಅಂದಿದ್ದಾನೆ.



**೪೫. ಒಂದಾಗಿಹನೈದು ಭೂತ. ಚಂದ್ರ ಸೂರ್ಯರು ನಂದಿವಾಹನ ನಿಮ್ಮ ತನುವಲ್ಲವೇ? ನಿಂದುನೋಡಲು ಜಗಭರಿತನಾಗಿಪ್ಪೆ. ಇನ್ನು ನೋಯಿಸುವೆನಾರನಯ್ಯ ರಾಮನಾಥಾ?**

ಹಿಂದಿನ ವಚನದ ಭಾವವನ್ನೇ ಇನ್ನೊಂದು ರೀತಿಯಲ್ಲಿ ವಚನಕಾರನು ಇಲ್ಲಿ ಹೇಳಿದ್ದಾನೆ. ಜಗತ್ತೆಂದರೆ ಪಂಚಭೂತಗಳಾದ ಪೃಥ್ವಿ ಆಪ್, ತೇಜ, ವಾಯು, ಆಕಾಶ ಇವುಗಳಿಂದ ಆದಂಥಾದ್ದು. ಇವುಗಳಿಂದಲೇ ಚಂದ್ರ ಸೂರ್ಯ ನಂದಿವಾಹನರೂ ಕೂಡ ಆಗಿದ್ದಾರೆ. ಆದರೆ ಇವುಗಳಲ್ಲೆಲ್ಲ ಪರಮಾತ್ಮನು ತುಂಬಿಕೊಂಡಿದ್ದಾನೆ. ಆದ್ದರಿಂದ ಇವೆಲ್ಲವುಗಳು ಪರಮಾತ್ಮನ ತನುಗಳೆಂದೇ ಹೇಳಬಹುದು. ಅಂದ ಬಳಿಕ ಯಾರಿಗೂ ನೋಯಿಸಬಾರದೆಂದು ವಚನಕಾರನ ಅಭಿಪ್ರಾಯವು. ಹೀಗೆ ಮಾಡಿದರೆ ಪರಮಾತ್ಮನನ್ನೇ ನೋಯಿಸಿದಂತೆ ಆಗುತ್ತದೆಂದು ಅವನು ಇಲ್ಲಿ ಹೇಳಿದ್ದಾನೆ.

**೪೬. ವಿಷಯದ ಪಿತ್ತ ತಲೆಗೇರಿದಲ್ಲಿ ವಿವೇಕವೆಂಬ ದೃಷ್ಟಿ ನಷ್ಟವಾಗಿ ಪಶುಪತಿಯ ನೆನೆಹು ಕೆಟ್ಟು ಮತಿ ಮಂದವಾದಲ್ಲಿ ಮಂತ್ರದ ನೆನಹುಂಟೇ ಹೇಳಾ ರಾಮನಾಥಾ?**

ಮನುಷ್ಯನು ನೀತಿಯಿಂದ ನಡೆಯುವದಿಲ್ಲ. ಆದ್ದರಿಂದ ಅವನ ಇಂದ್ರಿಯುಗಳು ಅವನನ್ನು ನಾನಾ ವಿಷಯಗಳಿಗೆ ಎಳಿಸುತ್ತವೆ. ಅವುಗಳ ಮೇಲಿನ ಇಚ್ಛೆಯೇ ಅವನ ಮನಸ್ಸಿನಲ್ಲಿ ತುಂಬಿ ಹೋಗುತ್ತದೆ. ಇದರಿಂದ ಅವನ ವಿವೇಕವು ಭ್ರಷ್ಟವಾಗುತ್ತದೆ. ಅಂದರೆ ಅವನಿಗೆ ಯಾವದು ಕೆಟ್ಟದು ಯಾವದು ಹಿತವಾದದ್ದು ಎಂಬದು ತಿಳಿಯದೆ ಹೋಗುತ್ತದೆ. ಹೀಗಾದ ಕೂಡಲೆ ಅವನು ಪರಮಾತ್ಮನನ್ನು ಲಕ್ಷಿಸದೆ ಮತಿಭ್ರಷ್ಟನಾಗಿ ವರ್ತಿಸಹತ್ತುತ್ತಾನೆ. ಇಂಥವನಿಗೆ ಮಂತ್ರದ ನೆನಹೂ ತಪ್ಪಿಹೋಗುತ್ತದೆ. ಅಂದರೆ ಅವನು ಮೋಕ್ಷಕ್ಕೆ ಹೊರತಾಗುವನು. ಆದ್ದರಿಂದ ಮೋಕ್ಷಕ್ಕೆ ವಿಷಯವಾಸನೆಯನ್ನು ಮೊದಲು ಹರಿಯುವದೇ ಮನುಷ್ಯನ ಕರ್ತವ್ಯವೆಂದು ವಚನಕಾರನ ಅಭಿಪ್ರಾಯವು.

ಈ ಮೇರೆಗೆ ವಚನಕಾರನು ನೀತಿಯ ಬಗ್ಗೆ ಸಾಮಾನ್ಯವಾಗಿ ವಿವರಿಸಿ ಮುಂದೆ ನೈತಿಕಾಚರಣೆಯ ಬಗ್ಗೆ ಬೇರೆ ಬೇರೆ ವಿಷಯಗಳನ್ನು ಹೇಳಲು ಉದ್ಯುಕ್ತನಾಗುತ್ತಾನೆ.

**೪೭. ಹೊಲೆಯರ ಭಾವಿಯಲೊಂದು ಎಲು ನಟ್ಟಿದ್ದಡೆ ಹೊಲೆ ಹೊಲೆಯೆಂಬುದೀ ಲೋಕವೆಲ್ಲ. ಹಲುವೆಲುವಿದ್ದ ಬಾಯಲ್ಲಿ ಒಲವರವ ನುಡಿದಡೆ ಅದು ಹೊಲೆಯರ ಬಾವಿಂದ ಕರಕಷ್ಟ ಕಾಣಾ ರಾಮನಾಥಾ.**

ಒಲವರ=ರವ್ಯತೆ, ಪಕ್ಷಪಾತ, ವಿಷಯದ ಸಂತೋಷ; ಕರಕಷ್ಟ=ಬಹಳ ಕೆಟ್ಟದ್ದು.

ನೈತಿಕ ಆಚರಣೆಗೆ ಮನುಷ್ಯನು ತಾನೇ ಜವಾಬುದಾರನು, ಎರಡನೆಯವರಲ್ಲ ಎಂಬ ಅಭಿಪ್ರಾಯವನ್ನು ವಚನಕಾರನು ಇಲ್ಲಿ ತೋರಿಸಿದ್ದಾನೆ. ಮನುಷ್ಯನು ಇದನ್ನು ಲಕ್ಷಿಸದೆ, ಅವನು ಹೆರವರನ್ನು ಹೀಯಾಳಿಸುವದುಂಟು. ಈ ಬಗ್ಗೆ ವಚನಕಾರನು ಒಂದು ದೃಷ್ಟಾಂತವನ್ನು ಹೇಳಿದ್ದಾನೆ. ಏನಂದರೆ:—ಬಾವಿಯ ಮೇಲೊಂದು ಎಲುವು ನೆಟ್ಟಿದ್ದರೆ, ಅದು ಹೊಲೆಯರ ಬಾವಿ ಎಂದು ತಿಳಿದು ಅದರ ನೀರನ್ನು ಯಾರೂ ಮುಟ್ಟುವದಿಲ್ಲ. ಹೀಗೆ ಮಾಡುವದು ಅನ್ಯಾಯವೆಂದು ವಚನಕಾರನ ಅಭಿಪ್ರಾಯವು. ಯಾಕಂದರೆ ನಿಜವಾದ ಹೊಲೆಯರ ಬಾವಿಯು ಮನುಷ್ಯನ ಬಾಯಿಯೇ ಇರುತ್ತದೆ. ಇದರಲ್ಲಿ ಯಾವಾಗಲು ವಿಷಯರಸವ ಮಡುವು ತುಂಬಿಕೊಂಡಿರುತ್ತದೆ. ಮತ್ತು ಪರಮಾತ್ಮನಾದರೂ ಇದನ್ನು ತೋರಿಸಲಿಕ್ಕೆ ಅದರ ದಂಡೆಯ ಮೇಲೆ ಎಲುವುಗಳನ್ನು ನೆಟ್ಟಿದ್ದಾನೆ. ಈ ಎಲುವುಗಳು ಒಂದಲ್ಲ ಎರಡಲ್ಲ ಮೂವತ್ತೆರಡು ಇವೆ. ಆದ್ದರಿಂದ ಅನೀತಿಯು ವರ್ತನೆಯು ತನ್ನಲ್ಲಿಯೇ ಇದ್ದು ಅದಕ್ಕೆ ಕಾರಣವಾಗಿರುವದು ಅವನ ಮಾತುಗಳೇ ಹೊರ್ತು ಮತ್ತೊಂದಾವೂ ಇಲ್ಲವೆಂದು ವಚನಕಾರನು ಇಲ್ಲಿ ಹೇಳಿದ್ದಾನೆ.

**೪೮. ಇತ್ತ ಬಾ ಎನ್ನದವನ ಹತ್ತೆ ಹೊದ್ದಲು ಬೇಡ. ಇತ್ತ ಬಾ ಎಂಬ ಸದ್ಭಕ್ತನ ಮನೆಯ ಬಾಗಿಲ ಹತ್ತಿಪ್ಪೆ ಕಾಣಾ ರಾಮನಾಥಾ**

ಹತ್ತೆ=ಸಮೀಪ



ವಚನಕಾರನು ಇಲ್ಲಿ ಸದ್ಭಕ್ತರು ಯಾರಿರುವರೋ ಅವರ ಬಾಗಿಲ ಸಮೀಪದಲ್ಲಿ ಇರಬೇಕೆಂದು ಹೇಳಿದ್ದಾನೆ. ಈ ಸದ್ಭಕ್ತರು ಯಾವಾಗಲೂ ಸತ್ಕಾರ ಭಾವವುಳ್ಳವರಿರುವರು. ಅವರು ಮನೆಗೆ ಬಂದವರನ್ನು ಆದರಿಸಿ ಕರೆಯುತ್ತಾರೆ. ಇಂಥವರ ಬದಿಯಲ್ಲಿ ಇರಬೇಕೇ ಹೊರ್ತು ಯಾರು ತನ್ನನ್ನು ಆದರಿಸಿ ಕರೆಯುವದಿಲ್ಲವೋ ಅಂಥವರೊಡನೆ ಇರಬೇಡವೆಂದು ಹೇಳಿದ್ದಾನೆ.

**೪೯. ಎತ್ತಪ್ಪೆ ಶರಣಂಗೆ. ತೊತ್ತಪ್ಪೆ ಶರಣಂಗೆ. ಭೃತ್ಯನಾಗಿ ಸದ್ಭಕ್ತರ ಮನೆಯ ಬಾಗಿಲ ಕಾಯ್ದಿಪ್ಪ ಸೊಣಗನಪ್ಪೆ. ಕರ್ತಾರ, ನಿನಗೆ ಕರಚೆತ್ತಿ ಪೊಡೆವಡುವ ಭಕ್ತರ ಮನೆಯ ಹಿತ್ತಲ ಬೇಲಿಯಾಗಿಪ್ಪೆನೈ ರಾಮನಾಥಾ.**

ಸೊಣಗ=ನಾಯಿ; ಪೊಡೆವಡು=ನಮಸ್ಕಾರಮಾಡು.

ವಚನಕಾರನು ಭಕ್ತರೊಡನೆ ಹ್ಯಾಗೆ ನಡೆಯಬೇಕೆಂಬುವನ್ನು ಇಲ್ಲಿ ಬಹು ಸುಂದರವಾಗಿ ವಿವರಿಸಿದ್ದಾನೆ. ಶರಣರನ್ನು ಎತ್ತಿ ಹಿಡಿಯತಕ್ಕದ್ದು, ಅವರ ಸೇವೆಮಾಡತಕ್ಕದ್ದು, ಅವರು ಹೇಳಿದಂತೆ ಕೇಳತಕ್ಕದ್ದು, ಅವರ ರಕ್ಷಣೆಮಾಡತಕ್ಕದ್ದು ಮತ್ತು ಅವರ ಜೀನಸುಗಳನ್ನು ಕಾಪಾಡತಕ್ಕದ್ದು ಎಂದು ಇಲ್ಲಿ ಅವನು ಅನೇಕ ದೃಷ್ಟಾಂತಗಳನ್ನು ಕೊಟ್ಟು ಹೇಳಿದ್ದಾನೆ.

**೫೦. ಕೀಳು ಡೋಹರ ಕಕ್ಕ, ಕೀಳು ಮಾದರ ಚನ್ನ, ಕೀಳು ವಹಿಲ ದೇವ, ಕೀಳು ಉದ್ಭಟಯ್ಯ. ಕೀಳಿಂಗಲ್ಲದೆ ಹಯನು ಕರೆಯದು ಕಾಣಾ ರಾಮನಾಥಾ.**

ಪರಮಾತ್ಮನು ಒಲಿಯ ಬೇಕಾದರೆ ಮನುಷ್ಯನು ದೈನ್ಯ ಭಾವದಿಂದಿರಬೇಕೆಂದು ವಚನಕಾರನು ಇಲ್ಲಿ ಹೇಳಿದ್ದಾನೆ. ದೊಡ್ಡಸ್ತಿಕೆಯ ಅಹಂಭಾವವುಳ್ಳವಂಗೆ ಎಂದೂ ಪರಮಾತ್ಮನು ಒಲಿಯನೆಂದು ಅವನ ಅಭಿಪ್ರಾಯವು. ಇದಕ್ಕೋಸ್ಕರ ಅವನು ಢೋರರ ಕಕ್ಕಯ್ಯ, ಮಾದರ ಚನ್ನಯ್ಯ , ವಹಿಲಯ್ಯ ಮತ್ತು ಉದ್ಭಟಯ್ಯ ಈ ಶಿವಶರಣರ ಉದಾಹರ

ಣೆಗಳನ್ನು ಕೊಟ್ಟು ಅವುಗಳೊಡನೆ ಒಂದು ವ್ಯವಹಾರಿಕ ಉದಾಹರಣೆಯನ್ನೂ ಕೊಟ್ಟಿದ್ದಾನೆ. ಏನೆಂದರೆ, ಒಬ್ಬ ಮನುಷ್ಯನು ಆವಿನ ಹಾಲನ್ನು ದೊರಕಿಸ ಬೇಕಾದರೆ, ಅವನು ಆದರ ಅಡಿಯಲ್ಲಿದ್ದುಕೊಂಡು ಕೀಳಾಗಿ ಅವರೊಡನೆ ವರ್ತಿಸ ಬೇಕು. ಆಗ ಅದು ಹಾಲು ಕೊಡುತ್ತದೆ. ಅದರಂತೆಯೇ ಮನುಷ್ಯನು ಜಗತ್ತಿನಲ್ಲಿ ದೈನ್ಯ ಭಾವದಿಂದ ವ್ಯವಹರಿಸಿದಾಗ್ಗೆ ಅವನಿಗೆ ಮೋಕ್ಷವು ದೊರಕುತ್ತದೆಂದು ವಚನಕಾರನ ಭಾವವು.

**೫೦. ಭಕ್ತನ ಮಠವೆಂದು ಭಕ್ತ ಹೋದಡೆ ಆ ಭಕ್ತ ಭಕ್ತಂಗೆ ಅಡಿ ಇಟ್ಟು ಇದಿರೆದ್ದು ನಡೆದು ಹೊಡೆಗೆಡೆದು ಒಡಗೊಂಡು ಬಂದು ವಿಭೂತಿ ವೀಳೆಯವನಿಕ್ಕಿ ಪಾದಾರ್ಚನೆಯಂ ಮಾಡಿ ಸಮಯವನರಿತು ಲಿಂಗಾರ್ಚನೆಯಂ ಮಾಡಿಸಿ ಒಕ್ಕುದ ಕೊಂಡು ಓಲಾಡುತಿಪ್ಪುದೇ ಭಕ್ತಿ. ಹೀಗಲ್ಲದೆ ಬೆಬ್ಬನೆ ಬೆರೆತು ಬಿಬ್ಬನೆ ಬೀಗಿ ಅಹಂಕಾರ ಭರಿತನಾಗಿಪ್ಪವನ ಮನೆಯ ಲಿಂಗಸನುಮತರ ಹೊಗರು ಕಾಣಾ ರಾಮನಾಥಾ.**

ಹೊಡೆಗೆಡು=ನಮಸ್ಕಾರ ಮಾಡು; ಒಕ್ಕು=ಬಿಡು, ಕೊಡು; ಓಲಾಡು=ತೂಗಾಡು, ಆನಂದ ಪಡು; ಬೆರೆ=ಸೊಕ್ಕಿನಿಂದ ನಡೆ; ಬೀಗು=ಉಬ್ಬು, ಗರ್ವಿಸು, ಸನುಮತ=ಒಪ್ಪಿಗೆ

ಇದರಲ್ಲಿ ವಚನಕಾರನು ಭಕ್ತರು ಭಕ್ತರೊಡನೆ ಹ್ಯಾಗೆ ವಿನಯ ಭಾವದಿಂದ ನಡೆಯ ಬೇಕೆಂಬುದನ್ನು ವರ್ಣಿಸಿದ್ದಾನೆ. ಅರ್ಥವು ಸ್ಪಷ್ಟವದೆ.

**೫೨. ಒಡೆಯರನೊಡಗೊಂಡು ಬಂದು ಕೈಗಡಿಗೆಯ ನೀರ ಕೈಯ್ಯಲ್ಲಿ ಕೊಟ್ಟು, ಒಡೆಯರೆ ಕಾಲತೊಳಕೋ ಎಂಬವರ ಮನೆಗೆ ಅಡಿ ಇಡಲಾಗದೈಯ್ಯ ಮೃಡಶರಣರು. ಒಡಲಿಚ್ಛೆಗೆ ಬಡಮನವ ಮಾಡಿ ಹೊಕ್ಕುಂಬವರ ಎನಗೊಮ್ಮೆ ತೋರದಿರಾ ರಾಮನಾಥಾ.**

ಕೂಳಿಗೆ ಆಸೆ ಮಾಡಿ, ಎಲ್ಲಿ ತನಗೆ ಆದರ ದೊರೆಯುವದಿಲ್ಲವೋ ಅಲ್ಲಿಗೆ ಹೋಗಿ, ಅಪಮಾನವನ್ನು ಹೊಂದಿ ಊಟ ಮಾಡಿ ಬರಬೇಡಿರೆಂದು ವಚನಕಾರನು ಇಲ್ಲಿ ಜಂಗಮರನ್ನು ಉದ್ದೇಶಿಸಿ ಹೇಳಿದ್ದಾನೆ.



**೫೩ ಹಾಸಿಗೆ ಹೊರಸೇಕೆ? ಲೇಸೇಕೆ ನಿಮ್ಮ ಭೃತ್ಯನಿಗೆ? ನಿಮ್ಮ ಸಾತ್ವಿಕರಿದಿರಲು ಕುಳ್ಳಿರಲೇಕೆ? ಸರಿಪಂಕ್ತಿ ಎಂಬ ಹೇಸಿಕೆಯುಂಟೇ ರಾಮನಾಥಾ?**

ಭಕ್ತನಾದವನು ಉತ್ತಮರಾದವರೊಡನೆ ಹ್ಯಾಗೆ ವರ್ತಿಸಬೇಕೆಂಬುದನ್ನು ಇಲ್ಲಿ ವಚನಕಾರನು ವಿವರಿಸಿದ್ದಾನೆ. ಅವನು ಅವರೊಡನೆ ಸಮಾನತ್ವದಿಂದ ನಡೆಯದೆ ಕೇವಲ ಭೃತ್ಯ ಭಾವದಿಂದ ನಡೆಯಬೇಕೆಂದು ಹೇಳಿದ್ದಾನೆ.

**೫೪. ಅರ್ಥ ಉಂಟೆಂದು ಅಹಂಕರಿಸಿ ಮಾಡುವನ ಭಕ್ತಿ ತೊತ್ತಿನ ಕೂಟದ ತೂರ್ಯದ ಮೇಳದಂತೆ. ತನು ಮನ ಧನದಲ್ಲಿ ವಂಚನೆಯುಳ್ಳ ಪ್ರಪಂಚಿಯ ಮನೆಯ ಕೂಳು ಶುನಕನ ಬಾಯ ಎಲುವ ಪ್ರತಿ ಶುನಕ ತಿಂದಂತೆ ಕಾಣಾ ರಾಮನಾಥಾ**

ತೂರ್ಯ=ಸಂತೋಷ

ಅಹಂಕಾರ ಭರಿತನಾಗಿ ಯಾವನು ಭಕ್ತಿಯನ್ನು ಮಾಡಲೆಣಿಸುತ್ತಾನೋ, ಅವನು ಎಷ್ಟು ಶ್ರೀಮಂತನಿದ್ದರೂ ಕೂಡ, ಅವನ ಪದಾರ್ಥಗಳನ್ನು ಯಾರೂ ಸೇವಿಸ ಬಾರದೆಂದು ವಚನಕಾರನ ಅಭಿಪ್ರಾಯವು. ಯಾಕಂದರೆ ಇವನಲ್ಲಿ ಅರ್ಪಣ ಭಾವವಿರುವದಿಲ್ಲ. ಇವನು ತನುಮನ ಧನಗಳನ್ನು ವಂಚಿಸಿ ಮಾಡುತ್ತಾನೆ. ಇವನು ಕೇವಲ ಪ್ರಪಂಚಿಯು. ಇಂಥವನು ಕೊಡುವ ಪದಾರ್ಥಗಳನ್ನು ಕೈಕೊಳ್ಳುವದೆಂದರೆ ಒಂದು ನಾಯಿಯು ತಿನ್ನುತ್ತಿದ್ದ ಕೂಳನ್ನು ಮತ್ತೊಂದು ನಾಯಿಯು ಬಂದು ಕಸೆದುಕೊಂಡು ತಿನ್ನುವಂತೆಯೇ ಸರಿ ಎಂದು ವಚನಕಾರನು ಇಲ್ಲಿ ಹೇಳಿದ್ದಾನೆ.

ದೇವರ ದಾಸಿಮಯ್ಯನು ಸ್ತ್ರೀಯರ ವಿಷಯವಾಗಿ ಬಹಳ ಉಚ್ಚ ಕಲ್ಪನೆಯುಳ್ಳವನಾಗಿದ್ದಾನೆ. ಅವನು ತನ್ನ ವಚನಗಳಲ್ಲಿ ಅವರಿಗೆ ಬಹಳ ಮಹತ್ವ ಕೊಟ್ಟಿರುತ್ತಾನೆ. ಇದನ್ನು ಮುಂದಿನ ವಚನಗಳಲ್ಲಿ ವಾಚಕರು ಕಾಣಬಹುದು.

**೫೫. ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ. ಸತಿಪತಿಗಳೊಂದಾಗದವನ ಭಕ್ತಿ ಅಮೃತದೊಳು ವಿಷ ಬೆರೆದಂತೆ ಕಾಣಾ ರಾಮನಾಥಾ.**

ಸತಿಪತಿಗಳು ಸಹಕಾರದಿಂದ ವರ್ತಿಸುವದು ಎಷ್ಟು ಮಹತ್ವದ್ದೆಂಬದನ್ನು ದೇವರ ದಾಸಿಮಯ್ಯನು ಇಲ್ಲಿ ಬಹು ಸುಂದರವಾಗಿ ಹೇಳಿದ್ದಾನೆ. ಯಾವ ದಂಪತಿಗಳು ಪರಸ್ಪರ ಸಹಾಯಕರಾಗಿ ಶಿವನೊಡನೆ ಭಕ್ತಿಯಿಂದ ವರ್ತಿಸುತ್ತಾರೋ, ಅವರ ಭಕ್ತಿಯು ಈಶ್ವರನಿಗೆ ಪ್ರಿಯವಾಗುವದು. ಇಲ್ಲದಿದ್ದರೆ ಅಮೃತದಲ್ಲಿ ವಿಷ ಬೆರೆದಂತೆಯೇ ಸರಿ ಎಂದು ಹೇಳಿದ್ದಾನೆ. ಅಂದರೆ ಸತಿಯನ್ನೊಡಗೂಡದೆ ಭಕ್ತಿಯನ್ನಾಚರಿಸುವದು ವ್ಯರ್ಥವೆಂದು ವಚನಕಾರನ ಅಭಿಪ್ರಾಯವು.

**೫೬. ಗಂಡ ಭಕ್ತನಾಗಿ ಹೆಂಡತಿ ಭವಿಯಾದಡೆ**
**ಉಂಡ ಊಟ ಇಬ್ಬರಿಗೂ ಸರಿಭಾಗ. ಸತ್ತ ನಾಯ**
**ತಂದಟ್ಟದ ಮೇಲೆ ಇಳುಹಿ ಒಬ್ಬರೊಪ್ಪಚ್ಚಿಯ ಹಂಚಿ**
**ಕೊಂಡು ತಿಂಬಂತೆ ಕಾಣಾ ರಾಮನಾಥಾ.**

ಒಪ್ಪಚ್ಚಿ=ಸ್ವಲ್ಪ, ತುಸು

ಯಾವನು ತಾನೊಬ್ಬನೇ ಭಕ್ತಿಯಿಂದಾಚರಿಸಿ, ತನ್ನ ಸ್ತ್ರೀಯನ್ನು ಬೇರೆ ವಿಧವಾಗಿ ಆಚರಿಸುವಂತೆ ಮಾಡಗೊಡುತ್ತಾನೋ ಅಂಥವನನ್ನು ವಚನಕಾರನು ಇಲ್ಲಿ ಅತ್ಯಂತ ಹಳಿದಿದ್ದಾನೆ. ಸ್ತ್ರೀಯನ್ನು ಬಿಟ್ಟುಕೊಟ್ಟು ತಾನೊಬ್ಬನೇ ಶುದ್ಧಭಾವದಿಂದ ಗ್ರಹದಲ್ಲಿ ಆಚರಿಸುವದು ಆಗದೆಂದು ವಚನಕಾರನ ಅಭಿಪ್ರಾಯವು. ಹೀಗೆ ಆಚರಿಸುವವರು ಒಂದು ಸತ್ತನಾಯನ್ನು ತಂದು ಅಟ್ಟದ ಮೇಲಿಟ್ಟು ಇಬ್ಬರೂ ಅದನ್ನು ತುಸು ತುಸು ತಿಂದಂತೆಯೇ ಸರಿ ಎಂದು ಇಂಥವರನ್ನು ಬಹು ತಿರಸ್ಕಾರಭಾವದಿಂದ ಇಲ್ಲಿ ಹಳಿದಿದ್ದಾನೆ. ತಾನು ಹ್ಯಾಗೆ ಇದ್ದಾನೋ ಹಾಗೆಯೇ ಸ್ವಸ್ತ್ರೀಯನ್ನೂ ಮಾಡುವದು ಪತಿಯ ಕರ್ತವ್ಯವೆಂದು ವಚನಕಾರನ ಅಭಿಪ್ರಾಯವು.

**೫೭. ಗಂಡನುಳ್ಳವ್ಮನ ಗೌರಿ ಎಂದು ಕಂಡಡೆ,**
**ಭೂಮಂಡಲಕ್ಕೆ ಅರಸಾಗಿ ಪುಟ್ಟುವನಾತನು. ಗಂಡ**
**ನುಳ್ಳವ್ಮನ ಒಡವೆರೆದಾತ ನರಕದಲ್ಲಿ ದಿಂಡುಗೆಡೆದಿ**
**ಪ್ಪನೈ ರಾಮನಾಥಾ.**

ದಿಂಡುಗೆಡೆ= ತೊಲೆಯಂತೆ ನೆಲಕ್ಕೆ ಬೀಳು



ಯಾವ ಸ್ತ್ರೀಯು ಪತಿಯುಕ್ತಳಾಗಿದ್ದಾಳೋ ಆಕೆಯು ಪ್ರತ್ಯಕ್ಷ ಪರಮೇಶ್ವರನ ಹೆಂಡತಿಯಾದ ಪಾರ್ವತೀ ದೇವಿಯಂತೆ ಕಾಣಬೇಕೆಂದು ವಚನಕಾರನು ಇಲ್ಲಿ ಹೇಳಿದ್ದಾನೆ. ಆಕೆಯನ್ನು ಅತ್ಯಂತವಾಗಿ ಆದರಿಸಬೇಕಂದು ಅವನ ಅಭಿಪ್ರಾಯವು. ಹೀಗೆ ಯಾರು ವರ್ತಿಸುತ್ತಾರೋ ಅವರು ಮುಂದಿನ ಜನ್ಮನಲ್ಲಿ ಅರಸಾಗಿ ಹುಟ್ಟುವರು. ಆದರೆ ಯಾರು ಹೀಗೆ ವರ್ತಿಸದೆ, ಅವರನ್ನು ಅವಮಾನ ಬಡಿಸುತ್ತಾರೋ ಅವರನ್ನು ಪರಮಾತ್ಮನು ನರಕದಲ್ಲಿ ದಬ್ಬುವನೆಂದು ವಚನಕಾರನು ಇಲ್ಲಿ ಹೇಳಿದ್ದಾನೆ.

**೫೮. ಶಿವಭಕ್ತರು ತಮ್ಮ ನಿಜಕೈಲಾಸಕ್ಕೆ ಹೋದರೆ,**
**ಅವರರಸಿಯ ಪಾರ್ವತಿಯಸರಿ ಎಂದು ಕಾಣಲಿ**
**ಬೇಕು. ಅಲ್ಲಿ ಅನುಸರಣೆಯ ಕೊಟ್ಟು ಬೆರಸಿ ಮಾತ**
**ನಾಡುವ ನರಕಿಗಳನೇನೆಂಬೆ ರಾಮನಾಥಾ?**

ಅನುಸರಣೆ=ಅಯೋಗ್ಯವರ್ತನೆ; ಬೆರೆ=ಸೊಕ್ಕಿನಿಂದ ನಡೆ;

ಈ ಪ್ರಕಾರ ದೇವರ ದಾಸಿಮಯ್ಯನು ಕೇವಲ ಗಂಡನಿದ್ದಂಥ ಸ್ತ್ರೀಯರಕೂಡ ಅಷ್ಟೇ ಅಲ್ಲ, ಗಂಡ ಸತ್ತಂಥ ವಿಧವೆಯರ ಕೂಡವೂ ಹೀಗೆಯೇ ಅತ್ಯಾದರದಿಂದ ವರ್ತಿಸಬೇಕೆಂದು ಅವನು ಇಲ್ಲಿ ಹೇಳಿದ್ದಾನೆ. ಅವರೂ ಪಾರ್ವತಿಯ ಸರಿ ಎಂದು ಕಾಣಬೇಕು. ಹಾಗೆ ಇರದೆ ಯಾರು ಸೊಕ್ಕಿನಿಂದ ಅವರೊಡನೆ ನಡೆಯುತ್ತಾರೋ ಅವರು ನರಕಕ್ಕೆ ಹೋಗುವರೆಂದು ವಚನಕಾರನ ಅಭಿಪ್ರಾಯವು. ರಂಡೆ ಮುಂಡೆಯರು ಅಶುಭರಲ್ಲ, ಅವರೂ ಪಾರ್ವತಿಯ ಸಮಾನರು.

**೫೯. ಅಡಗ ತಿಂಬರು ಕಣಕದಡಿಗೆ ಇರಲ್ಕೆ. ಸುರೆಯ**
**ಕುಡಿವರು ಹಾಲಿರಲ್ಕೆ. ಮುಕ್ಕುವರು ಭಂಗಿಯ ಸಕ್ಕರೆ**
**ಇರಲ್ಕೆ. ಸ್ವಸ್ತ್ರೀ ಇದ್ದಂತೆ ಪರಸ್ತ್ರೀಯರಿಗೆ ಅಳುಪುವರು.**
**ಸತ್ತನಾಯ ಭಕ್ಷಿಸುವ ಹಡಕಿಗರನೇನೆಂಬೆನಯ್ಯಾ**
**ರಾಮನಾಥಾ?**

ಅಡಗ=ಮಾಂಸ; ಅಳುಪು=ತೊಂದರೆಕೊಡು; ಹಡಿಕೆ=ಹೊಲಸು

ಯಾರು ವ್ಯಭಿಚಾರಮಾಡುತ್ತಾರೋ ಅವರು ತಿನ್ನತಕ್ಕಂಥ ಹಿತಕರವಾದ ಅನೇಕ ವಸ್ತುಗಳು ಇದ್ದರೂ ಅವುಗಳನ್ನು ಬಿಟ್ಟು ಕೊಟ್ಟು ಹಿತವಲ್ಲದ ಪದಾರ್ಥಗಳನ್ನು ತಿಂದಂತೆಯೇ ಸರಿ ಎಂದು ಹೇಳಿದ್ದಾನೆ.

**೬೦. ಗುರುನಿರೂಪವ ಮಾಡದರು. ಪರವಧುವ ನೆರೆವರು. ಪರಧನವನಳುಪುವರು. ಗುರುವಿಲ್ಲವವರಿಗೆ. ಪರವಿಲ್ಲವವರಿಗೆ. ಇಂತಪ್ಪ ನರಕಿಗಳ ನೆನಗೊಮ್ಮೆ ತೋರದಿರಾ ರಾಮನಾಥಾ.**

ನಿರೂಪ=ಆಜ್ಞೆ; ನೆರೆ=ಕೂಡು;

ಯಾರು ಗುರುವಿನಾಜ್ಞೆಯನ್ನು ಮೀರುತ್ತಾರೋ, ಯಾರು ಪರವಧುವನ್ನು ಕೂಡುತ್ತಾರೋ, ಯಾರು ಪರಧನವನ್ನು ತುಡುಕುತ್ತಾರೋ, ಇಂಥವರಿಗೆ ಗುರುವಿಲ್ಲ, ಮುಕ್ತಿ ಇಲ್ಲವೆಂದು ವಚನಕಾರನು ಇಲ್ಲಿ ಹೇಳಿದ್ದಾನೆ.

**೬೧. ಪರವಧುವ ನೆರೆಯದೆ ಪರಧನವ ತುಡುಕದೆ ಪರದೈವದಿಚ್ಛೆನಡೆಯದೆ ಗುರುಲಿಂಗಜಂಗಮಕ್ಕೆ ವರದಾಸನಾದಾತನೆ ಧರೆಮೂರಕ್ಕೆ ಗುರುವಾಗಿಪ್ಪನೈ ರಾಮನಾಥಾ.**

ಕೇವಲ ಗುರುಲಿಂಗ ಜಂಗಮದ ಪೂಜಾಮಾತ್ರದಿಂದ ಮನುಷ್ಯನಿಗೆ ಮೋಕ್ಷವು ಲಭಿಸಲಾರದು. ಆದರೆ ಇದರೊಡನೆ ಆತನು ಪತ್ನೀವ್ರತನಾಗಿಯೂ ಲೋಭರಹಿತನಾಗಿಯೂ ಏಕದೈವ ನಿಷ್ಠಾಪರನಾಗಿಯೂ ಇರುವದು ಅವಶ್ಯವೆಂದು ವಚನಕಾರನು ಇಲ್ಲಿ ಅಂದಿದ್ದಾನೆ. ಅವನು ಇಲ್ಲಿ ನೀತಿಯ ಆಚರಣೆಗೆ ಬಹಳ ಮಹತ್ವಕೊಟ್ಟಿದ್ದಾನೆ.

**೬೨. ಸಾಸುವೆಯ ಮಟ್ಟ ಭಕ್ತಿಯುಳ್ಳನ್ನಕ್ಕ ವೇಶಿಯ ಮುಟ್ಟಿದಡೆ ಹೊಲೆಯರ ಮನೆಯ ಮುರುಹ ಹೊರಗಿರಿಸಿದಡೆ, ಹಂದಿ ಬಂದು ಮೂಸಿ ನೋವಂತೆ ಕಾಣಾ ರಾಮನಾಥಾ.**

ಮಟ್ಟ=ಪ್ರಮಾಣ; ಮುರುಹ=ಮಾಂಸ



ಭಕ್ತಿಯುತನಾದ ಬಳಿಕ ವೇಶ್ಯಾಗಮನವನ್ನು ಸಂಪೂರ್ಣವಾಗಿ ತ್ಯಜಿಸಬೇಕೆಂದು ವಚನಕಾರನ ಅಭಿಪ್ರಾಯವು. ಹೀಗೆ ವರ್ತಿಸದೆ ಇದ್ದರೆ ಹೊಲೆಯರ ಮನೆಯ ಮಾಂಸವನ್ನು ಹಂದಿ ತಿಂದಂತೆಯೇ ಸರಿ ಎಂದು ಇಲ್ಲಿ ಹೇಳಿದ್ದಾನೆ.

**೬೩. ಈಶನ ಶರಣರು ವೇಶಿಯ ಹೋದರೆ, ಮೀಸಲೋಗರವ ಹೊರಗಿರಿಸಿದಡೆ, ಹಂದಿ ಮೂಸಿ ನೋಡಿದಂತೆ ಕಾಣಾ ರಾಮನಾಥಾ.**

ಓಗರ=ಅನ್ನ

ಹಿಂದಿನ ವಚನದ ಭಾವವನ್ನೇ ವಚನಕಾರನು ಪುನಃ ಇಲ್ಲಿ ಬೇರೊಂದು ವಿಧವಾಗಿ ಹೇಳಿದ್ದಾನೆ.

**೬೪. ವೇಶಿಯ ಎಂಜಲ ತಿಂದು ಈಶ್ವರ ಪ್ರಸಾದವ ಭುಂಜಿಸಿದೊಡೆ ಓಸರಿಸಿತ್ತಯ್ಯಾ ಲಿಂಗವು. ಆತ ದ್ರೋಹಿ. ಭಾಷೆ ತಪ್ಪುಕನವನು ಭವದಲ್ಲಿ ಬಳಲುವನು. ಅಂತಹವನ ಕಂಡು ಹೇಸಿ ಕಡೆಗೆ ತೊಲಗಿದೆನು ಕಾಣಾ ರಾಮನಾಥಾ.**

ಓಸರಿಸು=ಹಿಂಜರಿ; ಭವ=ಸಂಸಾರ

ಲಿಂಗವಂತನು ಯಾವಾಗಲೂ ಈಶ್ವರನ ಪ್ರಸಾದವನ್ನು ಭುಂಜಿಸಿ ಅದಕ್ಕನುಸಾರವಾಗಿ ನಡೆಯುವದು ಅವನ ಕರ್ತವ್ಯವಾಗಿದೆ. ಇಂಥವನು ವೇಶಿಯರೊಡನೆ ಇದ್ದರೆ ಅವನು ಲಿಂಗದ್ರೋಹಿಯು, ಅವನು ಯಾವಾಗಲೂ ಪ್ರಪಂಚದ ತೊಂದರೆಯಲ್ಲಿ ಬಳಲುವನು ಎಂದು ವಚನಕಾರನು ಇಲ್ಲಿ ಹೇಳಿದ್ದಾನೆ.

**೬೫. ಹೆಣ್ಣ ಕಂಡು ಹೆಚ್ಚಿ ಹೆಕ್ಕಳ ಬಡುವಂತೆ ಕಣ್ಣಿಟ್ಟು ನೋಡದಿರಾ. ಶಿವಲಿಂಗ ದೇವನ ಕರಣದಿಚ್ಛೆಗೆ ಹರಿದು ನರಕದಲ್ಲಿ ನೆರೆದು ಬರುದೊರೆವೋಗದೆ ಮರೆಯದೆ ಪೂಜಿಸು ನಮ್ಮ ರಾಮನಾಥಾ.**

ಹೆಚ್ಚು=ಉಬ್ಬು; ಹೆಕ್ಕಳಬಡು= ಹೆಚ್ಚಾಗು, ಉನ್ಮತ್ತನಾಗು; ಬರುದೊರೆ= ನೀರಿಲ್ಲದ ನದಿ

ಲಿಂಗವಂತನ ಇಂದ್ರಿಯಗಳು ಯಾವಾಗಲೂ ಲಿಂಗಾಧೀನವಾಗಿರತಕ್ಕದ್ದು. ಆದ್ದರಿಂದ ಅವು ಯಾವಾಗಲೂ ಶುದ್ಧವಾಗಿರತಕ್ಕದ್ದು. ಇಂಥವನು ಸ್ತ್ರೀಯರಿಗೆ ಪರವಶನಾಗಿ ಆಚರಿಸುವದು ಲಿಂಗಾಚರಣೆಗೆ ವಿರೋಧವಾದದ್ದು. ಇವನ ಸ್ಥಿತಿಯು ನೀರಡಿಸಿದವನು ನೀರು ಕುಡಿಯಲಿಕ್ಕೆ ನೀರಿಲ್ಲದ ಹೊಳೆಗೆ ಹೋದಂತೆಯೇ ಸರಿ ಎಂದು ವಚನಕಾರನು ಇಲ್ಲಿ ಹೇಳಿದ್ದಾನೆ.

**೬೬. ಶಿವಪೂಜೆ ಎತ್ತ? ವಿಷಯದ ಸವಿಎತ್ತ? ಆ ವಿಷಯದ ಸವಿ ತಲೆಗೇರಿ ಶಿವಪೂಜೆಯ ಬಿಟ್ಟು ವೇಶಿಯರ ಎಂಜಲ ಹೇಸದೆ ತಿಂಬ ದೋಷಿಗಳನೇನೆಂಬೆನೈ ರಾಮನಾಥಾ?**

ಇಂದ್ರಿಯೋಪಭೋಗದ ಸುಖವು ಪರಮಾತ್ಮನಲ್ಲಿ ವಿಶ್ವಾಸವಿಟ್ಟು ಪೂಜಿಸುವ ಸುಖಕ್ಕೆ ಎಂದಿಗೂ ಸಮಬಾರದೆಂದು ವಚನಕಾರನ ಅಭಿಪ್ರಾಯವು.

**೬೭. ಆಸೆ ಪರಿಣಾಮಕ್ಕೆ ಬೇಸತ್ತು ಹೋಯಿತ್ತು, ಆಶ್ರಯದ ನೀಕ್ರಿ ಕೆಟ್ಟಿತ್ತು, ಗ್ರಾಸ ಮೆಲ್ಲನಾಯಿತ್ತು, ಸ್ತ್ರೀಯರ ಮೇಲಣೆಚ್ಚೆ ಕೆಟ್ಟಿತ್ತು, ಈಶ್ವರಾ ನಿಮ್ಮ ಪಾದಾಂಬುಜ ಸೇವೆಯಿಂದ ಕಾಣಾ ರಾಮನಾಥಾ.**

ವಚನಕಾರನು ಪರಮಾತ್ಮನ ಸೇವೆಯಿಂದ ಆಗುವ ಫಲಗಳನ್ನು ಇಲ್ಲಿ ವಿವರಿಸಿದ್ದಾನೆ. ಆತನ ಸೇವೆಯಿಂದ ಮನುಷ್ಯನ ಮನಸ್ಸಿನಲ್ಲಿ ಒಂದು ಬಗೆಯ ಪರಿಣಾಮ ಅಂದರೆ ಆನಂದವಾಗುತ್ತದೆ. ಈ ಆನಂದದಿಂದ ದುರಾಶೆಗಳು ಹೋಗಿ ಬಿಡುತ್ತವೆ. ಕ್ರಿಯಾರಹಿತನಾಗಿ ವರ್ತಿಸುವ ಯಾವ ಲಿಂಗಾಂಗಿಯ ರೀತಿಯೋ ಅದಾದರೂ ನಿಂತು ಹೋಗುತ್ತದೆ. ನಾಲಿಗೆಯ ರುಚಿಗೆ ಒಲಿದು ಭುಂಜಿಸುವ ವೃತ್ತಿಯಾದರೂ ಕಡಿಮೆಯಾಗುತ್ತದೆ. ಸ್ತ್ರೀ ವ್ಯಾಮೋಹವೂ ತಗ್ಗುತ್ತದೆ ಎಂದು ಹೇಳುತ್ತಾನೆ.

---



## ಪ್ರಾರ್ಥನೆಯ ವಚನಗಳು.

ಹಿಂದಿನ ವಚನಗಳಲ್ಲಿ ದೇವರದಾಸಿಮಯ್ಯನು ಭಕ್ತನ ಆಚರಣೆಗಳ ವಿಷಯವಾಗಿ ಬೋಧಿಸಿದ್ದಾನೆ. ಭಕ್ತನು ಪ್ರಪಂಚದ ವ್ಯಾಮೋಹದಲ್ಲಿ ಸಿಲುಕದೆ ವರ್ತಿಸತಕ್ಕದ್ದು, ಅವನು ಪರಮಾತ್ಮನಲ್ಲಿ ಅತ್ಯಂತ ವಿಶ್ವಾಸವುಳ್ಳವನಾಗಿರತಕ್ಕದ್ದು, ನೀತಿಯಿಂದ ನಡೆಯತಕ್ಕದ್ದು ಎಂದು ಮೊದಲಾಗಿ ವಿವರಿಸಿ ಮುಂದಿನ ವಚನಗಳಲ್ಲಿ ಅವನು ಪರಮಾತ್ಮನಲ್ಲಿ ಅತ್ಯಂತ ಭಕ್ತಿ ಪೂರಿತ ಮನಸ್ಕನಾಗಿ ಅವನನ್ನು ಸ್ತುತಿಯಿಸತೊಡಗುತ್ತಾನೆ. ಇವುಗಳಲ್ಲಿ ಅವನು ಪರಮಾತ್ಮನ ಅಸದೃಶ ಸಾಮರ್ಥ್ಯ, ಅವನ ಉದಾರಭಾವ ಮೊದಲಾದವುಗಳನ್ನು ಮನಸ್ಸಿನಲ್ಲಿ ತಂದುಕೊಂಡು, ಅವನ ಬಗ್ಗೆ ಭಕ್ತಿಯುಳ್ಳವನಾಗಿ ನಾನಾಬಗೆಯಾಗಿ ಹಾಡುತ್ತಾನೆ.

**೬೮. ಕಲಿವೀರ ಕಡಿವಲ್ಲಿ ಬಲುವಿಷವು ಸುಡುವಲ್ಲಿ ನೆಲೆಗೆಟ್ಟು ಮೊರೆಯೋ ಎಂಬಲ್ಲಿ, ನಿಮ್ಮ ತಲೆಗಾದು ರಕ್ಷಿಸಿದ ಸುಲಭನನರಿಯರೇ ಹೊಲೆಯರಿರಾ ಸಲೆ ನಂಬಿ ಬದುಕಿರೋ ರಾಮನಾಥಾ.**

ಇದರಲ್ಲಿ ವಚನಕಾರನು ಪರಮಾತ್ಮನು ಮಹಾಸಮರ್ಥನೆಂದು ಮೊದಲು ಹೇಳಿ ಅದಕ್ಕೆ ಕೆಲವು ಉದಾಹರಣೆಗಳನ್ನು ಕೊಟ್ಟಿದ್ದಾನೆ. ನಾರಸಿಂಹನು ಹಿರಣ್ಯಕಶ್ಯಿಪುವಿನ ವಧೆಯನ್ನು ಮಾಡಿ ಲೋಕ ಸಂಹಾರಕ್ಕೆ ಉದ್ಯುಕ್ತನಾದನು. ಮತ್ತು ಸಮುದ್ರಮಂಥನ ಮಾಡುವಾಗ್ಗೆ ಮಹಾವಿಷವು ಹುಟ್ಟಿ ಲೋಕವನ್ನು ದಹಿಸತೊಡಗಿತು. ಅಂಥ ಸಮಯದಲ್ಲಿ ಮಹಾ ಸಮರ್ಥನಾದ ಪರಮೇಶ್ವರನು ಜಗತ್ತನ್ನು ರಕ್ಷಿಸಿದನು. ಹೀಗೆ ಅವನು ಇದ್ದರೂ ಅವನನ್ನು ಕಾಣಲು ಸುಲಭವೆಂದು ವಚನಕಾರನು ಇಲ್ಲಿ ಹೇಳಿದ್ದಾನೆ. ಯಾರು ಅವನನ್ನು ನಂಬುತ್ತಾರೋ ಅವರಿಗೆ ಅವನ್ನು ಸುಲಭನೆಂದು ಅವನ ಅಭಿಪ್ರಾಯವು. ಆದ್ದರಿಂದ ಪರಮಾತ್ಮನನ್ನು ನಂಬಿ ಬದುಕಿರೆಂದು ವಚನಕಾರನು ಇಲ್ಲಿ ಹೇಳಿದ್ದಾನೆ.

**೬೯. ಕುಲಸ್ವಾಮಿ ನಿಮ್ಮುವನರಿವುದ ಕಂಡಡೆ ತಲೆವಾಗುವೆ, ಕಾತ ಕಳವೆಯಂತೆ. ಕುಲಜ ನಾನೆಂದು ತಲೆವಾಗದಿದ್ದಡೆ ತಲೆಶೂಲದ ತಲೆಯಯ್ಯಾ ರಾಮನಾಥಾ**

ಕಾತ=ತುಂಬಿ ಹಣ್ಣಾದ ; ಕುಲಜ= ಉತ್ತಮ ಕುಲದವ.

ವಚನಕಾರನು ಪರಮಾತ್ಮನ ವಿಷಯವಾಗಿ ಅನ್ನುವದೇನಂದರೆ, ಅವನು ಮಹಾ ಮಹಿಮನು. ಅವನ ಮಹಿಮೆಯನ್ನು ಕಂಡು ನಾನು ಆಶ್ಚರ್ಯ ಚಕಿತನಾಗಿದ್ದೇನೆ. ಮತ್ತು ನಾನು ತೆನೆ ಇಕ್ಕಿದ ಬತ್ತದ ಹುಲ್ಲಿನಂತೆ ತಲೆ ಬೊಗ್ಗಿಸಿಕೊಂಡಿದ್ದೇನೆ. ಅವನೇ ನನ್ನ ಕುಲಸ್ವಾಮಿಯು ಎಂದು ನಾನು ತಿಳಿಯತಕ್ಕದ್ದು. ಹೀಗೆ ತಿಳಿಯದೆ, ನಾನೇ ಕುಲದಲ್ಲಿ ಶ್ರೇಷ್ಠನೆಂದು ಗರ್ವತಾಳಿ ಪರಮಾತ್ಮನನ್ನು ಕಣ್ಣೆತ್ತಿ ನೋಡದಿದ್ದರೆ, ಆ ನನ್ನ ತಲೆಯು ತಲೆಕೂಲಿಯ ತಲೆಯು ಎಂದು ವಚನಕಾರನು ತನ್ನನ್ನು ಹೀಯಾಳಿಸಿಕೊಂಡಿದ್ದಾನೆ.

**೭೦. ನೀನೀಶನೀಯದೆ ಮಾನೀಶನೀವನೆ? ನೀನೀಸುವ ಕಾರಣ ಮಾನೀಶನೀವನು. ಆ ಮಾನೀಶನ ಹೃದಯದೊಳು ಪೊಕ್ಕು ನೀನೀಸುವ ಕಾರಣದಿಂದೆ ನೀನೆ ಶರಣೆಂಬೆನೈಯ್ಯ ರಾಮನಾಥಾ.**

ಮಾನೀಶ = ಮನುಷ್ಯ; ಈಸು = ಕೊಡು;

ಪರಮಾತ್ಮನು ಜಗತ್ತಿನ ವ್ಯವಹಾರಗಳಿಗೆಲ್ಲ ಪ್ರೇರಕನಾಗಿದ್ದಾನೆ. ಅವನ ಇಚ್ಛಾ ಮಾತ್ರದಿಂದ ಜಗತ್ತಿನ ಕಾರ್ಯಗಳು ನಡೆಯುತ್ತವೆ. ಆದ್ದರಿಂದ ಮನುಷ್ಯನಲ್ಲಿ ಕೊಡುವ ಗುಣವನ್ನು ಹುಟ್ಟಿಸುವವನು ಪರಮಾತ್ಮನೇ ಇದ್ದಾನೆ. ಆದ್ದರಿಂದ ವಚನಕಾರನು ಅನ್ನುವದೇನಂದರೆ, ನನಗೆ ಏನಾದರೂ ಬೇಕಾದರೆ ಮಾನವರನ್ನು ಬೇಡಲಾರೆನು. ಆದರೆ ಪರಮಾತ್ಮನನ್ನೇ ಬೇಡಿಕೊಳ್ಳುವೆನೆಂದು ಹೇಳುತ್ತಾನೆ. ಮನುಷ್ಯನಿಗೆ ಜಗತ್ತಿನಲ್ಲಿ ಅನೇಕ ಸಂಕಟಗಳು ಬರುವದುಂಟು. ಆ ಸಮಯದಲ್ಲಿ ಜನರ ಮೇಲೆ ಅವಲಂಬಿಸದೆ ಪರಮಾತ್ಮನನ್ನೇ ಶರಣು ಹೊಕ್ಕು ವರ್ತಿಸಬೇಕೆಂದು ವಚನಕಾರನ ಅಭಿಪ್ರಾಯವು.

**೭೧ ಒರತೆಗಳ ಕಂಡಿಂತು ಕೆಲರು ಬಾವಿಯ ತೋಡೆಂಬರು. ಅರವಟಿಗೆ ಛತ್ರವು ತಮ್ಮದೆಂಬರು. ಪರ್ಮೈದದಿರೆ, ಸುರಿವ ಮಳೆಯು ಸುರಿಸದಿದ್ದರೆ, ಅವರೇತರದಲ್ಲಿ ನೀಡುವರಯ್ಯಾ ರಾಮನಾಥಾ?**



ನದಿಯ ಪಾತ್ರದಲ್ಲಿರುವ ಒರತೆಗಳನ್ನು ನೋಡಿ ಜನರು ಬಾವಿಗಳನ್ನು ಅಗಿಯುತ್ತಾರೆ. ಮತ್ತು ಅರವಟಿಗೆ ಛತ್ರಗಳನ್ನೂ ಇಡುತ್ತಾರೆ. ಈ ಕಾರ್ಯಗಳನ್ನು ಮಾಡಿ ತಾವು ಬಹು ಪುಣ್ಯ ಮಾಡಿದೆವೆಂದು ಹೇಳಿಕೊಳ್ಳುತ್ತಾರೆ. ಇದು ಯುಕ್ತವಲ್ಲೆಂದು ವಚನಕಾರನ ಅಭಿಪ್ರಾಯವು. ಯಾಕಂದರೆ ಪರಮಾತ್ಮನು ಮಳೆಯನ್ನು ಸುರಿಸದಿದ್ದರೆ ಇವರು ಮೇಲ್ಕಂಡ ಪುಣ್ಯಕಾರ್ಯಗಳನ್ನು ಮಾಡಬಲ್ಲರೋ? ಮಾಡಲಾರರು. ಆದ್ದರಿಂದ ಮನುಷ್ಯನು ಮಾಡುವ ಪ್ರತಿಯೊಂದು ಕಾರ್ಯಕ್ಕೂ ಪರಮಾತ್ಮನ ಸಂಬಂಧ ಉಂಟು. ಸೃಷ್ಟಿಯ ನಿಯಮಗಳು ಮನುಷ್ಯನ ಪ್ರತಿಯೊಂದು ಕಾರ್ಯವನ್ನು ಬಿಗಿದು ಹೋಗಿವೆ. ಆದ್ದರಿಂದ ಅವನನ್ನೇ ಹೊಗಳುವದು ಯುಕ್ತವೆಂದು ವಚನಕಾರನ ಮುಖ್ಯ ಅಭಿಪ್ರಾಯವು.

**೭೨. ಉಣ್ಣಿ ಕೆಚ್ಚಲ ಹತ್ತಿ ಉಂಬುದೇ ನೊರೆವಾಲ? ಪುಣ್ಯ ಕ್ಷೇತ್ರದಲ್ಲಿ ಹುಟ್ಟಿ ಉಣ್ಣದವನು ಆ ಉಣ್ಣಿಯಿಂದ ಕರಕಷ್ಟ ರಾಮನಾಥಾ.**

ಅನೇಕರು ಪರಮಾತ್ಮನು ಎಲ್ಲಿ ಇದ್ದಾನೆ ಮತ್ತು ಅವನನ್ನು ಪೂಜಿಸುವದಾದರೂ ಹೇಗೆ ಎಂದು ಪ್ರಶ್ನಮಾಡುವದುಂಟು. ಇವರಿಗೆ ದಾಸಿಮಯ್ಯನು ಈ ವಚನದಲ್ಲಿ ಉತ್ತರ ಕೊಟ್ಟಿದ್ದಾನೆ.

ಪರಮಾತ್ಮನು ಸರ್ವವ್ಯಾಪಿಯಾಗಿದ್ದಾನೆ. ಅವನು ನಮಗೆ ದೂರದಲ್ಲಿಲ್ಲ. ಸಮೀಪದಲ್ಲಿಯೇ ಇದ್ದಾನೆ. ಹ್ಯಾಗೆ ಆಪಿನ ಕೆಚ್ಚಲು ಉಣ್ಣಿಗೆ ಹತ್ತಿಯಾಗಿ ಇರುತ್ತದೋ ಹಾಗೆಯೇ ಪರಮಾತ್ಮನು ನಮ್ಮ ಹತ್ತರವೇ ಇದ್ದಾನೆ. ಆದರೆ ಆ ಉಣ್ಣಿಯು ಆ ಕೆಚ್ಚಲಿನಲ್ಲಿಯ ನೊರೆವಾಲನ್ನು ಹ್ಯಾಗೆ ಅರಿಯದೋ ಹಾಗೆಯೇ ನಾವು ನಮಗೆ ಸಮೀಪವರ್ತಿಯಾದ ಪರಮಾತ್ಮನನ್ನು ಅರಿಯಲಾರದಾಗಿದ್ದೇವೆ. ಜಗತ್ತೆಂದರೆ ಪರಮಾತ್ಮನು ವಾಸಿಸತಕ್ಕ ಒಂದು ಪುಣ್ಯಕ್ಷೇತ್ರವು. ಇಂಥ ಕ್ಷೇತ್ರದಲ್ಲಿ ನಾವು ಇದ್ದರೂ ಕೂಡ ನಾವು ಅದರ ಉಪಯೋಗವನ್ನು ಮಾಡಿಕೊಳ್ಳುವದಿಲ್ಲ. ಅಂದಬಳಿಕ ನಮ್ಮ ಸ್ಥಿತಿಯು ಉಣ್ಣಿಗಿಂತಲೂ ಕಡೆಯಾದದ್ದೆಂದು ವಚನಕಾರನ ಅಭಿಪ್ರಾಯವು.

**೭೩. ಇಳೆ ನಿಮ್ಮದಾನ. ಬೆಳೆ ನಿಮ್ಮದಾನ. ಸುಳಿದು ಬೀಸುವ ವಾಯು ನಿಮ್ಮದಾನ. ನಿಮ್ಮ ದಾನವನುಂಡು ಅನ್ಯರ ಹೊಗಳುವ ಕುನ್ನಿಗಳನೇನೆಂಬೆ ರಾಮನಾಥಾ?**

ವಚನಕಾರನು ಸೃಷ್ಟಿಯ ಸೌಂದರ್ಯವನ್ನೂ ಅದರ ಉಪಯುಕ್ತತೆಯನ್ನೂ ನೋಡಿ ಪರಮಾತ್ಮನ ಬಗ್ಗೆ ಅತ್ಯಾದರ ಭಾವವನ್ನು ತಾಳಿ ಅವನು ಈ ವಚನವನ್ನು ನುಡಿದಿರುವನು. ಅರ್ಥವು ಸ್ಪಷ್ಟವದೆ. ದಯಾಶಾಲಿಯಾದ ಪರಮಾತ್ಮನನ್ನೇ ಹೊಗಳಬೇಕೆಂದು ಅವನ ಅಭಿಪ್ರಾಯವು.

**೭೪. ಕಾಯ ನಿಮ್ಮ ದಾನ. ಜೀವ ನಿಮ್ಮ ದಾನ. ಕಾಯ ಜೀವವುಳ್ಳಲ್ಲಿಯೇ ನಿಮ್ಮ ಪೂಜಿಸದ ನಾಯಿಗಳನೇನೆಂಬೆ ಹೇಳಾ ರಾಮನಾಥಾ?**

ಮನುಷ್ಯನ ಕಾಯಜೀವಗಳಾದರೂ ಪರಮಾತ್ಮನ ದೇಣಿಗೆಗಳಿವೆ. ಈ ದೇಣಿಗೆಗಳ ಸದುಪಯೋಗವನ್ನು ಮನುಷ್ಯನು ಮಾಡತಕ್ಕದ್ದು. ಅಂದರೆ ಅವನು ಪರಮಾತ್ಮನನ್ನು ಭಕ್ತಿಭಾವದಿಂದ ಪೂಜಿಸುವದೇ ಅವನ ಕರ್ತವ್ಯವೆಂದು ವಚನಕಾರನ ಅಭಿಪ್ರಾಯವು.

**೭೫. ಎತ್ತು ನಿಮ್ಮ ದಾನ ಬಿತ್ತು ನಿಮ್ಮ ದಾನ. ಸುತ್ತಿ ಹರಿವ ಸಾಗರವೆಲ್ಲ ನಿಮ್ಮ ದಾನ. ನಿಮ್ಮ ದಾನವನುಂಡು ಅನ್ಯರ ಹೊಗಳುವ ಕುನ್ನಿಗಳನೇನೆಂಬೆ ರಾಮನಾಥಾ?**

ಬಿತ್ತು=ಬೀಜ

ಪರಮಾತ್ಮನು ಮನುಷ್ಯನಿಗೆ ಎತ್ತು, ಬೀಜ, ನೀರನ್ನು ಕೊಟ್ಟಿದ್ದಾನೆ. ಇವುಗಳಿಂದ ಅವನು ಜೀವಿಸುತ್ತಾನೆ. ಇವಿಲ್ಲದಿದ್ದರೆ ಅವನು ಕ್ಷಣ ಹೊತ್ತು ಜೀವಿಸಲಾರನು. ಅಂದ ಬಳಿಕ ಅವನು ಎಂಥ ಕಾರುಣ್ಯವುಳ್ಳವನು ಎಂದು ವಚನಕಾರನು ಇಲ್ಲಿ ಅಂದಿದ್ದಾನೆ. ಆದ್ದರಿಂದ ಪರಮಾತ್ಮನಿಗೋಸ್ಕರ ನಾವು ಕೃತಜ್ಞತಾಭಾವವನ್ನು ತಾಳಿ ಅವನನ್ನೇ ಹೊಗಳಬೇಕೇ ಹೊರ್ತು ಅನ್ಯರನ್ನು ಹೊಗಳಬಾರದೆಂದು ವಚನಕಾರನ ಅಭಿಪ್ರಾಯವು.



**೭೬. ಎತ್ತನೇರಿದ ಕರ್ತನೊಬ್ಬನೇ ಜಗಕ್ಕೆಲ್ಲ. ಎತ್ತು ಬೆಳೆದ ಧಾನ್ಯವನುಂಬ ದೇವರ್ಕಳೆಲ್ಲ ನಿಮ್ಮ ತೊತ್ತಿನ ಮಕ್ಕಳು ಕಾಣಾ ರಾಮನಾಥಾ.**

ಇಲ್ಲಿ ವಚನಕಾರನು ಎತ್ತಿನ ಮಹತ್ವವು ಎಷ್ಟಿದೆ ಎಂಬದನ್ನು ಹೇಳಿದ್ದಾನೆ. ಅದು ಪರಮಾತ್ಮನಿಗೆ ಆಧಾರವಾಗಿದೆ. ಅದು ಧಾನ್ಯಾದಿಗಳನ್ನು ಬೆಳೆಯಲು ಸಹಾಯಕವಾಗಿದೆ. ಮತ್ತು ಈ ಧಾನ್ಯಾದಿಗಳು ಪ್ರಸಾದ ರೂಪವಾಗಿ ದೇವತೆಗಳಿಗೆ ಆಹಾರವಾಗಿವೆ. ಇಂಥ ಮಹತ್ವವಾದ ದೇಣಿಗೆಯನ್ನು ಪರಮಾತ್ಮನು ನಮಗೆ ಕೊಟ್ಟಿದ್ದಾನೆ.

**೭೭. ಇಂತೆಂದ ಭೂಮಿಯ, ಇಂತೆಂದ ಗಗನವನಿಂತೆಂದ ಸಪ್ತ ಸಾಗರವ ಇಂತೀ ಲೋಕದೊಳಗೆ ತಿಂಥಿಣಿಯಾಗಿಪ್ಪ ಅಚಿಂತ್ಯನನಾರುಬಲ್ಲರೈ ರಾಮನಾಥಾ?**

ತಿಂಥಿಣಿ=ಸಮೂಹ, ದಟ್ಟ

ಈ ವಚನವು ಹಿಂದಿನ ೭೩, ೭೪, ೭೫, ೭೬, ಈ ವಚನಗಳಿಗೆ ಸಂಬಂಧಿಸಿದ್ದು ಇರುತ್ತದೆ. ವಚನಕಾರನ ಅಭಿಪ್ರಾಯವೇನೆಂದರೆ, ಇಳೆ, ಬೆಳೆ, ವಾಯು, ಕಾಯ, ಜೀವ, ಎತ್ತು, ನೀರು, ಆಕಾಶ ಇಂಥ ಉಪಯುಕ್ತವಾದಂಥ ಸುಂದರವಾದಂಥ ಶ್ರೇಷ್ಠ ವಸ್ತುಗಳು ಜಗತ್ತಿನಲ್ಲಿದ್ದ ಬಳಿಕ, ಪರಮಾತ್ಮನೆಂಬ ಶ್ರೇಷ್ಠ ವಸ್ತುವು ಅವುಗಳಲ್ಲೆಲ್ಲ ದಟ್ಟನಾಗಿ ವಾಸಿಸಿರಲಿಕ್ಕೆ ಬೇಕು. ಆದರೆ ಅವನು ಹೀಗೆ ನಮಗೆ ಸಮೀಪವಾಗಿದ್ದರೂ ಅವನು ಅಚಿಂತ್ಯನು ಅಂದರೆ ತಿಳಿಯಲಿಕ್ಕೆ ದುಸ್ತರನಾಗಿದ್ದಾನೆ. ಇಂಥ ಪರಮಾತ್ಮನನ್ನು ಯಾರು ಬಲ್ಲರು ಎಂದು ವಚನಕಾರನು ಆಶ್ಚರ್ಯ ಚಕಿತನಾಗಿ ಅಂದಿದ್ದಾನೆ. ಅಂದರೆ ನಾವೆಲ್ಲರು ಅವನನ್ನೇ ಆದರಿಸಬೇಕೆಂದು ವಚನಕಾರನ ಅಭಿಪ್ರಾಯವು.

**೭೮. ಎಡರಡಸಿದಲ್ಲಿ ಮೃಡ ನಿಮ್ಮ ನೆನೆವರು. ಎಡರಡಸಿದ ವಿಪತ್ತು ಕಡೆಯಾಗಲೊಡನೆ, ಮೃಡ, ನಿಮ್ಮ ನೆಡಹಿಯೂ ಕಾಣರು ರಾಮನಾಥಾ.**

ಎಡರು=ಸಂಕಟ, ಅಡಸು=ಮೇಲೆಬರು

ಪರಮಾತ್ಮನು ಹೀಗೆ ದಯಾಳುವಾದರೂ ಕೂಡ, ಕೃತಘ್ನರಾದ ಜನರು ಅವನನ್ನು ನೆನೆಯುವದಿಲ್ಲ. ಸಂಕಟಸಮಯದಲ್ಲಿ ಮಾತ್ರ ಅವ ರಿಗೆ ಅವನ ನೆನಪಾಗುತ್ತದೆ. ಆದರೆ ಆ ಸಂಕಟಗಳು ದೂರಾದ ಕೂಡಲೇ ಪರಮಾತ್ಮನು ಅವರ ಕಾಲ್ದೆಸೆಯಲ್ಲಿ ಇದ್ದರೂ ಕೂಡ ಅವರು ಅವ ನನ್ನು ಕಾಣರೆಂದು ಜಗತ್ತನ್ನು ಹಳಿದಿದ್ದಾನೆ.

**೭೯. ಅಡವಿಯಾರಣ್ಯದಲ್ಲಿ ಮಡಿವನಕ ತಪವಿದ್ದು,**
**ಮಡಿವಾಗ ಮೃಡನ ಮರೆವಡೆ ತುಂಬಿದ ಸಕ್ಕರೆಯು**
**ಮಡುವಿನೊಳಗೆ ಹೊಕ್ಕಂತೆ ರಾಮನಾಥಾ.**

ಜನರು ಪರಮಾತ್ಮನನ್ನು ಕಾಣಬೇಕೆಂದು ಇಡೀ ಆಯುಷ್ಯವನ್ನೆಲ್ಲ ಅದರಲ್ಲಿ ಕಳೆಯುತ್ತಾರೆ. ಅವರು ಅಡವಿಯಾರಣ್ಯಗಳನ್ನು ಹೊಕ್ಕು ತಪಗಳನ್ನು ಆಚರಿಸುತ್ತಾರೆ. ಆದರೆ ಇಷ್ಟೆಲ್ಲ ಮಾಡಿದರೂ ಅವರ ಮನಸ್ಸು ಮಾತ್ರ ಶುದ್ಧವಾಗಿರುವದಿಲ್ಲ. ಇಂಥವರು ಸಾವು ಸಮೀಪಕ್ಕೆ ಬಂದ ಹಾಗೆ ಹೆಚ್ಚೆಚ್ಚು ಲೋಭವುಳ್ಳವರಾಗುತ್ತಾರೆ. ಮತ್ತು ಸಾಯುವ ಕಾಲಕ್ಕೆ ಪರಮಾತ್ಮನ ಹೆಸರನ್ನು ಸಹ ತೆಗೆದುಗೊಳ್ಳುವದಿಲ್ಲ. ಆಗ ಅವರು ತಮ್ಮ ಧನಕನಕ ವಸ್ತುಗಳನ್ನೇ ನೆನಿಸುತ್ತಾರೆ. ಇಂಥವರು ಕಷ್ಟಪಟ್ಟಿದ್ದೆಲ್ಲ ಸಕ್ಕರೆಯನ್ನು ತೆಗೆದುಕೊಂಡು ನೀರಮಡುವಿನಲ್ಲಿ ಹೊಕ್ಕಂತೆಯೇ ಸರಿ ಎಂದು ವಚನಕಾರನು ಇಲ್ಲಿ ಹೇಳಿದ್ದಾನೆ. ಅಂದರೆ ಇಂಥವರು ಮಾಡಿದ್ದೆಲ್ಲ ವ್ಯರ್ಥವೆಂದು ವಚನಕಾರನ ಅಭಿಪ್ರಾಯವು.



## ಮಾಹೇಶ್ವರ ಸ್ಥಲ.

ಮಾಹೇಶ್ವರ ಸ್ಥಲದಲ್ಲಿ ಭಕ್ತನು ನಿಷ್ಠಾಪರನಾಗಿ ವರ್ತಿಸತಕ್ಕದ್ದು. ಅಂದರೆ ಅವನು ತನ್ನ ಭಕ್ತಿಯಲ್ಲಿ ಅಚಲನಾಗಿರತಕ್ಕದ್ದು. ಅವನಿಗೆ ಅನೇಕ ಸಂಕಟಗಳು ಒದಗಿದರೂ ಕೂಡ ಅವುಗಳಿಗೆ ಅವನು ಅಂಜತಕ್ಕದ್ದಲ್ಲ. ಕೇವಲ ಲಿಂಗದೊಳಗೆ ನಿಷ್ಠೆಯುಳ್ಳವನಾಗಿ ಅದನ್ನು ಬಿಟ್ಟು ಉಳಿದ ದೈವಗಳನ್ನು ಸೇವಿಸಕೂಡದು. ಮತ್ತು ಅವುಗಳನ್ನು ಪೂಜಿಸ ಕೂಡದು. ಲಿಂಗವಿದ್ದವರೆಲ್ಲರೊಡನೆ ಬಂಧು ಭಾವದಿಂದ ವರ್ತಿಸತಕ್ಕದ್ದು. ಆದ್ದರಿಂದ ಅವರಲ್ಲಿ ಜಾತಿಭೇದವನ್ನೆಣಿಸಬಾರದು. ಇವೆಲ್ಲವುಗಳು ಮಾಹೇಶ್ವರನ ಲಕ್ಷಣಗಳಾಗಿರುತ್ತವೆ.

**೮೦. ನಿಷ್ಠೆಯುಳ್ಳ ಭಕ್ತ ನಟ್ಟಡವಿಯಲ್ಲಿರ್ದಡೇನು ?**
**ಅದು ಪಟ್ಟಣವೆಂದೆನ್ನಿಸುವದು. ನಿಷ್ಠೆ ಇಲ್ಲದ ಭಕ್ತ**
**ಪಟ್ಟಣದಲ್ಲಿದ್ದರೂ ಅದು ನಟ್ಟಡವಿ ಕಾಣಾ ರಾಮ**
**ನಾಥಾ ?**

ಸ್ಥಿರಬುದ್ಧಿಯುಳ್ಳವನಾಗಿ ಭಕ್ತಿಯನ್ನು ಮಾಡುವ ಭಕ್ತನು ಇಲ್ಲಿ ಬಹು ಸರಸಾಗಿ ವರ್ಣಿಸಲ್ಪಟ್ಟಿದ್ದಾನೆ. ಭಕ್ತನಿದ್ದ ಸ್ಥಳವೇ ಪಟ್ಟಣವೆನ್ನಿಸಿಕೊಳ್ಳುವದು. ಇಂಥವನಿಲ್ಲದ ಊರಲ್ಲಿ ಎಷ್ಟು ಜನಗಳಿದ್ದರೂ ಕೂಡ ಅದು ಮಧ್ಯಅಡವಿ ಎಂದು ವಚನಕಾರನ ಅಭಿಪ್ರಾಯವು. ಸ್ಥೈರ್ಯಧೈರ್ಯಾದಿಗಳಿಂದ ಕೂಡಿಕೊಂಡು ಯಾವ ಭಕ್ತನು ವರ್ತಿಸುತ್ತಾನೋ ಅವನ ನೆರವು ಒಂದು ದೊಡ್ಡ ಪಟ್ಟಣದ ಬೆಂಬಲದಂತೆಯೇ ಸರಿ. ಯಾಕಂದರೆ ಅವನು ಅತ್ಯಂತ ಧೈರ್ಯವುಳ್ಳವನಾದ್ದರಿಂದ ಕಾರ್ಯಗಳಲ್ಲಿ ಅವನ ಸಹಾಯವು ಉಪಯೋಗಕರವಾಗಿರುತ್ತದೆ. ಆದರೆ ನಿಷ್ಠೆ ಇಲ್ಲದ ಅಂಜುಬುರುಕರು ಎಷ್ಟು ಜನರಿದ್ದರೂ ಕೂಡ ಅವರಿಂದ ಉಪಯೋಗವಿಲ್ಲ. ಇಂಥವರಿದ್ದ ಠಾವು ಮಧ್ಯಅಡವಿ ಎಂದು ವಚನಕಾರನ ಅಭಿಪ್ರಾಯವು.

**೮೧. ಇರುಹೆಯುತೆರನರಿದು ನೆರೆ ಛಲವಿಲ್ಲದೆ ಮಾಡಿ**
**ದವನ ಭಕ್ತಿ ಇರುಹೆಯಿಂದ ಕರಕಷ್ಟ ಕಾಣಾ ರಾಮ**
**ನಾಥಾ.**

ಮಾಡಿದ ಭಕ್ತಿಯಲ್ಲಿ ಛಲವಿರಬೇಕು. ಅಂದರೆ ಸ್ವಲ್ಪ ತೊಂದರೆಗಳು ಬಂದ ಕೂಡಲೆ ಅದನ್ನು ಬಿಟ್ಟುಬಿಡಬಾರದು. ಹ್ಯಾಗೆ ಇರುವೆಯು ಯಾವಾಗಲೂ ಪ್ರಯತ್ನಿಸುತ್ತಲಿರುವದೋ ಹಾಗ ಭಕ್ತನು ಪ್ರಯತ್ನಿಸುತ್ತಲಿರಬೇಕು. ಹೀಗೆ ಮಾಡದವನು ಇರುವೆಗಿಂತಲೂ ಕಡೆ ಎಂದು ವಚನಕಾರನ ಅಭಿಪ್ರಾಯವು.

**೮೦. ಹರ ತನ್ನ ಭಕ್ತರ ತಿರಿವಂತೆ ಮಾಡುವ. ಒರೆದು ನೋಡುವ ಸುವರ್ಣದ ಚಿನ್ನದಂತೆ. ಅರದು ನೋಡುವ ಚಂದನದಂತೆ. ಅರಿದು ನೋಡುವ ಕಬ್ಬಿನ ಕೋಲಿನಂತೆ ಬೆದರದೆ ಬೆಚ್ಚದೆ ಇದ್ದಡೆ ಕರವಿಡಿದೆತ್ತಿಕೊಂಬ ನಮ್ಮ ರಾಮನಾಥನು.**

ತಿರಿ=ಭಿಕ್ಷೆ ಬೇಡು; ಅರೆ=ತಿಕ್ಕು; ಅರಿ=ಕೊಯ್ಯು; ಬೆಚ್ಚು=ಅಂಜು;

ಭಕ್ತನ ಪ್ರಯತ್ನದಲ್ಲಿ ಪರಮಾತ್ಮನು ಅನೇಕ ಎಡರುಗಳನ್ನು ತಂದೊಡ್ಡುವನು. ಇದು ಅವನ ಪರೀಕ್ಷಾರ್ಥವಾಗಿ ಇರುತ್ತದೆ. ಆದರೆ ಹ್ಯಾಗೆ ಸುವರ್ಣ, ಚಂದನ, ಮತ್ತು ಕಬ್ಬು ಇವುಗಳನ್ನು ಘರ್ಷಣ ಮಾಡಿದ ಹಾಗೆ ಅವುಗಳ ಸುಗುಣಗಳು ಹೆಚ್ಚೆಚ್ಚಿಗೆ ತೋರಬೀಳುತ್ತವೋ ಹಾಗೆ ಭಕ್ತನು ಇದ್ದರೆ ಪರಮಾತ್ಮನು ಅವನಿಗೆ ಒಲಿಯುವನೆಂದು ವಚನಕಾರನ ಅಭಿಪ್ರಾಯವು.

**೮೧. ಇಂದಿಗೆಂತು ನಾಳಿಗೆಂತೆಂದು ಚಿಂತಿಸಲೇಕೆ? ತಂದಿಕ್ಕುವ ಶಿವಂಗೆ ಬಡತನವೆ ರಾಮನಾಥಾ?**

ಭಕ್ತನು ತನ್ನ ಕರ್ತವ್ಯದಲ್ಲಿ ಯಾವಾಗಲೂ ಮಗ್ನನಾಗಿರಬೇಕು. ಹೀಗೆ ಮಾಡದೆ ಅವನು ತನ್ನ ಸ್ಥಿತಿಯು ಇವೊತ್ತು ಹ್ಯಾಗೆ ಆದೀತು, ನಾಳೆ ಹ್ಯಾಗೆಆದೀತು, ಎಂದು ಎಂದಿಗೂ ಚಿಂತಿಸಬಾರದು. ಈ ಪ್ರಕಾರ ಧೈರ್ಯದಿಂದ ವರ್ತಿಸಿದರೆ ಅವನಿಗೆ ಯಾವ ತೊಂದರೆಗಳೂ ಸಂಭವಿಸುವದಿಲ್ಲ. ಒಂದು ವೇಳೆ ತೊಂದರೆಗಳು ಬಂದರೂ ಅವುಗಳನ್ನು ಪರಮಾತ್ಮನು ತಾನಾಗಿಯೇ ದೂರಮಾಡುವನು.

**೮೨. ದಾಸನ ಕುಲವಾದಾತ ಈಶಂಗಲ್ಲದೆ ಶರಣೆನ್ನ. ಆಸೆ ಮಾಡ ನೋಡಾ. ಅನ್ಯ ದೈವಂಗಳಿಗೆ ದೇಶದ**



**ಪಿಶಾಚಿಗಳಿಗೆ ಆಸೆಮಾಡನೋಡಾ. ಆಸೆ ಮಾಡಿದನಾದಡೆ ಅವ ದಾಸಕುಲವಲ್ಲ. ಅವನನ್ಯ ಕುಲ ಕಾಣಾ ರಾಮನಾಥಾ.**

ಪರಮಾತ್ಮನಿಗೆ ದಾಸನಾಗಿ ವರ್ತಿಸುವಂಥವನು ಪರಮಾತ್ಮನೊಬ್ಬನನ್ನೇ ನಂಬಬೇಕೇಹೊರ್ತು ಅನ್ಯದೇವತೆಗಳನ್ನೂ, ಪಿಶಾಚಿಗಳನ್ನೂ. ನಂಬಕೂಡದು. ಅಂದರೆ ಭಕ್ತನು ದೇವರು ಒಬ್ಬನೇ ಇದ್ದಾನೆಂದು ಭಾವಿಸಿ ಅವನಲ್ಲಿ ವಿಶ್ವಾಸವನ್ನಿಟ್ಟು ವರ್ತಿಸಬೇಕೆಂದು ದೇವರದಾಸಿಮಯ್ಯನು ಅನ್ನುತ್ತಾನೆ.

**೮೩. ಈಶ ನಿಮ್ಮ ಪೂಜಿಸಿದ ಬಳಿಕ ಅನ್ಯ ದೈವಂಗಳಿಗೆ ಹೇಸಿರಬೇಕು. ಹೇಸದೆ ಅನ್ಯದೈವಕ್ಕಾಸೆ ಮಾಡಿದರೆ ಅವ ನಮ್ಮ ಈಶ್ವರಂಗೆ ಹೊರಗು. ದೋಷರಹಿತ ಭಕ್ತರು ಅವಂಗೆ ಕುಲನೆಂದು ಕೂಸ ಕೊಟ್ಟು ಕೂಡುಂಡರೆ ಮೀಸಲ ಬೋನವ ನಾಯಿ ಮುಟ್ಟಿದಂತೆ ಕಾಣಾ ರಾಮನಾಥಾ?**

ಹಿಂದಿನ ವಚನದ ಅರ್ಥವೇ ಇದರಲ್ಲಿ ಇದೆ.

ಈ ಪ್ರಕಾರ ಏಕದೇವನಿಷ್ಠಾಪರನಾಗಿ ವರ್ತಿಸುವಂಥ ಭಕ್ತನೊಡನೆ ಮಾತ್ರ ಭಕ್ತನು ಲಗ್ನವ್ಯವಹಾರ ಅನ್ನೋದಕ ವ್ಯವಹಾರಗಳನ್ನು ಬೆಳೆಸಬೇಕಲ್ಲನೆ ಲಿಂಗಧಾರಿಯಾದ ಮಾತ್ರಕ್ಕೆ ಶ್ರೇಷ್ಠ ಕುಲದವನೆಂದು ತಿಳಿದು ಅವನೊಡನೆ ಹೀಗೆ ಸಂಬಂಧವಿಡಬಾರದು. ಸಂಬಂಧವಿಟ್ಟರೆ ಪರಮಾತ್ಮನಿಗೆ ಅರ್ಪಿಸಿದ ನೈವೇದ್ಯವನ್ನು ನಾಯಿ ಮುಟ್ಟಿದಂತೆಯೇ ಸರಿ. ಎಂದು ದೇವರದಾಸಿಮ್ಮಯ್ಯನು ಅನ್ನುತ್ತಾನೆ.

**೮೪. ಜಂಬೂದ್ವೀಪವನೆಲ್ಲ ತಿರುಗಿದಡೇನು ? ಜಂಬುಕ ಶಂಭುಧ್ಯಾನದಲ್ಲಿ ಸೈವೆರಗಪ್ಪುದೇ? ಕುಂಭಿನಿಯ ತಿರುಗಿ ಕೋಟಿತೀರ್ಥವ ಮಿಂದಡೇನು? ಶಂಭುನಿಮ್ಮಲ್ಲಿ ಸ್ವಯವಾಗದವನು ಕುಂಭಿನಿಯ ತಿರುಗಿದ ಡೊಂಬನಂತೆ ಕಾಣಾ ರಾಮನಾಥಾ?**

ಜಂಬುಕ = ನರಿ; ಸ್ಮೈವೆರಗು = ವಿಶೇಷಆಶ್ಚರ್ಯವುಳ್ಳವನಾಗು, ಮುಗ್ಧನಾಗು; ಕುಂಭಿನಿ = ಪೃಥ್ವಿ;

ಜನಗಳು ಪರಮಾತ್ಮನನ್ನು ಕಾಣಬೇಕೆಂದು ಅನೇಕ ತೀರ್ಥ ಕ್ಷೇತ್ರಗಳನ್ನು ತಿರುಗುವದುಂಟು. ಇದು ವ್ಯರ್ಥವೆಂದು ದೇವರದಾಸಿ ಮ್ಮಯ್ಯನ ಅಭಿಪ್ರಾಯವು. ನರಿಯು ಇದೇ ಪ್ರಕಾರ ಪೃಥ್ವಿಯ ಪ್ರದ ಕ್ಷಿಣೆ ಮಾಡುವದುಂಟು. ಆದರೆ ಅದು ಪರಮಾತ್ಮನನ್ನು ಕಾಣಲರಿಯದು. ಪರಮಾತ್ಮನನ್ನು ಕಾಣಬೇಕೆಂಬುವವನು ಪರಮಾತ್ಮನ ಧ್ಯಾನದಲ್ಲಿ ಸಿರ ತನಾಗಿರಬೇಕು. ಹೀಗೆ ಮಾಡದವನು ನಾನಾಬಗೆಯ ಶಾರೀರಿಕ ಚಾಪ ಲ್ಯಗಳನ್ನು ತೋರಿಸುತ್ತ ವೇಶ ತಿರುಗುವಂಥ ಡೊಂಬನಿಗೆ ಸರಿಯಾದ ವನೆಂದು ವಚನಕಾರನು ತೀರ್ಥಯಾತ್ರೆಗಳನ್ನು ಮಾಡುವವರನ್ನು ಹೀ ಯಾಳಿಸಿದ್ದಾನೆ.

೪೭. ಮಾರಿಯ ಪೂಜಿಸಿಮಸಣಕ್ಕೆ ಹೋಗಿ ಗೋರಿ
ಗೊಳಿಸಿ ಕುರಿಯ ಕೊರಳನೆ ಕೊಯಿದುಂಬ ಕ್ರೂರ
ಕರ್ಮಿಗಳನವರ ಶಿವಭಕ್ತರೆನ್ನಬಹುದೆ? ಅರ್ಕೈಯ್ಯದೆ
ಅವರ ಮನೆಯಲುಂಡ ಭಕ್ತನು ಅಘೋರ ನರಕಕ್ಕಿ
ಳಿವ ಕಾಣಾ ರಾಮನಾಥಾ.

ಮಸಣ= ಸ್ಮಶಾನ; ಗೋರಿ ಗೊಳಿಸು= ಮನವೆಳಿಸು; ಎಳೆಯಲ್ಪಡು ಅರ್ಕೈಯ್ಯು= ಆಲೋಚಿಸು.

ಅನೇಕರು ಹೀನ ದೈವಗಳನ್ನು ಬೇಡಿಕೊಂಡು ಅವುಗಳಿಗೆ ಬಲಿ ಯನ್ನು ಕೊಡುತ್ತಾರೆ. ಇವರು ಕ್ರೂರ ಕರ್ಮಿಗಳು. ಶಿವಭಕ್ತರಲ್ಲ-ಇಂಥ ವರ ಮನೆಯಲ್ಲುಣ್ಣುವದು ಪಾತಕವೆಂದು ವಚನಕಾರನು ಅನ್ನುತ್ತಾನೆ.

೪೮. ಮಡದಿಯ ಪ್ರಾಣಕ್ಕೆ ಮೊಲೆಮುಡಿ ಇದ್ದಿತ್ತೆ?
ಒಡೆಯರ ಪ್ರಾಣಕ್ಕೆ ಇದ್ದಿತ್ತೆ ಯಜ್ಞೋಪವೀತ? ಕಡೆ
ಯಲ್ಲಿದ್ದ ಅಂತ್ಯಜನು ಹಿಡಿದಿದ್ದರೆ ಪ್ರಾಣದಲ್ಲಿ? ಹಿಡಿ
ಗೋಲ? ನೀ ತೊಡಕಿಕ್ಕಿದ ತೊಡಕನೀ ಲೋಕದ ಜಡ
ರೆತ್ತ ಬಲ್ಲರೈ ರಾಮನಾಥಾ?

ಹಿಡಿಗೋಲ=ಒಂದುತರದ ಆಯುಧ



ಭಕ್ತರಲ್ಲಿ ಜಾತಿಭೇದವನ್ನು ಎಣಿಸಕೂಡದೆಂದು ವಚನಕಾರನ ಅಭಿಪ್ರಾಯ. ಅದೇ ಮೇರೆಗೆ ಸ್ತ್ರೀ ಪುರುಷರಲ್ಲಿಯೂ ಭೇದ ವಿಡಕೂ ಡದು. ಸ್ತ್ರೀಯರಿಗೆ ಮೊಲೆ ಮುಡಿಗಳಿದ್ದದರಿಂದ ಅವರಿಗೆ ಸ್ತ್ರೀಯರೆಂದೆ ನ್ನುವದುಂಟು. ಆದರೆ ಮೊಲೆ ಮುಡಿಗಳು ಕೇವಲ ಅವರ ದೇಹಕ್ಕೆ ಮಾತ್ರ ಇರುತ್ತವೇ ಹೊರ್ತು ಅವರ ಪ್ರಾಣಕ್ಕೆ ಇರುವದಿಲ್ಲ. ಆದ್ದ ರಿಂದ ಸ್ತ್ರೀಪುರುಷರಲ್ಲಿ ಭೇದವಿರಲಾರದು. ಅವರು ಸಮಾನರು. ಅದೇ ಮೇರೆಗೆ ಬ್ರಾಹ್ಮಣನು ಧರಿಸುವ ಯಜ್ಞೋಪವೀತವೂ, ಅಂತ್ಯಜನು ಉಪ ಯೋಗಿಸುವ ಕೊಯ್ತವೂ ಅವರ ಪ್ರಾಣಗಳಲ್ಲಿ ಇರುವದಿಲ್ಲ. ಅವು ಕೇವಲ ಅವರ ಬಾಹ್ಯಾಂಗದಲ್ಲಿ ಇವೆ. ಆದ್ದರಿಂದ ಇವರಲ್ಲಿ ಉಚ್ಚ ನೀಚ ಭಾವವನ್ನು ಎಣಿಸಕೂಡದು. ಎಲ್ಲಿಯ ವರೆಗೆ ಅವರ ಪ್ರಾಣವು ಶುದ್ಧತೆಯಿಂದ ಇರುತ್ತದೋ ಅಲ್ಲಿಯ ವರೆಗೆ ಅವರೆಲ್ಲರೂ ಶ್ರೇಷ್ಠ ಕುಲ ದವರು, ಸಮಾನಸ್ಕಂದರು ಎಂದು ವಚನಕಾರನ ಅಭಿಪ್ರಾಯವು. ಲೋಕ ದಲ್ಲಿ ನಾನಾವಿಧ ಭೇದಾ ಭೇದಗಳು ಉಂಟು. ಆದರೆ ಅವುಗಳ ತತ್ವ ವನ್ನು ತಿಳಿಯದೆ ಜನಗಳು ಹೋರಾಡುತ್ತಾರೆ. ಇದಕ್ಕೆ ನಾನು ಬೆರ ಗಾದೆನೆಂದು ದೇವರ ದಾಸಿಮಯ್ಯನು ಅನ್ನುತ್ತಾನೆ.

೪೯. ನಂಬಿದಾ ಚನ್ನನ ಅಂಬಲಿಯನುಂಡ.
ಕೆಂಭಾವಿಯ ಭೋಗಯ್ಯನ ಹಿಂದಾಡಿ ಹೋದ.
ಕುಂಭದ ಗತಿಗೆ ಕುಕಿಲಿರಿದು ಕುಣಿದ. ನಂಬದೆ ಕರೆ
ದವರ ಹಂಬಲವನೊಲ್ಲ ನಮ್ಮ ರಾಮನಾಥಾ

ಕುಕಿಲಿರಿದು=ಧ್ವನಿಮಾಡುತ್ತ

ಭಕ್ತರಲ್ಲಿ ಜಾತಿಭೇದವಿಲ್ಲ ಇದಕ್ಕೆ ಪರಮಾತ್ಮನು ನಡೆದ ವರ್ತ ನೆಯೇ ಸಾಕ್ಷಿ. ಅವನು ತನ್ನನ್ನು ನಂಬಿದಂಥ ಮಾದರ ಮತ್ತು ಹೊಲೆ ಯರೊಡನೆ ಸಹ ಸಂಬಂಧವಿಟ್ಟ. ಯಾಕಂದರೆ ಅವರು ಕೇವಲ ಭಕ್ತರಾ ಗಿದ್ದರು. ಆದ್ದರಿಂದ ಭಕ್ತರಲ್ಲಿ ಯಾವ ತರದ ಭೇದಭಾವ ವಿಡಬಾರ ದೆಂದು ವಚನಕಾರನ ಅಭಿಪ್ರಾಯವು.

೫೦. ಕಳದೊಳಗಣ ಕಳವೆಯ ನೊಕ್ಕವಲೊಳ್ಳದೆ(?)
ಶಿವಲಿಂಗ ಮುಕ್ಕಣ್ಣ, ನೀನೊಲಿದ ಸದ್ಭಕ್ತನ ಅಕು

**ಲಜನೆಂದಡೆ, ಅಕ್ಷಯನರಕದಲ್ಲಿಕ್ಕುವ ಕಾಣಾ ರಾಮ**
**ನಾಥಾ**

ಈ ವಚನದಲ್ಲಾದರೂ ಭಕ್ತರಲ್ಲಿ ಜಾತಿಭೇದವನ್ನು ಎಣಿಸಕೂಡ ದೆಂದು ಹೇಳಿದೆ. ಅವರೆಲ್ಲರೂ ಶ್ರೇಷ್ಠಕುಲದವರೆಂತಲೇ ಭಾವಿಸತಕ್ಕದ್ದು. (ಆರಂಭದ ವಾಕ್ಯವು ಅಸ್ಪಷ್ಟಾರ್ಥವುಳ್ಳದಾಗಿದೆ.)

೯೧. **ಅಚ್ಚಶಿವೈಕ್ಯಂಗೆಹೊತ್ತಾರೆ ಅಮಾವಾಸ್ಯೆ ಮಟ್ಟೆ**
**ಮಧ್ಯಾನ್ಹ ಸಂಕ್ರಾಂತಿ ಮತ್ತೆ ಅಸ್ತಮಾನ ಪೌರ್ಣಿಮೆ**
**ಎಂಬುವಿಲ್ಲ. ಭಕ್ತನ ಮನೆಯಂಗಣವೇ ವಾರಣಾಸಿ**
**ಕಾಣಾ ರಾಮನಾಥಾ.**

ಶಿವನಲ್ಲಿ ಸಾಮರಸ್ಯ ಭಾವವುಳ್ಳವನಾಗಿ ಆಚರಿಸುವಂಥ ಭಕ್ತನು ಜ್ಯೋತಿಷ್ಯವನ್ನು ನೋಡಿಕೊಂಡು ಗ್ರಹಾದಿಗಳಲ್ಲಿ ವಿಶ್ವಾಸವನ್ನಿಟ್ಟು ನಡೆಯಕೂಡದು. ಅವನ ಮನೆಯ ಅಂಗಣವು ವಾರಣಾಸೀ ಕ್ಷೇತ್ರವು. ಆದ್ದರಿಂದ ಭಕ್ತನು ಇದು ಅಮವಾಸ್ಯೆ, ಹುಣ್ಣಿಮೆ, ಮಧ್ಯಾನ್ಹ, ಸಂಕ್ರಾಂತಿ ಸಾಯಂಕಾಲ ಎಂಬುದಾಗಿ ನಾನಾ ವಿಕಲ್ಪಕ್ಕೆ ಒಳಗಾಗಿ ವರ್ತಿಸ ಕೂಡದು. ಹೀಗೆ ಮಾಡಿದರೆ ಅವನು ಲಿಂಗವಿರಹಿತನಾಗಿ ವರ್ತಿಸಿದಂ ತೆಯೇ ಸರಿ ಎಂದು ವಚನಕಾರನ ಭಾವವು.

---



## ಪ್ರಸಾದಿಸ್ಥಲ.

ಈ ಸ್ಥಲದಲ್ಲಿ ಭಕ್ತನು ಲಿಂಗಾರ್ಪಣಭಾವದಿಂದ ತನ್ನ ಕ್ರಿಯೆಗ ಳನ್ನು ಆಚರಿಸಬೇಕು. ಇಂಥವನೇ ಪ್ರಸಾದಿ ಎನಿಸಿಕೊಳ್ಳುವನು. ಇವನ ಆಚರಣೆಗಳೆಲ್ಲ ಪರಿಶುದ್ಧವಾದವುಗಳಾಗಿರತಕ್ಕದ್ದು. ಇವನೇ ಸರ್ವಾಂಗ ಲಿಂಗಿ ಎನಿಸಿಕೊಳ್ಳುವನು. ಹೀಗೆ ವರ್ತಿಸುವ ಭಕ್ತನು ಯಾವಾಗಲೂ ಕ್ರೋಧರಹಿತನಾಗಿ ಭೃತ್ಯಭಾವದಿಂದಿರತಕ್ಕದ್ದು. ಇವನು ಪರಿಶುದ್ಧರಾ ದವರೊಡನೆ ಮಾತ್ರ ಸ್ನೇಹ ಬೆಳಸಬೇಕೇ ಹೊರತು ವಿಷಯಗಳಲ್ಲಿ ಲೋಲುಪರಾದವರೊಡನೆ ಸಂಬಂಧಹಿಡಬಾರದು. ಇವುಗಳೇ ಪ್ರಸಾದಿಯ ಮುಖ್ಯ ಲಕ್ಷಣಗಳಾಗಿವೆ.

೯೨. **ಮಹಾಘನವಪ್ಪ ಬೋನವನು ಒಂದನುವಿನ**
**ಪರಿಯಾಣದಲ್ಲಿ ಹಿಡಿದು, ಗುರುಲಿಂಗವು ಒಳಗಾದ**
**ಲಿಂಗವಾರೊಗಣೆಯ ಮಾಡಿ, ಮಿಕ್ಕುದು ಪ್ರಸಾದವೆ?**
**ಅಲ್ಲಲ್ಲ. ಮಹಾಘನವಪ್ಪ ಲಿಂಗವನೊಂದನುವಿನಲ್ಲಿ**
**ತಂದಿರಿಸಿದಾತನ ಮನವೇ ಪ್ರಸಾದ ಕಾಣಾ ರಾಮನಾಥಾ**

ಪರಿಯಾಣ=ಪಾತ್ರೆ, ಆರೋಗಣೆ=ಊಟ

ಇಲ್ಲಿ ದೇವರ ದಾಸಿಮಯ್ಯನು ಪ್ರಸಾದವೇನೆಂಬದನ್ನು ವಿವರಿಸಿ ದ್ದಾನೆ. ಸಾಮಾನ್ಯವಾಗಿ ಜನರು ಊಟದ ಪದಾರ್ಥಗಳನ್ನು ದೇವರ ಮೂರ್ತಿಗೆ ತೋರಿಸಿ, ಅವುಗಳು ಪ್ರಸಾದನೆಂದು ಬಹು ಭಕ್ತಿಯಿಂದ ಉಣ್ಣುವದುಂಟು. ಇದು ಪ್ರಸಾದವಲ್ಲ. ಯಾಕಂದರೆ ಅರ್ಪಣಭಾವದಿಂದ ಅರ್ಪಿಸಿ ಭೋಗಿಸುವಂಥಾದ್ದು ಮನಸ್ಸಾಗಿದ್ದು ಆ ಮನಸ್ಸನ್ನೇ ಪರಮಾ ತ್ಮನಿಗೆ ಅರ್ಪಿಸಿ ಆಪ್ರಕಾರ ಅದು ಆಚರಿಸಿದ್ದಾದರೆ ಆ ಮನಸ್ಸೇ ಪ್ರಸಾ ದವೆನಿಸಿಕೊಳ್ಳುವದೆಂದು ವಚನಕಾರನು ಇಲ್ಲಿ ಹೇಳಿದ್ದಾನೆ. ಈ ತರದ ಪ್ರಸಾದವನ್ನೇ ಭಕ್ತನು ಸೇವಿಸತಕ್ಕದ್ದು. ಇದರ ಅನುವನ್ನು ಅವನು ತಿಳಿಯತಕ್ಕದ್ದು. ಹೀಗೆ ಮಾಡದೆ ಬರೇ ಸುಗ್ರಾಸ ಭೋಜನವನ್ನು ಒಂದು ಪಾತ್ರೆಯಲ್ಲಿ ತಂದಿಟ್ಟು ಇದು ಗುರುವಿಗೆ, ಇದು ಇಷ್ಟ ಲಿಂಗಕ್ಕೆ ಇದು ಪ್ರಾಣ ಲಿಂಗಕ್ಕೆ ಎಂದು ಹೇಳಿ ಅವುಗಳಿಗೆ ತೋರಿಸಿ ಅದನ್ನು ಊಟಮಾಡಿದರೆ ಅದು ಪ್ರಸಾದವೆನಿಸಿಕೊಳ್ಳಲಾರದು.

೯೩. ಒಕ್ಕುದು ಪ್ರಸಾದವಲ್ಲ. ಮಿಕ್ಕುದು ಪ್ರಸಾದವಲ್ಲ. ಹತ್ತೆಕರೆದಿಕ್ಕುವದು ಪ್ರಸಾದವಲ್ಲ. ತರ್ಕೈಸಿ ನಿಮ್ಮವನಪ್ಪಿಕೊಂಡಡೆ, ನಿಶ್ಚಯ ಪ್ರಸಾದ ಕಾಣಾ ರಾಮನಾಥಾ.

ಒಕ್ಕು = ಬಿಡು ಹೊರಚೆಲ್ಲು,

ಪ್ರಸಾದದ ಅರ್ಥವನ್ನು ಬೇರೊಂದು ರೀತಿಯಲ್ಲಿ ಇಲ್ಲಿ ವಚನಕಾರನು ಹೇಳಿದ್ದಾನೆ. ಪರಮಾತ್ಮನಲ್ಲಿ ಸ್ನೇಹವಿಟ್ಟು ಅವನನ್ನೊಡಗೊಂಡರೆ ಅದೇ ನಿಶ್ಚಯವಾಗಿ ಪ್ರಸಾದವೆಂದು ವಚನಕಾರನ ಅಭಿಪ್ರಾಯವು ಪರಮಾತ್ಮನಿಗೆ ತೋರಿಸಿದ ಊಟದ ಪದಾರ್ಥಗಳು ಅಥವಾ ಜಂಗಮನು ಉಂಡುಳಿದದ್ದು ಅಥವಾ ಅವನನ್ನು ಕರೆದು ಉಣ್ಣಿಸಿದ್ದು, ಪ್ರಸಾದವೆಂದು ಜನರು ಅನ್ನುವದುಂಟು. ಆದರೆ ಇವೆಲ್ಲ ಬಾಹ್ಯಾಚಾರಗಳು. ನಿಜವಾದ ಪ್ರಸಾದವು ಭಕ್ತನ ಭಾವದಲ್ಲಿಯೇ ಇರುತ್ತದೆಂದು ವಚನಕಾರನ ಅಭಿಪ್ರಾಯವು.

೯೪. ಕಣ್ಣು ಮಿಸಲು, ಶಿವನ ಕೈ ಮಿಸಲು, ಶಿವನ ಕಾಲು ಮಿಸಲು, ಶಿವನ ನಾಲಿಗೆ ಮಿಸಲು, ಶಿವನ ಕಿವಿ ಮಿಸಲು, ಶಿವನ ನಾಸಿಕ ಮಿಸಲು, ಶಿವನ ತನು ಮಿಸಲು, ಮನವೆಲ್ಲ ಮಿಸಲು, ಶಿವನ ಈ ಮಿಸಲು ಬೀಸರವೋಗದಂತಿದ್ದರೆ ಆತನೆ ಜಗದೀಶ ಕಾಣಾ ರಾಮನಾಥಾ

ಬೀಸರವೋಗು = ನಾಶವಾಗು; ಮಿಸಲು = ಶುದ್ಧ

ನೈವೇದ್ಯವು ಅಂದರೆ ಪರಮಾತ್ಮನಿಗೆ ಅರ್ಪಿಸತಕ್ಕ ಪದಾರ್ಥವು ಮಿಸಲವಾಗಿರಬೇಕೆಂದು ಜನರು ಅನ್ನುವದುಂಟು. ಆದರೆ ಮಿಸಲಾಗಿರತಕ್ಕ ಪದಾರ್ಥಗಳಾವುವೆಂದರೆ ಮನುಷ್ಯನ ಇಂದ್ರಿಯಗಳೇ ಸರಿ. ಅವು ಶುದ್ಧವಾಗಿರತಕ್ಕದ್ದೆಂದು ವಚನಕಾರನ ಭಾವವು. ಯಾಕಂದರೆ ಭಕ್ತನ ಅವಯವಗಳಲ್ಲಿ ಪರಮಾತ್ಮನು ನಾನಾ ಬಗೆಯ ಲಿಂಗರೂಪಗಳಿಂದ ವ್ಯವಹರಿಸುತ್ತಾನೆ. ಒಂದು ವೇಳೆ ಇವುಗಳ ಆಚರಣೆಗಳ ಶುದ್ಧವಾಗಿರದಿದ್ದರೆ ಅಲ್ಲಿ ಪರಮಾತ್ಮನು ವ್ಯಾಪಿಸುವ ಬಗೆ ಹೇಗೆ? ಆದ್ದರಿಂದ ಇಂದ್ರಿಯ ವಿಷಯಗಳಿಗೆ ಒಳಗಾಗದೆ ವರ್ತಿಸುವಂಥ ಸ್ಥಿತಿಯೇ ನಿಜವಾದ ಮಿಸಲು ಪದಾರ್ಥವು. ಹೀಗೆ ಯಾವನು ಆತ್ಮಾರ್ಪಣ ಭಾವದಿಂದ ಆಚರಿಸುತ್ತಾನೋ ಅವನು ಪರಮಾತ್ಮ ಸ್ವರೂಪನು ಎಂದು ವಚನಕಾರನು ಇಲ್ಲಿ ಹೇಳಿದ್ದಾನೆ.



೯೫. ದೇಹಗೊಂಡು ಹುಟ್ಟಿದವರು ಒಪ್ಪಚ್ಚಿ ದೇಹಾರವ ಮಾಡುವಿರಯ್ಯಾ! ದೇಹಾರವ ಮಾಡಿ ಲಿಂಗಾರ್ಪಿತವ ಮಾಡದೆ ಆಹಾರವ ಕೊಂಡರೆ, ಕೋಳಿ ಹುಳುವನಾಯ್ದು ತಿಂದಂತೆ ಕಾಣಾ ರಾಮನಾಥಾ?

ದೇಹಾರ= ಕೆಟ್ಟಗತಿ; ಒಪ್ಪಚ್ಚಿ= ಸ್ವಲ್ಪ, ತುಸು.

ಪ್ರಸಾದವನ್ನಪೇಕ್ಷಿಸುವವರು ದೇಹದ ಗುಣಗಳಿಗೆ ಒಳಗಾದರೆ ದುರ್ಗತಿಗಿಳಿಯುತ್ತಾರೆ. ಇವರು ಪ್ರಸಾದಿಗಳಲ್ಲ. ಇವರು ದುರ್ವ್ಯಾಪಾರಗಳಲ್ಲಿ ಮಗ್ನರಾಗಿರುವರು. ಮತ್ತು ಲಿಂಗಾರ್ಪಣ ಭಾವವಿಲ್ಲದೆ, ಜಗತ್ತಿನ ಅನುಭವಗಳನ್ನು ಅನುಭೋಗಿಸುತ್ತಿರುವರು. ಇಂಥವರು ಕೋಳಿಯು ಹುಳುಗಳನ್ನು ಆರಿಸಿಕೊಂಡು ತಿನ್ನುವಂತೆಯೇ ಸರಿ.

೯೬. ಬೆಕ್ಕು ನಾಯಿ, ಶಿವಭಕ್ತರು ಒಕ್ಕು ಮಿಕ್ಕುದ ಕೊಂಡರೆ ಸದಾಚಾರಿಯಾಗಬಲ್ಲನೆ? ಭೃತ್ಯಾಚಾರಿಯಾಗಬಲ್ಲನೆ? ಜಂಗಮ ಲಿಂಗದಲ್ಲಿ ನಂಬುಗೆ ಯಿಲ್ಲದವನು ಕೊಂಡ ಪ್ರಸಾದ ಬೆಕ್ಕು ನಾಯಿ ತಿಂದಂತೆ ಕಾಣಾ ರಾಮನಾಥಾ?

ಪ್ರಸಾದಿಯಾದವನು ಬೆಕ್ಕು ನಾಯಿಗಳಂತೆ ಕ್ರೂರತನದಿಂದ ವರ್ತಿಸಬಾರದು. ಎಲ್ಲರಕೂಡ ದೈನ್ಯ ಭಾವದಿಂದಲೇ ಇರತಕ್ಕದ್ದು. ಮತ್ತು ಜ್ಞಾನಿಗಳ ಕೂಡ ಭಕ್ತಿ ಭಾವದಿಂದ ವರ್ತಿಸತಕ್ಕದ್ದು. ಹೀಗೆ ವರ್ತಿಸುವವನೇ ಪ್ರಸಾದಕ್ಕೆ ಯೋಗ್ಯನಾಗಿರುವನು.

೯೭. ಭವಿಯ ಮನೆಯ ಅನ್ನ ಸವಿಯಾಯಿತ್ತೆಂದು ಉಂಡ ಭಕ್ತಂಗೆ ಅಘೋರ ನರಕ ತಪ್ಪದು

ಆಗಳಂತೆ ಆ ಭವಿಗೆ ಮಾಡಿದ ಹುಳುಗೊಂಡವು ಆ ಭಕ್ತಂಗಪ್ಪುದು ತಪ್ಪದು. ಆ ಭವಿಗೆ ಭವಂ ನಾಸ್ತಿಯಹುದು ತಪ್ಪದು ಕಾಣಾ ರಾಮನಾಥಾ.

ಪ್ರಸಾದಿಯು ಭವಿಯೊಡನೆ ಉಣ್ಣಬಾರದು. ಉಂಡರೆ ಅವನಿಗೆ ಅಘೋರ ನರಕವು ಪ್ರಾಪ್ತವಾಗುತ್ತದೆ. ಮತ್ತು ಭವಿಗೆ ಆಗುವ ನರಕದ ಯಾತನೆಗಳು ಇವನಿಗೂ ಉಂಟಾಗುತ್ತವೆ. ಈ ಭಕ್ತನು ಭಕ್ತನಾಗಿರದೆ ಭವಿಯೇ ಆಗಿದ್ದು ಭವದಲ್ಲಿಯ ಕ್ಲೇಶಗಳು ಅವನನ್ನು ಪೀಡಿಸುತ್ತಲಿರುವವು.

೯೮ ಶಿವಭಕ್ತನು ಹೋಗಿ ತನ್ನೊಡಲಿಚ್ಛೆಗೆ ಭವಿಯ ಮನೆಯಲ್ಲಿ ಉಂಡನಾದಡೆ ಮಡಕೆಯ ಕೂಳತಿಂದ ತುಡುಗುಣಿನಾಯಂತೆ ಆ ಭಕ್ತನ್ಪುಡನೇ ನೀನಿಲ್ಲದ ಮನೆಯ ಕೂಳು ಹೊಲೆಯರ ಮನೆಯ ಅಡಗಿನಿಂದ ಕರಕಷ್ಟ ಕಾಣಾ ರಾಮನಾಥಾ.

ಅಡಗು=ಮಾಂಸ

ವಚನಕಾರರು ಭವಿಗಳೊಡನೆ ಭೋಜನವು ತ್ಯಾಜ್ಯವೆಂದು ಯಾವಾಗಲೂ ಬಹಳ ನಿರಾಕರಿಸುವದುಂಟು. ಈ ಭಾವವೇ ಈ ವಚನದಲ್ಲಿ ಹೇಳಲ್ಪಟ್ಟಿದೆ.

೯೯. ಕಂಡು ಭಸಿತವ ಹೂಸಿ ಮಂಡಿಯಲ್ಲಿ ಲಿಂಗವ ಧರಿಸಿ ಮಂತ್ರಮೂರ್ತಿಯ ಮನವಾರೆ ಪೂಜಿಸಿ ಭಕ್ತವೇಷವ ಹೊತ್ತು ಭಕ್ತನೆನಿಸಿದ ಬಳಿಕ ಭವಿಯ ಮನೆಯನ್ನವ ಅಮೇಧ್ಯವೆಂದೇ ಕಾಣಬೇಕು. ಹೀಗಲ್ಲದೆ ಒಡಲಿಚ್ಛೆಗೆ ತುಡುಗುಣಿನಾಯಂತೆ ಒಡಲ ಹೊರೆವವರ ಮೆಚ್ಚ ನಮ್ಮ ರಾಮನಾಥಾ.

ಅಮೇಧ್ಯ=ಅಶುದ್ಧ ವಸ್ತು, ಮಲ.

ಭಕ್ತರು ಭವಿಯನ್ನವನ್ನು ಸೇವಿಸಬಾರದೆಂಬ ಅರ್ಥವು ಇಲ್ಲಿದೆ.



೧೦೦. ಹಸಿವಿನಲ್ಲಿ ವಿಷಯದಲ್ಲಿ ಭವಿಯ ಬೆರಸಿದನಾದರೆ, ಅವ ವಿಷಮಾಕ್ಷ ನಿಮಗೆ ದೂರ. ದಶ ಶತ ಕೋಟಿ ವರುಷ ನರಕದೊಳಗಿಕ್ಕುವ ಕಾಣಾ ರಾಮನಾಥಾ.

ವಿಷಮಾಕ್ಷ=ಈಶ್ವರ

ಅರ್ಥವು ಸ್ಪಷ್ಟವದೆ.

೧೦೧. ಹಂದಿ ಶ್ರೀಗಂಧವನೆಂದೂ ಒಲ್ಲದು. ಕುಂದದೆ ಹರಿವುದು ಅಮೇಧ್ಯಕ್ಕೆ. ಶಿವಭಕ್ತನಾಗಿದ್ದು ಹಂದ ಬೆರಸಿದರೆ ಆ ಹಂದಿಗಿಂದಲು ಕರಕಷ್ಟ ಕಾಣಾ ರಾಮನಾಥಾ.

ಅನೇಕರು ಭಕ್ತರಾದ ಬಳಿಕ, ತಮ್ಮ ಮೊದಲಿನ ಆಪ್ತರೊಡನೆ ಬಳಿಕೆ ಭೋಜನಗಳನ್ನು ಮಾಡುವದುಂಟು. ಇವರು ಹಂದಿಗಿಂತಲೂ ಕಡೆ ಎಂದು ವಚನಕಾರನು ಇಲ್ಲಿ ಹೇಳಿದ್ದಾನೆ. ಆವರು ಭಕ್ತರಲ್ಲ. ಆವರು ಭವಿಗಳಂತಲೇ ಅವನ ಅಭಿಪ್ರಾಯವು.

೧೦೨. ಒಡಲಿಚ್ಛೆಗೆ ಭವಿಯನೊಡಗೂಡಿಕೊಂಡುಂಡು ಹಡಿಕೆಯ ತಿಂದ ನಾಯಿ ಮುದುಡಿಬೊಗಳುವಂತೆ ಮೃಡ ನೀನೊಲ್ಲದವನ ಮನೆಯ ಕೂಳು ಹೊಲೆಯರ ಮನೆಯ ಅಡಗಿಂದ ಕರಕಷ್ಟ ಕಾಣಾ ರಾಮನಾಥಾ.

ಹಡಿಕೆ = ಹೊಲಸು

ಹಿಂದಿನ ವಚನಗಳ ಅರ್ಥವೇ ಇದರಲ್ಲಿ ಹೇಳಿದೆ.

೧೦೩. ಅನ್ಯಜಾತಿಯ ಮನೆಯನ್ನಪಾನಾದಿಗಳತನ್ನುದರದಲ್ಲಿ ಇಕ್ಕುವ ಶಿವದ್ರೋಹಿ ಶಿವ ವಂಚಕನು. ಅವ ನಿಮ್ಮ "ಓ" ಎನಿಸಿದರೆ "ಓ" ಎನ್ನದಿರಿ. ಅವನ ಎನ್ನತ್ತ ತೋರದಿರಾ ರಾಮನಾಥಾ.

ಅರ್ಥವು ಸ್ಪಷ್ಟವದೆ.

೧೦೪. ಭವಿಯು ಕಳೆದು ಭಕ್ತನಾದ ಬಳಿಕ ಭವಿಯು ನಂಟನೆಂದು ಹೊಗಲಾಗದು ನಂಟತನಕ್ಕೆ. ಆತ್ಮನಿಚ್ಛೆಗೆ ಅಳುಪಿ ಭವಿಯೊಡನುಂಡಡೆ ಹಂದಿಯು ಬಾಯ್ತುತ್ತ ನಾಯಿ ಸೆಳತಿಂದಂತೆ ಕಾಣಾ ರಾಮನಾಥಾ?

ಹಿಂದೆ ೧೦೧ನೇ ವಚನದ ಅರ್ಥವೇ ಇಲ್ಲಿ ಹೇಳಲ್ಪಟ್ಟಿದೆ.

೧೦೫. ಅಂಬಿಲೇ ಅಳತೆ, ತುಂಬೆಯೋ (?) ನೋಲೋಗರವಾಗಿ, ಉಂಬ ಸದ್ಭಕ್ತನ ಮನೆಯಾಗಿ ಲೋಕದ ಡಂಭಕರ ಮನೆಬೇಡ ರಾಮನಾಥಾ

ವಚನಕಾರರು ವಿಷಯವಾಸನೆಯುಳ್ಳವರ ನೆರೆಯನ್ನು ಎಂದೂ ಅವಲಂಬಿಸಕೂಡದೆಂದು ಯಾವಾಗಲೂ ಒತ್ತಿ ಹೇಳುವದುಂಟು. ದೇವರ ದಾಸಿಮಯ್ಯನು ಇಲ್ಲಿ ಅನ್ನುವದೇನಂದರೆ ಬಡವರ ಮನೆಯ ಅಂಬಿಲಿಯನ್ನು ಸೇವಿಸಿಕೊಂಡಿರುವದು ಲೇಸಾದದ್ದು. ಆದರೆ ಲೋಕದಲ್ಲಿ ಡಾಂಬಿಕರಾದವರ ಮನೆಯನ್ನು ಮಾತ್ರ ಎಂದೂ ಆಶ್ರಯಿಸಕೂಡದು.



## ಪ್ರಾಣಲಿಂಗಿ ಸ್ಥಲ.

ಈ ಸ್ಥಲದಲ್ಲಿ ಪರಮಾತ್ಮನ ಕಳೆಯು ದೇಹ ಮತ್ತು ಪ್ರಾಣಗಳಲ್ಲಿ ತುಂಬಿಕೊಂಡು ಚಲಿಸಹತ್ತುತ್ತದೆ. ಮನುಷ್ಯನು ಈ ಸ್ಥಿತಿಯಲ್ಲಿ ಲಿಂಗದ ಶಕ್ತಿಯೇ ತನ್ನ ಶಕ್ತಿಯಾಗಿ ವ್ಯವಹರಿಸುತ್ತಾನೆ. ಇದೇ ಪ್ರಾಣಲಿಂಗಿಸ್ಥಲವು. ಇಲ್ಲಿ ಭಕ್ತನು ತನ್ನ ಚಂಚಲವಾದ ಮನಸ್ಸನ್ನು ತನ್ನ ಅಧೀನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಇದರ ಸಾಧನದಿಂದಲೇ ಪ್ರಾಣಲಿಂಗಿಯ ಸ್ಥಿತಿಯು ದೃಢವಾಗುತ್ತದೆ. ಈ ವಿಷಯವು ಇದರಲ್ಲಿ ಹೇಳಲ್ಪಟ್ಟಿದೆ.

೧೦೬. ಪ್ರಾಣನ ಕಳೆ ಪ್ರಕೃತಿಯಲ್ಲಿ ಅಡಗಿ ಪ್ರಕೃತಿಯ ಕಳೆ ಪ್ರಾಣನಲ್ಲಿ ಅಡಗಿ ಪ್ರಾಣನ ಕಳೆಯು ಪ್ರಕೃತಿಯ ಕಳೆಯು ಲಿಂಗನೆಂದರಿದು ಅಂಗೈಸಿ ಅನುಭವಿಸಬಲ್ಲವರ ಲೆಂಕ ನಾನಾಗಿಪ್ಪೆನಯ್ಯ ರಾಮನಾಥಾ

ಅಂಗೈಸು=ಕೂಡು, ಸಂಬಂಧಿಸಿಕೊಳ್ಳು; ಲೆಂಕ=ಸೇವಕ

ಜಗತ್ತಿನಲ್ಲಿರುವ ಎಲ್ಲ ಪದಾರ್ಥಗಳಲ್ಲಿ ಅವುಗಳಿಗೆ ಚೈತನ್ಯವಾಗಿರುವದೊಂದು ವಸ್ತುವೂ, ಆ ಚೈತನ್ಯಕ್ಕೆ ಆಶ್ರಯಸ್ಥಾನವಾಗಿರುವದೊಂದು ವಸ್ತುವೂ ಹೀಗೆ ಎರಡು ವಸ್ತುಗಳಿರುವವು. ವಚನಕಾರನು ಇಲ್ಲಿ ಮೊದಲಿನದನ್ನು ಪ್ರಾಣವೆಂತಲೂ ಎರಡನೆಯದನ್ನು ಪ್ರಕೃತಿಎಂತಲೂ ಕರೆದಿದ್ದಾನೆ. ಇವೆರಡೂ ಒಂದಕ್ಕೊಂದು ಸಹಕಾರವಾಗಿ ವರ್ತಿಸುತ್ತಿದ್ದಲ್ಲಿ ಮನುಷ್ಯನು ಜಗತ್ತಿನಲ್ಲಿ ಸರಿಯಾಗಿ ಕಾರ್ಯಗಳನ್ನು ಮಾಡಲು ಶಕ್ತನಾಗುತ್ತಾನೆ. ಹೀಗಾದಲ್ಲಿ ಇವೆರಡರ ಕಳೆಗಳು ಪರಸ್ಪರ ಕೂಡಿದಂತಾಗುತ್ತವೆ. ಆದರೆ ಇವೆರಡೂ ಕಳೆಗಳು ಪರಮಾತ್ಮ ಚೈತನ್ಯವೆಂದರಿದು ಆ ಚೈತನ್ಯದೊಡನೆ ಬೆರೆದು ಜಗತ್ತಿನಲ್ಲಿ ವ್ಯವಹರಿಸಿದಲ್ಲಿ ಅವನೇ ಪ್ರಾಣಲಿಂಗಿ ಎನಿಸಿಕೊಳ್ಳುವನು. ಅಂಥ ಪ್ರಾಣಲಿಂಗಿಯ ಕೇವಲ ದಾಸನಾಗಿ ವರ್ತಿಸುತ್ತೇನೆಂದು ವಚನಕಾರನು ಇಲ್ಲಿ ಹೇಳಿದ್ದಾನೆ.

೧೦೭. ಆದಿಪ್ರಕೃತಿಯ ಮಕ್ಕಳಂದಿನವರು. ಜೀವಪ್ರಕೃತಿಯ ಮಕ್ಕಳಿಂದಿನವರು. ಆದಿಪ್ರಕೃತಿ ಜೀವ ಪ್ರಕೃ

**ತಿಯಭೇದವ ಬಲ್ಲವರ ಪಾದವೇಗತಿ ಎನಗೆ ರಾಮನಾಥಾ.**

ಕೆಲವರು ಆದಿ ಪ್ರಕೃತಿಯ ಗುಣಗಳನ್ನು ಅವಲಂಬಿಸಿ ಕಾರ್ಯ ಮಾಡುವದುಂಟು. ಕೆಲವರು ಜೀವನವ ಗುಣಗಳನ್ನು ಅವಲಂಬಿಸಿ, ಕಾರ್ಯ ಮಾಡುವದುಂಟು. ಆದರೆ ಇವೆರಡರ ಗುಣಗಳನ್ನು ಪರಸ್ಪರ ಸಹಕರಿಸತಕ್ಕದ್ದು. ಮತ್ತು ಅವುಗಳನ್ನು ಲಿಂಗಮುಖವಾಗಿ ಮಾಡತಕ್ಕದ್ದು. ಹೀಗೆ ಮಾಡುವಾತನೇ ಪ್ರಾಣಲಿಂಗಿಯೆನಿಸಿಕೊಳ್ಳುವನು. ಇಂಥ ಮಹಾನುಭಾವರೇ ನನ್ನನ್ನು ಇಹಲೋಕದ ಸಂಕಟಗಳಿಂದ ಪಾರು ಮಾಡುತ್ತಾರೆಂದು ದೇವರ ದಾಸಿಮ್ಮಯ್ಯನು ಇಲ್ಲಿ ಹೇಳಿದ್ದಾನೆ.

೧೦೮. **ಹೂವಿನೊಳಗಣ ಕಂಪ ಹೊರಸೂಸಿ ಸುಳಿವ ಅನಿಲನಂತೆ ಅಮೃತದೊಳಗಣ ರುಚಿಯು ನಾಲಿಗೆಯ ತುದಿಯಲ್ಲಿ ಅರಿವನ ಚೇತನದಂತೆ ನಿಲವಿಲ್ಲದ ರೂಪ ಕಳೆಯಲ್ಲಿವೇಧಿಸುವವನ ಪರಿ ರಾಮನಾಥಾ.**

ಕಂಪ = ಸುಗಂಧ; ಅನಿಲ = ಗಾಳಿ; ವೇಧಿಸು = ಸಂಬಂಧಿಸು.

ಲಿಂಗ ಭಾವವನ್ನು ತನ್ನಲ್ಲಿ ಹೇಗೆ ಒಡಗೂಡಿಸಬೇಕೆಂಬುದನ್ನು ಇಲ್ಲಿ ದೇವರ ದಾಸಿಮಯ್ಯನು ಹೇಳಿದ್ದಾನೆ. ಇದು ಶಬ್ದಗಳಿಂದ ಹೇಳುವದು ಅಶಕ್ಯವು. ಇದು ಅನುಭವದ ವಿಷಯವು. ಆದ್ದರಿಂದ ವಚನಕಾರನು ಈ ಬಗ್ಗೆ ಕೆಲವು ಉದಾಹರಣೆಗಳನ್ನು ಕೊಟ್ಟು ಇಲ್ಲಿ ಇದನ್ನು ವಿವರಿಸಿದ್ದಾನೆ. ಪ್ರತಿಯೊಬ್ಬನಲ್ಲಿ ಒಂದು ಕಳೆಯು ಅಂದರೆ ಶಕ್ತಿಯು ವ್ಯವಹರಿಸುತ್ತದೆ. ಈ ಶಕ್ತಿಯ ಸಹಾಯದಿಂದಲೇ ಅವನು ಕಾರ್ಯಗಳನ್ನು ಮಾಡುತ್ತಾನೆ. ಆ ಶಕ್ತಿಯಲ್ಲಿ ಲಿಂಗದ ಕಳೆಯನ್ನು ಒಡಗೂಡಿಸುವ ರೀತಿಯ ಬಗ್ಗೆ ವಚನಕಾರನು ಕೆಲವು ಉದಾಹರಣೆಗಳನ್ನು ಕೊಟ್ಟಿದ್ದಾನೆ. ಹ್ಯಾಗೆ ಗಾಳಿಯಲ್ಲಿ ಹೂವಿನ ಮಕರಂದವು ಸೂಸುತ್ತದೋ ಹ್ಯಾಗೆ ಅಮೃತದ ರುಚಿಯನ್ನು ನಾಲಿಗೆಯು ಅರಿಯುತ್ತದೋ ಹಾಗೆ ಪ್ರಾಣಲಿಂಗಿಯು ಲಿಂಗದ ಮಕರಂದವನ್ನೂ ರುಚಿಯನ್ನೂ, ತನ್ನ ಚೈತನ್ಯದಲ್ಲಿ ಒಡಗೂಡಿಸಬೇಕೆಂದು ವಚನಕಾರನು ಇಲ್ಲಿ ಹೇಳಿದ್ದಾನೆ.

೧೦೯. **ಒಳಗರಿದ ಭಕ್ತನೊಳಗಾದ ಲಿಂಗವು ಆ ಲಿಂಗದೊಳಗಾದ ಭಕ್ತನ ಹೊರಗಾದ ಲಿಂಗವನೊಳಗೆ**



**ತಂದಿರಿಸಿದಾ ಭಕ್ತನ ತನುವಿನ ಒಳಿಯುವ ನಿನ್ನೇನ ಹೇಳುವೆ ರಾಮನಾಥಾ?**

ಲಿಂಗದೊಳಗೆ ಬೆರೆಯುವವೆಂದರೆ, ಇದು ಭಕ್ತನಲ್ಲಿಯ ಜ್ಞಾನದ ಪ್ರಭಾವದ ಪರಿಣಾಮವು. ಈ ಜ್ಞಾನದ ಮೂಲಕ ಲಿಂಗವು ಭಕ್ತನ ಅಂತರಂಗದಲ್ಲಿ ದೃಢವಾಗುತ್ತದೆ. ಈ ಪ್ರಕಾರ ಲಿಂಗ ಭಾವವನ್ನು ಹೊಂದಿದವನ ಬಾಹ್ಯದಲ್ಲಿ ಲಿಂಗಪ್ರಭಾವವಾದರೂ ಹೊರಸೂಸ ಹತ್ತುತ್ತದೆ. ಈ ಪ್ರಕಾರದ ಬಾಹ್ಯ ಲಿಂಗಾಚಾರದಿಂದ ಅವನ ಅಂತರಂಗದ ಲಿಂಗವೂ ಹೆಚ್ಚೆಚ್ಚು ಪ್ರಜ್ವಲಿಸ ಹತ್ತುತ್ತದೆ. ಭಕ್ತನ ಈ ಅಂತರಂಗದ ಸ್ಥಿತಿಯನ್ನು ಶಬ್ದಗಳಿಂದ ವರ್ಣಿಸುವದು ಅಸಾಧ್ಯವೆಂದು ವಚನಕಾರನು ಹೇಳಿದ್ದಾನೆ.

೧೧೦. **ಮನಮುಟ್ಟಿ ನೆನವಲ್ಲಿ ತನು ನಿಮ್ಮದಾಯಿತ್ತು. ತನು ಮುಟ್ಟಿ ಅಪ್ಪಿ ಮನಮುಟ್ಟಿ ನೆರೆದು ವನಿತೆಯರ ಕೂಟಕ್ಕೆ, ತೆರಪಿಲ್ಲದಾಯಿತ್ತು. ಜನನ ಮರಣದ ಬಾಧೆ ಹರಿಯಿತ್ತು, ಈಶ್ವರಾ ನಿಮ್ಮ ಪಾದಸೇವೆಯಿಂದ ಕಾಣಾ ರಾಮನಾಥಾ.**

ಪ್ರಾಣಲಿಂಗಿಯು ಪರಮಾತ್ಮನನ್ನು ಮನಮುಟ್ಟಿ ನೆನೆಯತಕ್ಕದ್ದು. ಹೀಗೆ ಮಾಡುವದರಿಂದ ಪರಮಾತ್ಮಸ್ವರೂಪವೇ ತಾನಾಗುತ್ತಾನೆ. ಇದರಿಂದ ಅವನು ವಿಷಯಾಸಕ್ತಿಯಿಂದ ದೂರನಾಗಿ ಭವವನ್ನು ಹರಿಯುತ್ತಾನೆ.

೧೧೧. **ತನು ತನ್ನ ದೆಸೆಯ ಲೇಸು ದಿನ ವಿದ್ದಡೇನು? ಮನ ತನ್ನ ಹರಿದತ್ತ ಹರಿದ ಬಳಿಕ ಕೆನೆಇಲ್ಲದ ಮೊಸರ ಕಡೆದರೆ ಅಲ್ಲಿ ಒಂದು ಹನಿ ತುಪ್ಪವಿಲ್ಲ ಕಾಣಾ ರಾಮನಾಥಾ.**

ಪ್ರಾಣಲಿಂಗಿಯಾದಾತನು ತನ್ನ ಮನಸ್ಸನ್ನು ತನ್ನ ಅಧೀನದಲ್ಲಿಟ್ಟುಕೊಳ್ಳಬೇಕು. ಹೀಗೆ ಮಾಡದೆ ಅದರ ಅಧೀನದಲ್ಲಿ ತಾನಾದರೆ ತಾನು ಎಷ್ಟು ದಿವಸ ಬಾಳಿದರೇನು ಫಲ ? ಹ್ಯಾಗೆ ಕೆನೆಯನ್ನು ತೆಗೆದು ಹಾಕಿ ಮೊಸರನ್ನು ಕಡೆದರೆ ಬೆಣ್ಣೆಯು ಬರುವದಿಲ್ಲವೋ ಹಾಗೆ ಇಂಥವರ

ಬಾಳುವೆ ಎಂದು ವಚನಕಾರನು ಅಂದಿದ್ದಾನೆ. ಇಲ್ಲಿ ಏನೂ ಸಾರವಿಲ್ಲವೆಂದು ವಚನಕಾರನ ಭಾವವು.

**೧೧೨. ಒಡಲುಗೊಂಡವ ನಾನು ಪ್ರಾಣ ವಿಡಿದವ ನೀನು. ಎನ್ನೊಡಲ ಸಂಚುವ ನೀನೇ ಬಲ್ಲೆ. ನಿನ್ನ. ಪ್ರಾಣದ ಸಂಚುವ ನಾ ಬಲ್ಲೆ ಇದು ಕಾರಣ ಎನ್ನೊಡಲಲ್ಲಿ ನಿನ್ನೊಡಲು, ನಿನ್ನ ಪ್ರಾಣ ಎನ್ನಲ್ಲಡಗಿದ ಭೇದವ ನೀ ಬಲ್ಲೆ ನಾ ಬಲ್ಲೆನೈ ರಾಮನಾಥಾ?**

ಸಂಚ = ಮರ್ಮ

ಪ್ರಕೃತಿ ಮತ್ತು ಪ್ರಾಣ ಇವುಗಳನ್ನು ಸಹಕರಿಸಿದ ಪರಿಣಾಮವನ್ನು ವಚನಕಾರನು ಇಲ್ಲಿ ಹೇಳಿದ್ದಾನೆ. ಪ್ರಾಣಲಿಂಗಿಯ ಪ್ರಾಣದಲ್ಲಿ ಪರಮಾತ್ಮನ ಕಳೆಯು ಲೀನವಾಗಿರುತ್ತದೆ. ಮತ್ತು ಅವನ ಬಾಹ್ಯ ತನುವಿನಲ್ಲಿ ಶುದ್ಧಾಚಾರವುಳ್ಳಂಥ ತಾನು ಇರುತ್ತಾನೆ. ಇವೆರಡೂ ಪರಸ್ಪರ ಸಮವೇಧಿಸಿರುವ ಕಾರಣ ಪರಸ್ಪರರ ಗುಣಗಳನ್ನು ಪರಸ್ಪರರು ಅರಿಯಲು ಶಕ್ಯವಾಗುತ್ತದೆ. ಈ ಸ್ಥಿತಿಯುಂಟಾದಲ್ಲಿ ಪ್ರಾಣಲಿಂಗಿಯ ಒಡಲು ಲಿಂಗದ ಒಡಲಾಗುತ್ತದೆ. ಮತ್ತು ಲಿಂಗದ ಶಕ್ತಿಯು ತನ್ನ ಶಕ್ತಿಯಾಗುತ್ತದೆ. ಈ ರೀತಿಯು ಉಳಿದವರಿಗೆ ತಿಳಿಯದು. ಪ್ರಾಣಲಿಂಗಿಗಳೇ ಅರಿಯುವದು ಶಕ್ಯವೆಂದು ವಚನಕಾರನು ಇಲ್ಲಿ ಹೇಳಿದ್ದಾನೆ.

**೧೧೩. ಕುರಿಸ್ವಾಮಿ ನೀ ನಿಂದ ಹೆಜ್ಜೆಯಲ್ಲದೆ ನಾನೊಂದು ಹೆಜ್ಜೆಯನಿಡೆನೆಯ್ಯ. ಎನಗೊಂದು ಹೆಜ್ಜೆ ಇಲ್ಲ. ನಿನ್ನ ಹೆಜ್ಜೆ ಎನ್ನ ಹೆಜ್ಜೆ ಒಂದಾದ ಭೇದವ ಜಗದನ್ಯಾಯಿಗಳೆತ್ತ ಬಲ್ಲರೈ ರಾಮನಾಥಾ?**

ಪ್ರಾಣಲಿಂಗಿಯ ಆಚರಣೆಯು ಪರಮಾತ್ಮನಿಗನುಸರಿಸಿ ಇರುತ್ತದೆ. ಅವನಶಕ್ತಿಯೇ ತನ್ನ ಶಕ್ತಿಯು. ಪ್ರಾಣಲಿಂಗಿಯು ತನುಗುಣಗಳೆಂದರೆ ಲಿಂಗದ ಗುಣಗಳೇ ಸರಿ. ಈ ರೀತಿಯನ್ನು ಜಗದಲ್ಲಿಯ ಅನ್ಯಾಯಿಗಳು ಅರಿಯರೆಂಬ ಅರ್ಥವು ಇಲ್ಲಿ ಇದೆ.



**೧೪೪. ಒಡಲುಗೊಂಡೆನಾಗಿ ಮೃಡ ನಿಮಗೆ ಹಗೆಯಾದೆನೆಯ್ಯ. ಆನು ಒಡಲುಗೊಂಡಡೇನು, ಕಡಲೊಳಗಣ ಬೊಬ್ಬುಳಿಕೆ ಕಡಲೊಳಗೆ ಅಳಿವಂತೆ, ಎನ್ನೊಡಲಳಿದು ಹೋದರೇನು, ಪ್ರಾಣ ನಿಮ್ಮ ಎಡೆಯಲಡಗುವದಯ್ಯ ರಾಮನಾಥಾ?**

ಬೊಬ್ಬುಳಿಕೆ = ಗುಳ್ಳಿ; ಕಡಲು = ಸಮುದ್ರ.

ಹಿಂದೆ ೧೧೨, ೧೧೩ನೇ ವಚನಗಳಲ್ಲಿ ವಿವರಿಸಿದ ಪ್ರಾಣಲಿಂಗಿಯ ಸ್ಥಿತಿಯನ್ನು ಹೊಂದುವದು ಶಕ್ಯವೆಂಬ ವಿವರವನ್ನು ವಚನಕಾರನು ಇಲ್ಲಿ ಹೇಳಿದ್ದಾನೆ. ಯಾಕೆಂದರೆ ಗುಳ್ಳಿಯು ಸಮುದ್ರದಲ್ಲಿಯೇ ಹುಟ್ಟಿ ಕಡೆಗೆ ಸಮುದ್ರದಲ್ಲಿಯೇ ಅಡಗುತ್ತದೆ. ಅದೇ ಮೇರೆಗೆ ಮನುಷ್ಯನು ಪರಮಾತ್ಮನೆಂಬ ಅಂಬುಧಿಯಲ್ಲಿ ಹುಟ್ಟಿ ಅಲ್ಲಿಯೇ ಅವನು ಅಡಗತಕ್ಕವನಾಗಿರುವನು. ಇದರ ಹೊರ್ತು ಅವನಿಗೆ ಬೇರೆ ಗತ್ಯಂತರವಿಲ್ಲ. ಆದರೆ ಹೀಗೆ ಅಡಗುವ ಕಾಲಕ್ಕೆ ಅವನ ಹೊರಗಿನ ತೋರಿಕೆಯ ಶರೀರವು ಹೊರಟುಹೋಗಬಹುದು. ಆದರೆ ಶಾಶ್ವತವಾದ ಪ್ರಾಣವು ಮಾತ್ರ ಲಿಂಗದಲ್ಲಿಯೇ ಅಡಗತಕ್ಕದ್ದೇ ಹೊರ್ತು ಅದಕ್ಕೆ ಬೇರೆ ಗತಿ ಇಲ್ಲ. ಈ ಸ್ಥಿತಿಯು ಬರುವದಕ್ಕೆ ಅವನಿಗೆ ಅವನ ಕರ್ಮಗಳ ಪ್ರಕಾರ ಅನೇಕ ಜನ್ಮಗಳು ಪ್ರಾಪ್ತವಾಗಬಹುದು. ಆದರೆ ಎಂದು ಅವನಿಗೆ ಪ್ರಾಣಲಿಂಗಿಯ ಸ್ಥಿತಿಯು ಪ್ರಾಪ್ತವಾಗುವದೋ ಅಂದು ಅವನು ಪರಮಾತ್ಮನಲ್ಲಿ ಲೀನವಾಗುವದು ನಿಶ್ಚಯವು.

**೧೧೫. ಒಡಲುಗೊಂಡವ ಹಸಿವ. ಒಡಲುಗೊಂಡವ ಹುಸಿವ. ಒಡಲುಗೊಂಡವನೆಂದು ನೀ ನೆನ್ನ ಜಡಿದೊಮ್ಮೆ ನುಡಿಯದಿರಾ. ನೀನೆನ್ನಂತೊಮ್ಮೆ ಒಡಲುಗೊಂಡು ನೋಡಾ ರಾಮನಾಥಾ?**

ಆದರೆ ವಚನ ೧೧೨ರಿಂದ ೧೧೪ನೆಯ ವಚನಗಳಲ್ಲಿಯ ಸ್ಥಿತಿಯು ಬರಬೇಕಾದರೆ ಪರಮಾತ್ಮನ ಕಾರುಣ್ಯವು ಅವಶ್ಯವಾಗಿ ಬೇಕಾಗುತ್ತದೆ. ಯಾಕೆಂದರೆ ಮನುಷ್ಯನು ಯಾವಾಗಲೂ ತಪ್ಪು ಮಾಡುವದುಂಟು.

ಆದ್ದರಿಂದ ಹಾಗೆ ತಪ್ಪು ಮಾಡಿದರೂ ಕೂಡ ತನ್ನನ್ನು ಕ್ಷಮಿಸಿ ತನಗೆ ಶ್ರೇಷ್ಠವಾದ ಸ್ಥಿತಿಯನ್ನು ಕೊಡಬೇಕೆಂದು ದೇವರ ದಾಸಿಮಯ್ಯನು ಪರಮಾತ್ಮನನ್ನು ಇಲ್ಲಿ ಬೇಡಿಕೊಳ್ಳುತ್ತಲಿದ್ದಾನೆ.

---



## ಶರಣಸ್ಥಲ.

ಶರಣನು ಲಿಂಗಾನುಭಾವಿಯಾಗಿರತಕ್ಕದ್ದು. ಅವನು ಕೇವಲ ಜ್ಞಾನಿಯಾಗಿರುವನು. ಈ ಅವನ ಜ್ಞಾನವು ಅವನ ಕ್ರಿಯೆಗಳಲ್ಲಿ ಹೊರ ಸೂಸುತ್ತಲಿರುತ್ತದೆ. ಇಂಥವನಲ್ಲಿ ಲಿಂಗ ಭಾವವು ಅತ್ಯಂತ ದೃಢತರ ಸ್ಥಿತಿಯಲ್ಲಿರುತ್ತದೆ. ಶರಣನು ಅಚಲಿತನು, ಸ್ವತಂತ್ರನು. ಈ ಸ್ಥಲದಲ್ಲಿ ಇವನ ಮನಸ್ಸು ಯಾವ ತರದ ಸಂಚಲಕ್ಕೊಳಗಾಗದೆ ಕೇವಲ ಲಿಂಗಾಚಾರದಲ್ಲಿ ಮಗ್ನವಾಗಿರುತ್ತದೆ. ಇಂಥವನನ್ನು ಸಂಸಾರದ ಬಂಧನಗಳು ಬಂಧಿಸಲಾರವು. ಅವನ ಕ್ರಿಯೆಗಳು ಪರಿಣಾಮ ರಹಿತವಾಗಿರುತ್ತವೆ. ಅಂದರೆ ಅವು ಅವನನ್ನು ಭವ ಬಂಧನಕ್ಕೆ ಎಳೆಯಲಾರವು. ಇದೇ ಜಂಗಮ ಸ್ಥಲವು. ಈ ರೀತಿಯಾಗಿ ದೇವರ ದಾಸಿಮಯ್ಯನು ಶರಣ ಸ್ಥಲವನ್ನು ವಿವರಿಸಿ, ಕೇವಲ ವೇಷಧಾರಿಗಳಾಗಿ ವರ್ತಿಸುತ್ತಿರುವ ಜಂಗಮರನ್ನು ಬಹಳ ಇಲ್ಲಿ ಹಳಿದಿದ್ದಾನೆ.

ಇಲ್ಲಿ ವಚನಕಾರನು ಮೊದಲು ಕ್ರಿಯೆ ಮತ್ತು ಜ್ಞಾನ ಇವುಗಳ ಪರಸ್ಪರ ಸಂಬಂಧವನ್ನು ಹೇಳಿದ್ದಾನೆ.

### ಕ್ರಿಯೆ ಮತ್ತು ಜ್ಞಾನ.

**೧೧೬. ಘಟವನೊಡದು ಬಯಲ ನೋಡಲದೇಕೆ? ಆ ಘಟದೊಳಗಿಪ್ಪುದೇ ಬಯಲೆಂದರಿದಡೆ ಸಾಲದೇ? ಪಟವ ಹರಿದು ತಂತುವ ನೋಡಲದೇಕೆ? ಆ ಪಟವೇ ತಂತುವೆಂದರಿದಡೆ ಸಾಲದೇ? ಕಟಕವ ಮುರಿದು ಕಾಂಚನವ ನೋಡಲದೇಕೆ? ಆ ಕಟಕವೇ ಕಾಂಚನವೆಂದರಿದಡೆ ಸಾಲದೇ? ತನ್ನನಳಿದು ಘನವ ನೋಡಲದೇಕೆ? ತಾನೆ ಘನವೆಂದರಿದಡೆ ಸಾಲದೇ ಹೇಳಾ ರಾಮನಾಥಾ?**

ಘಟ = ಗಡಿಗೆ; ಪಟ = ಅರಿವೆ; ಕಟಕ = ಆಭರಣ;

ಜಗತ್ತಿನಲ್ಲಿ ನಾನಾ ಸ್ವರೂಪವುಳ್ಳ ವಸ್ತುಗಳಿರುತ್ತವೆ. ಆದರೆ ಅವುಗಳಿಗೆಲ್ಲ ಮೂಲನಾಗಿರುವನು ಪರಮಾತ್ಮನೊಬ್ಬನೇ ಇರುತ್ತಾನೆ. ಅವನು

ಹೀಗೆ ಒಬ್ಬನಾಗಿದ್ದರೂ ಜಗತ್ತಿನಲ್ಲಿಯ ನಾನಾ ಬಗೆಯ ಪದಾರ್ಥಗಳಲ್ಲಿದ್ದುಕೊಂಡು ನಾನಾ ತರದ ಸ್ವರೂಪಗಳನ್ನು ಹೊಂದಿರುತ್ತಾನೆ. ಹ್ಯಾಗೆಒಂದೇ ಕಾಂಚನನೆಂಬ ಪದಾರ್ಥದಿಂದ ಬಗೆ ಬಗೆಯ ಆಭರಣಗಳು ಆಗುತ್ತವೋ, ಹ್ಯಾಗೆ ಒಂದೇ ಆದ ಬಯಲು, ಗಡಿಗೆ ಹಂಡೆ ಮೊದಲಾದ ಆಕಾರಗಳುಳ್ಳ ಪದಾರ್ಥಗಳಲ್ಲಿ ಕೂಡಿಕೊಂಡು ಅವವುಗಳ ಆಕಾರಗಳಂತೆ ಸಣ್ಣ ದೊಡ್ಡದಾಗುತ್ತದೋ, ಹ್ಯಾಗೆ ಒಂದೇ ತಂತುವಿನಿಂದ ನಾನಾ ಬಗೆಯ ಬಟ್ಟೆಗಳಾಗುತ್ತವೋ, ಹಾಗೆಯೇ ಒಂದೇ ಪರಬ್ರಹ್ಮ ವಸ್ತುವಿನಿಂದ ನಾನಾ ವಿಧ ಪದಾರ್ಥಗಳು ಜಗತ್ತಿನಲ್ಲಿ ಆಗಿರುತ್ತವೆ. ಆದರೆ ಕಾಂಚನವನ್ನು ಅರಿಯಬೇಕೆಂದು ಆಭರಣವನ್ನು ಮುರಿಯುವ ಅವಶ್ಯವಿಲ್ಲ. ಅದು ಬಂಗಾರವೆಂದು ತಿಳಿದರೆ ಸಾಕು. ಅಥವಾ ಬಯಲಿನ ಸ್ವರೂಪವನ್ನು ನೋಡಬೇಕೆಂದು ಪಾತ್ರೆಗಳನ್ನು ಒಡೆದು ಹಾಕುವ ಅವಶ್ಯವಿಲ್ಲ. ಅದರಲ್ಲಿರುವದು ಬಯಲೆಂದು ತಿಳಿದರೆ ಸಾಕು. ಅಥವಾ ಅರಿವೆಯ ಸ್ವರೂಪವನ್ನು ಅರಿಯಬೇಕೆಂದು ಆ ಅರಿವೆಯನ್ನೇ ಹರಿದು ಹಾಕುವ ಅವಶ್ಯವಿಲ್ಲ. ಅದು ತಂತುವೆಂದು ತಿಳಿದರೆ ಸಾಕು. ಅದೇ ಮೇರೆಗೆ ತನ್ನನ್ನು ಅರಿಯಬೇಕಾದರೆ ತನ್ನನ್ನು ನಾಶ ಮಾಡಿಕೊಳ್ಳುವ ಅವಶ್ಯವಿಲ್ಲ. ತಾನೇ ಪರಬ್ರಹ್ಮವಸ್ತುವೆಂದು ತಿಳಿದರೆ ಸಾಕು. ಹೀಗೆ ತಿಳಿಯುವದು ಶಕ್ಯವಿರುತ್ತದೆಂದು ವಚನಕಾರನ ಮುಖ್ಯ ಅಭಿಪ್ರಾಯವು. ಅಂದರೆ ಜಗತ್ತಿನಲ್ಲಿ ನಾನಾ ವಿಧತ್ವವು ಕಂಡು ಬಂದರೂ ಅವುಗಳಲ್ಲಿ ಪರಮಾತ್ಮನ ಕಳೆಯೊಂದೇ ಇರುತ್ತದೆ. ಈ ಕಳೆಯ ಮೂಲಕ ಪದಾರ್ಥಗಳ ನಿಜ ಗುಣಗಳು ಅವುಗಳೊಳಗಿಂದ ಪ್ರಕಟವಾಗುತ್ತವೆ. ಅವುಗಳ ತಿಳಿವಿನಿಂದಲೇ ಪರಮಾತ್ಮನಲ್ಲಿ ಸ್ವರೂಪವನ್ನು ಅರಿಯಬಹುದಾಗಿದೆ ಸೃಷ್ಟಿಯಲ್ಲಿ ಅದ್ಭುತ ಚಮತ್ಕಾರಗಳು ತುಂಬಿಕೊಂಡಿರುತ್ತವೆ. ಅವು ಪರಮಾತ್ಮನ ನಿಜತ್ವವನ್ನೇ ನಿದರ್ಶನಕ್ಕೆ ತಂದು ಕೊಡುತ್ತವೆ. ಅವು ತ್ಯಾಜವಲ್ಲ. ಜಗತ್ತೆಂದರೆ ಒಂದು ಸುಂದರವಾದವಸ್ತುವು. ಅದರ ಸೌಂದರ್ಯದ ಅರಿವೇ ಪರಮಾತ್ಮನ ಅರಿವು. ಆದ್ದರಿಂದ ತನ್ನನ್ನು ನಷ್ಟಗೊಳಿಸಿಕೊಂಡು ಪರಮಾತ್ಮನನ್ನು ಅರಿಯಬೇಕೆಂಬದು ದೇವರ ದಾಸಿಮಯ್ಯನ ಮತವಲ್ಲ.

**೧೧೭. ಮಾಡಿದಲ್ಲದೆ ಮನೆಯೊಳಗಾಗದು ಬಯಲು. ಕಣ್ಣು ಕಂಡಲ್ಲದೆ ರೂಪೆಂದು ನಿಶ್ಚೈಸದು ಮನ. ಪಥವೆಂದಲ್ಲದೆ ಪರವಾಗದು. ಈ ಪರಿಯ ನರರೆತ್ತ ಬಲ್ಲರೈ ರಾಮನಾಥಾ?**



ಆದರೆ ಈ ಅರಿವು ಕೈಸಾರ ಬೇಕಾದರೆ ಕ್ರಿಯೆಯು ಅವಶ್ಯವಾಗಿರುತ್ತಿದೆ. ಮನೆಯನ್ನು ಶ್ರಮಬಟ್ಟು ಮಾಡಿದ ಬಳಿಕ ಮಾತ್ರ, ಬಯಲು ಆ ಸ್ವರೂಪವನ್ನು ಹೊಂದುತ್ತದೆ. ಕಣ್ಣಿನಲ್ಲಿ ಪದಾರ್ಥಗಳನ್ನು ಅರಿಯುವ ಶಕ್ತಿ ಇರುವದೆಂಬುದು ನಿಜವು. ಆದರೆ ಆ ಕಣ್ಣನ್ನು ತೆರೆದು ಪದಾರ್ಥದ ಕಡೆಗೆ ಹೊರಳಿಸದ ಹೊರ್ತು ಅದು ಆ ಪದಾರ್ಥವನ್ನು ತಿಳಿಯುವ ಬಗೆ ಹೇಗೆ? ಅದೇ ಮೇರೆಗೆ ಪರಮಾತ್ಮನನ್ನು ತಿಳಿಯುವ ಮಾರ್ಗವನ್ನು ಅರಿದು ಅದರಂತೆ ಆಚರಿಸಿದರೆ ಮಾತ್ರ ಅವನಿಗೆ ಜ್ಞಾನವಾದೀತೇ ಹೊರ್ತು ಕೇವಲ ತಿಳುವಳಿಕೆ ಇದ್ದ ಮಾತ್ರದಿಂದ ಪರವಸ್ತುವು ಸಾಧ್ಯವಾಗಲಾರದು.

**೧೧೮. ಅಗ್ನಿ ಸುಡಲಲ್ಲದೆ ಸುಳಿಯಲರಿಯದು. ವಾಯು ಸುಳಿವುದಲ್ಲದೆ, ಸುಡಲರಿಯದು. ಆ ಅಗ್ನಿ ವಾಯು ಕೂಡಿದಲ್ಲದೆ ಅಡಿ ಇಡಲರಿಯದು. ಈ ಪರಿಯಂತೆ ನರರರಿವರೆ ಕ್ರಿಯಾಜ್ಞಾನ ಭೇದವ ರಾಮನಾಥಾ.**

ಕ್ರಿಯೆ ಮತ್ತು ಜ್ಞಾನ ಇವುಗಳಲ್ಲಿ ಪರಸ್ಪರ ನಿಕಟ ಸಂಬಂಧವಿರುತ್ತದೆ. ಒಂದನ್ನು ಬಿಟ್ಟು ಒಂದು ವ್ಯವಹರಿಸಲರಿಯದು. ಇದಕ್ಕೆ ದೇವರ ದಾಸಿಮಯ್ಯನು ಒಂದು ಸುಂದರವಾದ ಉದಾಹರಣೆಯನ್ನು ಇಲ್ಲಿ ಕೊಟ್ಟಿದ್ದಾನೆ. ಅಗ್ನಿಯ ಗುಣವು ಸುಡುವದೊಂದೇ ಇರುತ್ತದೆ. ಆದರೆ ಅದಕ್ಕೆ ಮುಂದಕ್ಕೆ ಚರಿಸುವ ಶಕ್ತಿಯು ಇರುವದಿಲ್ಲ. ವಾಯುವಿಗೆ ಚಲನಾಶಕ್ತಿಯೊಂದೇ ಇದೆ. ಆದರೆ ಅದಕ್ಕೆ ಸುಡುವಗುಣವಿಲ್ಲ. ಆದ್ದರಿಂದ ಇವೆರಡೂ ಪದಾರ್ಥಗಳು ಕೂಡದ ವಿನಹಾ ಸುಡುವ ಕಾರ್ಯವು ಆಗಲಾರದು. ಅದೇ ಮೇರೆಗೆ ಕ್ರಿಯೆ ಮತ್ತು ಜ್ಞಾನ ಇವೆರಡೂ ಕೂಡಿದಾಗ್ಗೆ ಮಾತ್ರ ತಿಳಿಯುವ ಕಾರ್ಯವಾಗುವದೇ ಹೊರ್ತು ಅದು ಬರೇ ಒಂದರಿಂದಾಗದು. ಅವು ಪರಸ್ಪರಾವಲಂಬಿಗಳೆಂದು ವಚನಕಾರನ ಭಾವವು.

೧೧೯. ಸಣ್ಣ ಸನೆಯೊಳಗಣ ಪರಿಮಳವ ಹೊರ ಸೂಸಿ ಇದಿರಿಂಗರುಹಿಸಬಲ್ಲುದೇ ವಾಯು? ಕೊಡ ಗೂಸಿನೊಳಗಣ ಮೊಲೆಮುಡಿಯ ಹಡೆದ ತಾಯಿ ತಂದೆಗಳೆಂದರೆ ಕಾಣಿಸಿಕೊಡಬಲ್ಲರೇ ಕಾಂಬವರ ಕಣ್ಣಿಂಗೆ? ಪಕ್ವಕ್ಕಲ್ಲದೆ ಪರಿಣಾಮ ಕಾಣಿಸದು ಕಾಣಾ ರಾಮನಾಥಾ.

ಸನೆ = ಮೊಗ್ಗು

ಕ್ರಿಯಾ ಜ್ಞಾನದ ಮೇಲ್ಪಂಕ್ತಿ ಭೇದವನ್ನು ಅರಿತು, ಅದರಂತೆ ಶರಣನು ಆಚರಿಸುತ್ತ ಹೋಗತಕ್ಕದ್ದು. ಹೀಗೆ ಅವನು ಆಚರಿಸುತ್ತ ಹೋದಹಾಗೆ ಅವೆರಡೂ ಪಕ್ವಸ್ಥಿತಿಗೆ ಬರುವವು. ಆಗ್ಗೆ ಅವನಿಗೆ ನಿಜವಾದ ಲಿಂಗ ಸುಖವು ತಲೆದೋರುವದು. ಅಲ್ಲಿಯವರೆಗೆ ಅವನು ಜ್ಞಾನ ಕ್ರಿಯೆಗಳನ್ನು ಮಾಡುತ್ತ ಹೋಗಬೇಕು. ಇದಕ್ಕೆ ವಚನಕಾರನು ಕೆಲವು ಉದಾಹರಣೆಗಳನ್ನು ಕೊಟ್ಟಿದ್ದಾನೆ. ಏನೆಂದರೆ, ಹ್ಯಾಗೆ ಒಂದು ಮೊಗ್ಗೆಯಲ್ಲಿ ಸುಗಂಧವು ತಲೆದೋರಬೇಕಾದರೆ, ಅದು ಪಕ್ವ ಸ್ಥಿತಿಗೆ ಬಂದ ಬಳಿಕ ಅದು ತಲೆದೋರುವದೋ, ಅಥವಾ ಒಬ್ಬ ಕನ್ನಿಕೆಯ ಸ್ತನಗಳೂ ಮುಡಿಯೂ ಹೊರಬೀಳಬೇಕಾದರೆ ಆಕೆಯು ಪೂರ್ಣಾವಸ್ಥೆಗೆ ಬಾರದ ವಿನಹಾ ಅವು ಆಗುವದಿಲ್ಲವೋ, ಹಾಗೆಯೇ ಭಕ್ತನಲ್ಲಿ ಲಿಂಗ ಗುಣಗಳಿದ್ದರೂ ಕೂಡ ತನ್ನ ಆಚರಣೆಯಿಂದ ಪಕ್ವ ಸ್ಥಿತಿಗೆ ಅವುಗಳನ್ನು ತರದ ವಿನಹಾ ಅವು ಪ್ರಕಟವಾಗಲಾರವೆಂದು ವಚನಕಾರನ ಅಭಿಪ್ರಾಯವು.

೧೨೦. ಚಿನ್ನದೊಳಗಣ ಬಣ್ಣವ ಆ ಚಿನ್ನ ತನ್ನ ತಾನರಿವುದೇ? ಕಬ್ಬು ಕೂಸ ಬಲ್ಲುದೇ ತನ್ನ ತಾನೇ? ಈ ಪರಿಯಂತೆ ನರರರಿವರೆ ಕ್ರಿಯಾಜ್ಞಾನ ಭೇದವ ನಾಥಾ?

ಈ ವಚನದಲ್ಲಿ ಐಕ್ಯಸ್ಥಿತಿಗೆ ಬಾರದ ಹೊರ್ತು, ಕ್ರಿಯಾಜ್ಞಾನದ ಮರ್ಮವು ಗೊತ್ತಾಗದೆಂದು ವಚನಕಾರನು ಹೇಳಿದ್ದಾನೆ. ಕೂಸು



ಕಬ್ಬಿನ ರಸವನ್ನು ಆಸ್ವಾದಿಸಬಹುದು. ಆದರೆ ಅದರ ಜ್ಞಾನವು ಅಪೂರ್ಣವಾಗಿರುವದರಿಂದ ಅದರ ನೆಲೆ ಕಲೆಯನ್ನು ಅದು ತಿಳಿಯುವದು ಅಸಾಧ್ಯವು. ಅದೇ ಮೇರೆಗೆ ಚಿನ್ನದಲ್ಲಿ ಬಣ್ಣವು ಇದ್ದರೂ ಆ ಚಿನ್ನವು ತನ್ನ ಬಣ್ಣದ ಜ್ಞಾನವನ್ನು ಅರಿಯದು. ಅದೇ ಮೇರೆಗೆ ಪಕ್ವಸ್ಥಿತಿಯು ಬರುವವರೆಗೆ ಜ್ಞಾನವೆಂಬುದು ಪದಾರ್ಥಗಳಲ್ಲಿ ಹುದುಗಿ ಕೊಂಡಿದ್ದರೂ ಕೂಡ ಸಂಪೂರ್ಣ ಪ್ರಗತಿಯಾಗದ ವಿನಹಾ ಅವೆರಡೂ ಸಮಭಾವದಿಂದ ಏಕೀಭವಿಸಲಾರವೆಂದು ವಚನಕಾರನ ಅಭಿಪ್ರಾಯವು.

೧೨೧. ತನ್ನೊಳಗಣ ಅರಿವು ತನ್ನಲ್ಲಿ ತೋರಿದಲ್ಲದೆ ಅನ್ಯರಲ್ಲಿ ತೋರಬಲ್ಲುದೇ? ತನ್ನಲ್ಲಿ ತಾನೇ ಇದ್ದಂತೆ ಇದ್ದಿತ್ತು. ತನ್ನ ತಾನೇ ಪಕ್ವಕ್ಕೆ ಬಂದು ತನ್ನಲ್ಲಿ ಹುಟ್ಟಿದ ನೆನಹಿನ ಬಿನ್ನಾಣವನು ಏನೆಂಬೆನಯ್ಯ ರಾಮನಾಥಾ?

ಬಿನ್ನಾಣ = ಜ್ಞಾನರೀತಿ,

ಜ್ಞಾನವೆಂಬುವದು ತನ್ನಲ್ಲಿಯೇ ಹುಟ್ಟತಕ್ಕದ್ದು. ಅದಕ್ಕೆ ಎರಡನೆಯವರ ಸಂಬಂಧವಿಲ್ಲ. ಈ ಜ್ಞಾನವು, ಅದನ್ನು ಮನುಷ್ಯನು ಹ್ಯಾಗೆ ಇಟ್ಟುಕೊಳ್ಳುತ್ತಾನೋ ಹಾಗೆಯೇ ಅದು ಇರುತ್ತದೆ. ಅಂದರೆ ಬೆಳಸಿದರೆ ಬೆಳೆಯುತ್ತದೆ. ಬೆಳಸದಿದ್ದರೆ, ಬೆಳೆಯಲಾರದು. ಆದ್ದರಿಂದ ಅದೇ ಪಕ್ವವಾಗತಕ್ಕದ್ದು. ಅದು ಪಕ್ವವಾದ ಬಳಿಕ ಉಂಟಾದ ಆತ್ಮವಿಕಾಸದ ರೀತಿಯನ್ನು ನಾನು ಏನು ಹೇಳಲೆಂದು ವಚನಕಾರನು ಆಶ್ಚರ್ಯಚಕಿತನಾಗಿ ಅನ್ನುತ್ತಾನೆ.

## ಶರಣನ ಸ್ವರೂಪ.

೧೨. ಬಯಲ ಬಣ್ಣವ ಮಾಡಿ ಸ್ವಯವ ನಿಲವ ಮಾಡಿ ಸುಳಿವಾತನ ಬೆಡಗಬಲ್ಲವರಾರೈ ರಾಮನಾಥಾ?

ಸ್ವಯ = ತಾದಾತ್ಮ್ಯ ಭಾವ. ಬೆಡಗು = ಸೌಂದರ್ಯ.

ಇಲ್ಲಿ ವಚನಕಾರನು ಶರಣನ ರೀತಿಯನ್ನು ವಿವರಿಸಿದ್ದಾನೆ. ಅಂದರೆ ಯಾವ ಪರಬ್ರಹ್ಮವಸ್ತುವು ಅಗೋಚರವಾಗಿ ಬಯಲಸ್ವರೂಪದಿಂದ ತನ್ನಲ್ಲಿ ವಾಸಿಸುತ್ತದೋ ಅದನ್ನು ಅವನು ಪ್ರಕಟತರ ಸ್ವರೂಪಕ್ಕೆ ತಂದುಕೊಳ್ಳುತ್ತಾನೆ. ಮತ್ತು ಅದರಲ್ಲಿ ತಾನು ತಾದಾತ್ಮ್ಯ ಭಾವವುಳ್ಳವನಾಗಿ ಅದನ್ನು ತನ್ನಲ್ಲಿ ಸ್ಥಿರಪಡಿಸಿಕೊಳ್ಳುತ್ತಾನೆ. ಈ ಪ್ರಕಾರ ಅದನ್ನು ಸ್ಥಿರಪಡಿಸಿಕೊಂಡು ಲೋಕದಲ್ಲಿ ವ್ಯವಹರಿಸುತ್ತಾನೆ. ಇಂಥವನ ಸೌಂದರ್ಯವನ್ನು ಏನು ಹೇಳಲೆಂದು ದೇವರದಾಸಿಮಯ್ಯನು ಇಲ್ಲಿ ಹೇಳಿದ್ದಾನೆ.

**೧೨೩. ಬಿಂದುವಿನೊಳಗೆ ನಾದ ಹೊಂದಿರ್ದ ಭೇದವನು ಹೊಂದಿಯೂ ಹೊಂದದಿರ್ದ ಭೇದವನು ಲಿಂಗದೊಳಗೆ ಶರಣ ಸಂದಿರ್ದ ಭೇದವನು ಲೋಕದ ಸಂದೇಹಿಗಳೆತ್ತ ಬಲ್ಲರೈ ರಾಮನಾಥಾ?**

ಬಿಂದು ಇದು ಅಂಗಸ್ವರೂಪವುಳ್ಳದ್ದಾಗಿರುತ್ತದೆ. ಮತ್ತು ನಾದವು ಅವಕ್ಕೆ ಶಕ್ತಿಸ್ವರೂಪವಾಗಿರುತ್ತದೆ. ಈ ಶಕ್ತಿಯು ಬಿಂದುವಿನಲ್ಲಿ ಹ್ಯಾಗೆ ಕೂಡಿಕೊಂಡಿರುತ್ತದೆಂಬದನ್ನು ಶರಣನು ಅರಿತವನಾಗಿರುತ್ತಾನೆ. ಮತ್ತು ಈ ನಾದವು ಹೀಗೆ ಬಿಂದುವಿನಲ್ಲಿದ್ದರೂ ಕೂಡ ಅದು ಬಿಂದುವಿಗೆ ಸಂಬಂಧಪಡದಂತೆಯೇ ಇರುತ್ತದೆ. ಈ ತೆರದ ಸ್ಥಿತಿಇದ್ದರೂ ಕೂಡ ಶರಣನು ತನ್ನ ಆಚರಣೆಯಿಂದ ಈ ನಾದಸ್ವರೂಪವಾದ ಲಿಂಗವನ್ನು ತನ್ನಲ್ಲಿ ದೃಢಪಡಿಸಿಕೊಂಡು ಅದರೊಳಗೆ ಕೂಡಿಕೊಂಡಿರುತ್ತಾನೆ. ಈ ರೀತಿಯನ್ನು ಲೋಕದಲ್ಲಿಯ ಅಜ್ಞಾನಿಗಳು ಅರಿಯರೆಂದು ವಚನಕಾರನು ಇಲ್ಲಿ ನುಡಿದಿದ್ದಾನೆ. ಅಂದರೆ ಶರಣನು ಲಿಂಗರೂಪನಾಗಿರುತ್ತಾನೆಂದು ಈ ವಚನದ ಭಾವವು.

**೧೨೪. ಮೊಲೆಮುಡಿಬಂದರೆ ಹೆಣ್ಣೆಂಬರು. ಗಡ್ಡ ಮೀಸೆ ಬಂದರೆ ಗಂಡೆಂಬರು. ನಡುವೆ ಸುಳಿವಾತ್ಮನು ಗಂಡೂ ಅಲ್ಲ, ಹೆಣ್ಣೂ ಅಲ್ಲ ಕಾಣಾ ರಾಮನಾಥಾ.**

ಶರಣನು ಭವರಹಿತನಾಗಿರುತ್ತಾನೆ ಅವನು ಮಾಡುವ ಕ್ರಿಯೆಗಳು ಅವನನ್ನು ಮೋಕ್ಷಮಾರ್ಗಕ್ಕೆ ಎಳೆಯುತ್ತವೆ. ಅವನ ಕ್ರಿಯೆಗಳ



ಲ್ಲಿ ಫಲವಿಲ್ಲ. ಅವನು ಗಂಡೂ ಅಲ್ಲ. ಹೆಣ್ಣೂ ಅಲ್ಲ, ಅವನು ಮಧ್ಯವನಿರುತ್ತಾನೆ. ಅಂದರೆ ಅವನ ಕ್ರಿಯೆಗಳಿಂದ ಯಾವ ಉತ್ಪತ್ತಿಯು ಆಗುವದಿಲ್ಲ. ಉತ್ಪತ್ತಿಯನ್ನು ಮಾಡಬೇಕೆಂಬ ಆಶೆಯೂ ಅವನಲ್ಲಿ ಇರುವದಿಲ್ಲ. ಅವನು ನಿಷ್ಕಾಮಿಯಾಗಿರುತ್ತಾನೆ.

**೧೨೫. ಅಡವಿಯಂಗಡಿಯಕ್ಕು. ನಡುಗಡಲು ನೆಲೆಯಕ್ಕು. ತೊಡಕುವ ಮಾರಿಯ ಮೃತ್ಯು ಶಿವಭಕ್ತರೊಡಲು ನಿನ್ನೊಡಲೆಂದು ಮುಟ್ಟಲಮ್ಮವು ಕಾಣಾ ರಾಮನಾಥಾ.**

ಶಿವಶರಣನನ್ನು ಮೃತ್ಯುವು ಮುಟ್ಟಲಾರದೆಂದು ವಚನಕಾರನ ಭಾವವು. ಅಶಕ್ಯವಾದ ಅನೇಕ ಸಂಗತಿಗಳು ಈ ಜಗತ್ತಿನಲ್ಲಿ ಸಂಭವಿಸಬಹುದು. ಆದರೆ ಶರಣನು ಮಾತ್ರ ಸಾಯಲಾರನು. ಯಾಕಂದರೆ ಅವನ ಶರೀರವೆಂದರೆ ಪರಮಾತ್ಮನ ಶರೀರವೇ ಆಗಿರುತ್ತದೆ. ಒಂದು ವೇಳೆ ಪಟ್ಟಣವು ಅಡವಿಯಾಗಬಹುದು. ಸಮುದ್ರವು ನೆಲನಾಗಬಹುದು. ಆದರೆ ಶರಣನಿಗೆ ಮಾತ್ರ ಸಾವಿಲ್ಲ. ಅಂದರೆ ಅವನು ಯಾವಾಗಲೂ ಭವರಹಿತನಾಗಿ ವಾಸಿಸುತ್ತಾನೆಂದು ವಚನಕಾರನ ಅಭಿಪ್ರಾಯವು.

**೧೨೬. ಮಂಡೆಯ ಬೋಳಿಸಿಕೊಂಡು ನುಡಿದು ಗೋಷ್ಠಿಯ ಕಟ್ಟಿದಡೇನು? ಕಂಡಕಂಡವರಿಗೆ ಕೈಯ್ಯೊಡ್ಡಿ ಬೇಡುವ ಭಂಡರನೊಲ್ಲ ನಮ್ಮ ರಾಮನಾಥಾ.**

ಶರಣನು ಕೇವಲ ವೇಷಧಾರಿಯಲ್ಲ. ಅವನು ಕಂಡಕಂಡವರ ಕಡೆಗೆ ಹೋಗಿ ಏನಾದರೂ ಹೇಳಿ ಭಿಕ್ಷೆ ಬೇಡುವವನಲ್ಲ.

**೧೨೭. ವೇಷವ ಹೊತ್ತುಹಿರಿಯರು ಈಶ್ವರ ಧ್ಯಾನದಲ್ಲಿರಬೇಕು. ವೇಷವ ತೋರಿ ಗ್ರಾಸಕ್ಕಾಗಿ ಆಸೆಮಾಡಿ ಲೋಗರ ಮನೆಯ ಕಾಯ್ದು ಗ್ರಾಸವ ಪಡೆದು ಉದರವ ಹೊರೆವ ವೇಷವು ವೇಶಿಯಿಂದಲು ಕರಕಷ್ಟ ಕಾಣಾ ರಾಮನಾಥಾ.**

ಲೋಗರು = ಜನರು

ಜಂಗಮರು ಯಾವಾಗಲೂ ಈಶ್ವರಧ್ಯಾನದಲ್ಲಿರಬೇಕು. ಇದನ್ನು ಬಿಟ್ಟು ಕೂಳಿನ ಆಶೆಗಾಗಿ ಹೊಟ್ಟೆಹೊರೆದುಕೊಳ್ಳುವವರು ವೇಶ್ಯಾಸ್ತ್ರೀಯರಿಗಿಂತಲೂ ಕನಿಷ್ಟರೆಂದು ಅವರನ್ನು ಇಲ್ಲಿ ಹೀಯಾಳಿಸಿದ್ದಾನೆ.

೧೨೮. **ವೇಷವನು ವೇಶಿಯನು ಸರಿಯೆಂಬೆ. ವೇಷವು ಲೋಕವ ಹಾರುವದು. ವೇಶಿಯೂ ಲೋಕವ ಹಾರುವಳು. ವೇಷವ ಹೊತ್ತು ಲೋಕವ ಹಾರದಿದ್ದರೆ ಆತನು ಈಶ್ವರನೆಂಬೆ ಕಾಣಾ ರಾಮನಾಥಾ.**

ಹಾರು = ಇಚ್ಛೆಮಾಡು

ಜಂಗಮನು ವೇಷವನ್ನು ತೊಟ್ಟ ಬಳಿಕ ಜನರ ಪ್ರೀತಿಯನ್ನು ಸಂಪಾದಿಸಲು ಉದ್ಯುಕ್ತನಾಗಬಾರದು. ಹೀಗೆ ಅವನು ಮಾಡಿದ್ದಾದರೆ ಅವನು ವೇಶ್ಯಾಸ್ತ್ರೀಯಂತೆಯೇ ಸರಿ.

೧೨೯. **ವೇಷವ ಹೊತ್ತು ದೋಷದಲ್ಲಿ ನಡೆದಡೆ ದೋಷಕ್ಕೆ ವೇಷಭಾಂಡ. ಮೊದಲೇ ವೇಷವ ಕಂಡು ಲೇಸೆಂದು ಕೊಂಡಾಡುವ ದೋಷಿಗಳ ನರಕದಲ್ಲಿಕ್ಕುವ ಕಾಣಾ ರಾಮನಾಥಾ.**

ವಚನಕಾರನು ಇಲ್ಲಿ ವೇಷವನ್ನು ಕಂಡ ಕೂಡಲೇ ಅಂಥವರನ್ನು ನಂಬಬಾರದೆಂದು ಅಭಿಪ್ರಾಯ ಪಟ್ಟಿದ್ದಾನೆ. ವೇಷಧರಿಸಿದವರು ಉತ್ತಮರೆಂದು ಕೂಡಲೇ ಅವರನ್ನು ಹೊಗಳಬಾರದು. ಆದರೆ ವೇಷವನು ಧರಿಸಿದ ಬಳಿಕ ಜಂಗಮನು ಅದಕ್ಕೆ ಅನುಸಾರವಾಗಿ ನಡೆಯತಕ್ಕದ್ದು. ಅವನು ದೋಷಯುಕ್ತನಾಗಿ ನಡೆಯಬಾರದು. ನಡೆದದ್ದಾದರೆ ಆ ದೋಷಕ್ಕೆ ಆ ವೇಷವು ಆಶ್ರಯಸ್ಥಾನವಾಗಿ ಉಳಿಯುವದು. ಇದು ಅನುಚಿತವೆಂದು ವಚನಕಾರನ ಅಭಿಪ್ರಾಯವು.

೧೩೦. **ವೇಷದ ಕೂಡೆ ವಾಸಿಗೆ (?) ಹೊರುವವ ಈಶ್ವರ ದ್ರೋಹಿ. ವೇಷವ ಈಶ್ವರನೆಂದು ತಿಳಿದವ ಪಾಶಕ್ಕೆ ಸಿಕ್ಕಿದ ಪಶುವಿನಂತೆ ಕಾಣಾ ರಾಮನಾಥಾ.**



ಯಾವನು ಬರೇ ಹೊರವೇಷಕ್ಕೆ ಮರುಳಾಗಿ ಅವನಲ್ಲಿ ವಿಶ್ವಾಸವಿಡುತ್ತಾನೋ, ಅವನು ಪಾಶದಲ್ಲಿ ಬಂಧಿಸಲ್ಪಟ್ಟ ಪಶುವಿನಂತಿರುತ್ತಾನೆ.

೧೩೧ **ವೇಷಕಂಜುವೆ. ದೋಷಕ್ಕೆ ಹೇಸುವೆ ಈಶ್ವರನಾಗಿ ಎನ್ನ ಕಯ್ಯಲ್ಲಿ ಆರಾಧಿಸಿಕೊಳಲೊಲ್ಲದೆ ಹದಿನೆಂಟು ಜಾತಿಯ ಹೇಸಿಕೆಯ ಕೂಳ ತಿಂಬವರನೇನೆಂಬೆನಯ್ಯಾ ರಾಮನಾಥಾ?**

ಅನೇಕ ಜಂಗಮರು ವೇಷವನ್ನು ಧರಿಸಿಕೊಂಡು ದೋಷಿಗಳಾಗಿ ವರ್ತಿಸುತ್ತಾರೆ. ಇಂಥವರಿಗೆ ಅಂಜುತ್ತೇನೆಂದು ವಚನಕಾರನು ಅನ್ನುತ್ತಾನೆ. ಜಂಗಮನು ಈಶ್ವರ ರೂಪವನ್ನು ಧರಿಸಿದ ಬಳಿಕ ಭಕ್ತನಾದಂಥ ನನ್ನ ಕೈಯಲ್ಲಿ ಆರಾಧಿಸಿಕೊಳ್ಳಲೊಲ್ಲದೆ, ಅಧರ್ಮ ಕೃತ್ಯಗಳನ್ನು ಮಾಡುವಂಥ ನಾನಾಜಾತಿಯ ಜನರ ಕೆಟ್ಟ ಕೂಳನ್ನು ತಿನ್ನಲಿಕ್ಕೆ ಆಶೆ ಮಾಡಿ ಹೋಗುತ್ತಾರೆ. ಇಂಥವರಿಗೆ ನಾನು ಏನು ಹೇಳಲಿ ಎಂದು ದೇವರ ದಾಸಿಮಯ್ಯನು ಅನ್ನುತ್ತಾನೆ.

## ಐಕ್ಯಸ್ಥಲ.

ಹಿಂದಿನ ಐದು ಸ್ಥಲಗಳ ಮರ್ಮವನ್ನು ಭಕ್ತನು ತಿಳಿದುಕೊಂಡು ಆಚರಿಸಿದಲ್ಲಿ, ಕಡೆಯದಾದ ಐಕ್ಯ ಸ್ಥಲವು ಅವನಿಗೆ ಸಾಧ್ಯವಾಗುತ್ತದೆ. ಇದರ ವಿಷಯವನ್ನು ವಚನಕಾರನು ಇಲ್ಲಿ ಹೇಳಿದ್ದಾನೆ.

**೧೩೨. ಖಂಡಿತವಿಲ್ಲದ ಅಖಂಡಿತನೇ ನಿಮ್ಮ ಕಂಡವರುಂಟೇ ಹೇಳಯ್ಯ? ಕಂಡೆನೆಂಬವರೆಲ್ಲ ಬಂಜೆಯ ಮಕ್ಕಳು. ನಿನ್ನಿಂದ ಹಜ್ಜೆಯ ಕೆಳಗೆ ಒಂದು ಬಂದು ಹುಟ್ಟಿ ಬೆಳಗುವ ಚಂದವ ಕಂಡು ಕಣ್ದೆರೆದೆ ಕಾಣಾ ರಾಮನಾಥಾ.**

ವಚನಕಾರನು ಐಕ್ಯದ ರೀತಿಯನ್ನು ಇಲ್ಲಿ ಹೇಳಿದ್ದಾನೆ. ಅನೇಕರು ಪರಮಾತ್ಮನು ಮತ್ತು ತಾನು ಎಂಬ ಎರಡು ಬೇರೆ ಬೇರೆ ವಸ್ತುಗಳಿದ್ದು ಅವು ಒಂದನ್ನೊಂದು ಕೂಡುವದೇ ಐಕ್ಯವೆಂದು ಭಾವಿಸುವದುಂಟು. ಇದು ತಪ್ಪೆಂದು ವಚನಕಾರನ ಅಭಿಪ್ರಾಯವು. ಯಾಕಂದರೆ ಪರಮಾತ್ಮನು ಖಂಡಿತವಿಲ್ಲದಂಥ ಅಖಂಡಿತ ವಸ್ತುವಾಗಿದ್ದಾನೆ. ಅವನಿಂದ ಬಿಟ್ಟು ಜಗತ್ತೇ ಇಲ್ಲ. ಆದ್ದರಿಂದ ಅವನನ್ನು ನಾವು ಕಂಡೆವೆಂದೆನ್ನುವದು ಅಸಂಭವವು. ಬಂಜೆಗೆ ಮಕ್ಕಳಿದ್ದಾರೆಂದು ಹೇಳುವದು ಎಷ್ಟು ಅಸಂಭವವೋ ಅಷ್ಟೇ ಅಸಂಭವವು, ಎಂದು ವಚನಕಾರನು ಹೇಳಿ ಆತ್ಮವಿಕಾಸದ ರೀತಿಯನ್ನು ಒಂದು ವಿಧವಾಗಿ ಇಲ್ಲಿ ಹೇಳಿದ್ದಾನೆ. ಏನೆಂದರೆ, ಪರಮಾತ್ಮನ ಹೆಜ್ಜೆಯಲ್ಲಿಯೇ ಒಂದು ವಸ್ತುವು ಒಡಮೂಡಿಕೊಂಡು ಅದು ಅಲ್ಲಿಯೇ ಪ್ರಕಾಶಮಾನವಾಗುತ್ತಿದೆ. ಅದರ ಚಂದವನ್ನು ನಾನು ಕಂಡೆನೆಂದು ಹೇಳುತ್ತಾನೆ. ತಾನೆಂಬದರ ವಿಕಾಸವು ಪರಮಾತ್ಮನ ಅಡಿಯಲ್ಲಿಯೇ ಉತ್ಪನ್ನವಾಗುತ್ತದೆ. ಯಾಕಂದರೆ ಅವನು ತಾನು ಎಂಬ ಭೇದವಿಲ್ಲ.

**೧೩೩. ಆದಿ ಆರರ ಭೇದ ತನುಗುಣವು ಮೂವತ್ತಾರುಷ ಮೀರಿ, ತೋರದುದು ತೋರಿ, ಮತ್ತೆ ಆ ರೂಢವಾದರೆ ಮೇಲೆ ನಿನ್ನಿಚ್ಛೆ ಕಾಣಾ ರಾಮನಾಥಾ.**

ಗ್ರಂಥಾಲಯ ವಿಜಯಪುರ -586103.